ಸುಬ್ಬಣ್ಣ ಮತ್ತು ಸಂಧ್ಯಾರಾಗ
ಕಾದಂಬರಿಗಳ ತೌಲನಿಕ ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕರು :

ಕುಸುಮ ಗೀತಾ ಎಂ.ಪಿ.

ಮಾರ್ಗದರ್ಶಕರು :

ಪ್ರೊ॥ ಶಿವರಾಮು ಕಾಡನಕುಪ್ಪೆ

ಕರ್ನಾಟಕ ಸಂಘ (ರಿ). ಮಂಡ್ಯ
.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
೨೦೦೮-೦೯

ಸುಬ್ಬಣ್ಣ ಮತ್ತು ಸಂಧ್ಯಾರಾಗ ಕಾದಂಬರಿಗಳ ತೌಲನಿಕ ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕರು :
ಕುಸುಮ ಗೀತಾ ಎಂ.ಪಿ.

ಮಾರ್ಗದರ್ಶಕರು :
ಪ್ರೊ|| ಶಿವರಾಮುಕಾಡನಕುಪ್ಪೆ

ಕರ್ನಾಟಕ ಸಂಘ (ರಿ). ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
೨೦೦೮-೦೯

762

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮-೦೯ ನೇ ಸಾಲಿಗೆ ಕನ್ನಡ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋದನಾ ನಿಬಂಧ ರಚಿಸಲು **"ಸುಬ್ಬಣ್ಣ ಮತ್ತು ಸಂಧ್ಯಾರಾಗ ಕಾದಂಬರಿಗಳ ಅಧ್ಯಾಯ"** ವಿಷಯವನ್ನು ಆಯ್ಕೆ ಮಾಡಿಕೊಂಡು ಪ್ರೋ.ಶಿವರಾಮು ಕಾಡನಕುಪ್ಪೆ ಯವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯನಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 29-09-09

ಕುಸುಮ ಗೀತಾ ಎಂ.ಪಿ.

(ಕುಸುಮ ಗೀತಾ ಎಂ.ಪಿ.)
ಸಂಶೋಧಕ, ಕನ್ನಡ ವಿಭಾಗ
ಕರ್ನಾಟಕ ಸಂಘ (ರಿ) ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ- ಮಾನ್ಯತೆ ಪಡೆದಿದೆ.)

ಮಾರ್ಗದರ್ಶಕರ ಪ್ರಮಾಣ ಪತ್ರ

ಸುಬ್ಬಣ್ಣ ಮತ್ತು ಸಂಧ್ಯಾರಾಗ ಕಾದಂಬರಿಗಳ ತೌಲನಿಕ ಅಧ್ಯಯನ ಎಂಬ ಪ್ರಬಂಧವನ್ನು ಕನ್ನಡ ವಿಶ್ವ ವಿದ್ಯಾನಿಲಯದ ಎಂ.ಫಿಲ್ ಪದವಿಗಾಗಿ **ಕುಸುಮಗೀತಾ. ಎಂ.ಪಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ್ತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಡಿಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ : 29.09.2009

(ಪ್ರೊ. ಶಿವರಾಮ ಕಾಡನಕುಪ್ಪೆ)
ಪ್ರಾಚಾರ್ಯರು,
ವಿದ್ಯಾವರ್ಧಕ ಪ್ರಥಮ ದರ್ಜೆಕಾಲೇಜು
ಮೈಸೂರು.

'ಸುಬ್ಬಣ್ಣ ಮತ್ತು ಸಂಧ್ಯಾರಾಗ : ಕಾದಂಬರಿಗಳ ತೌಲನಿಕ ಅಧ್ಯಯನ'

ಪರಿವಿಡಿ

ಅಧ್ಯಾಯ –1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಒಂದು ವಿಶೇಷವಾದ ಸ್ಥಾನವಿದೆ. ಭಾಷೆ, ವಸ್ತು , ನಿರ್ವಹಣೆ ಹಾಗೂ ಅಭಿವ್ಯಕ್ತಿಯ ದೃಷ್ಟಿಯಿಂದ ಕನ್ನಡ ಸಾಹಿತ್ಯ ಅನ್ಯ ಭಾಷೆಗಳ ಸಾಹಿತ್ಯಕ್ಕೆ ಮಾದರಿಯಾಗಿ ಮೂಂಚೂಣಿಯಲ್ಲಿದೆ ಎಂಬುದು ಕೇವಲ ಅಭಿಮಾನದ ಮಾತಲ್ಲ.

ಸಾಹಿತ್ಯ ನಿಂತ ನೀರಲ್ಲ ಅದು ಹರಿಯುವ ಗಂಗೆಯಂತೆ, ಭಾರತದ ಸಂಸ್ಕೃತಿಯಲ್ಲಿ ಕಲೆಯೂ ಪ್ರಮುಖ ಸ್ಥಾನವನ್ನು ಪಡೆದಿದೆ. ಅದು ಒಬ್ಬೊಬ್ಬರಲ್ಲಿ ಒಂದೊಂದು ತರಹದ ಕಲೆಯಾಗಿ ಒಡಮೂಡಿರಬಹುದ್ದಾದರಿಂದ ಕಲೆಯ ಸ್ಥಾನ ಉತ್ತಮವಾದದು. ಈ ಕಲೆಯಲ್ಲಿ ಚಿತ್ರಕಲೆ ವಾಸ್ತುಶಿಲ್ಪ ಸಂಗೀತ, ಸಾಹಿತ್ಯ ಮುಂತಾದ ಪ್ರಕಾರಗಳಿವೆ ಅದರಲ್ಲಿ ಸಂಗೀತವು ಒಂದು ಈ ಸಂಗೀತದಲ್ಲಿ ವಾದನ ಕಲೆಯು, ಗಾಯನ ಕಲೆಯು ಮುಖ್ಯವಾಗಿದೆ.

ಸಂಗೀತ ಕಲೆಯನ್ನು ವಸ್ತುವಾಗಿಟ್ಟುಕೊಂಡು ಬರೆದಿರುವ ಅನೇಕ ಕಾದಂಬರಿಗಳನ್ನು ನೋಡಬಹುದಾಗಿದೆ. ಇಲ್ಲಿ ಹೆಸರಿಸಬಹುದಾದ ಕಾದಂಬರಿಗಳೆಂದರೆ 'ಉದಯರಾಗ' , 'ಸಂಧ್ಯಾರಾಗ', 'ದೀಪಾರಾಧನೆ ', 'ಹಂಸಗೀತೆ', 'ಸುಬ್ಬಣ್ಣ' ಮುಂತಾದವುಗಳು ಅದರಲ್ಲಿ "ಸಂಧ್ಯಾರಾಗ ಮತ್ತು "ಸುಬ್ಬಣ್ಣ" ಈ ಎರಡು ಕಾದಂಬರಿಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಈ ಕಾದಂಬರಿಗಳ ವಸ್ತು ಒಂದೇ ಆಗಿದೆ. ಆದರೆ ಅದನ್ನು ನೋಡಿರುವ ರೀತಿ ಬೇರೆಯೇ ಆಗಿದೆ. ಹಾಗೆಯೇ ಕಥೆ ಕಾದಂಬರಿಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿರುವಂತಹ ಈ ಕಾಲದಲ್ಲೂ ಕೂಡ ಈ ಕಾದಂಬರಿಗಳು ಓದುಗರನ್ನು ಗಳಿಸಿಕೊಂಡಿರುವುದು ಒಂದು ಪ್ರಮುಖ ಬೆಳವಣಿಗೆಯಾಗಿದೆ. ಈ ನಿಟ್ಟಿನಲ್ಲಿ ಮಾಸ್ತಿ ಮತ್ತು ಅ.ನ.ಕೃ ಅವರ ಸುಬ್ಬಣ್ಣ ಮತ್ತು ಸಂಧ್ಯಾರಾಗ ಕಾದಂಬರಿಗಳು ಗಮನಾರ್ಹವಾಗಿವೆ.

ಮಾಸ್ತಿಯವರನ್ನು ಕನ್ನಡದ ಆಸ್ತಿ ಎಂದು ಕರೆಯಲಾಗುತ್ತದೆ. ಅವರ ಕಥೆಗಳ ಚಿತ್ರಣ ರಸವತ್ತಾದ ಪಾಕದಿಂದ ನಿರ್ಮಾಣಗೂಂಡದ್ದಾಗಿರುತ್ತದೆ. ಇಲ್ಲಿ ವಿಕಾರಕ್ಕೆ ಎಡೆಯೇ ಇಲ್ಲ.

ಆದ್ದರಿಂದ ಅವರು ವಿಕೃತಿಯ ಸೃಷ್ಟಿಕರ್ತರಾಗಿ ಎಂದೂ ಕಾಣಿಸಿಕೊಂಡದ್ದಿಲ್ಲ. ಅವರ ಕಥೆಗಳಲ್ಲಿ ಮನಕಲಕುವ ಭಾವನೆ ಹಾದುಹೋಗುವುದನ್ನು ಕಂಡಾಗ ಕಣ್ಣಂಚಿನಲ್ಲಿ ನೀರು ಜಿನುಗಿದರು ಅದನ್ನು ಸಹಜವೆಂದೇ ತಿಳಿಯ ಬೇಕಾಗುತ್ತದೆ.

ಮಾಸ್ತಿಯವರಂತೆ ಅ.ನ.ಕೃ ಸಹ ಜನಪ್ರಿಯ ಸಾಹಿತಿ. ಅ.ನ.ಕೃ ಅವರಿಂದ ಕನ್ನಡ ಕಾದಂಬರಿ ಸಾಹಿತ್ಯ ಜನಪ್ರಿಯವಾಯಿತು. ಅವರ ದೆಸೆಯಿಂದ ಹಲವಾರು ಯುವ ಲೇಖಕರು ಉತ್ತಮ ಕತೆಗಾರರಾದರು, ಕಾದಂಬರಿಕಾರರಾದರು ಅನೇಕ ಕಲಾವಿದರು – ಚಿತ್ರಕಾರರು, ಸಂಗೀತಗಾರರು, ಬೆಳಕಿಗೆ ಬಂದರು. ಹೀಗಾಗಿ ಇವರು ಕನ್ನಡ ಕಾದಂಬರಿಯುಗಪ್ರವರ್ತಕರಲ್ಲಿ ಮುಖ್ಯರಾದರು. ಕನ್ನಡದಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸಿದ ಬಹುಪಾಲು ಕೀರ್ತಿ ಅ.ನ.ಕೃ ಅವರಿಗೆ ಸಲ್ಲಬೇಕು. "ನೂರು ಜನ ನೂರು ತರ, ಒಂದೊಂದು ಒಂದು ತರ" ಎನ್ನುವ ಜೀವನದ ವೈವಿಧ್ಯ ವೈಖರಿಯನ್ನು ಓದುಗರಿಗೆ ಅ.ನ.ಕೃ ಕಾದಂಬರಿಗಳು ವಿಪುಲ ಸಾಮಾಗ್ರಿಗಳನ್ನು ಒದಗಿಸುತ್ತವೆ.

'ಸಂಧ್ಯಾರಾಗ' ಮತ್ತು ಸುಬ್ಬಣ್ಣ' ಎರಡೂ ಕಾದಂಬರಿಗಳ ನಾಯಕ ಪಾತ್ರಗಳಾದ 'ಲಕ್ಷ್ಮಣ' ಮತ್ತು 'ಸುಬ್ಬಣ್ಣ' ರಲ್ಲಿ ಹೋಲಿಕೆ ವ್ಯತ್ಯಾಸಗಳು ಸಮ್ಮಿಶ್ರವಾಗಿವೆ. ಪಾತ್ರಗಳಲ್ಲಿನ ಇಂತಹ ವ್ಯತ್ಯಾಸದ ಆಗಾಧತೆ ಒಂದೇ ವಿಷಯವನ್ನು ವಿವರಿಸಲು ಹೇಗೆ ದುಡಿದಿದೆ ಎಂಬುದನ್ನು ಅರಿತುಕೊಳ್ಳುವ ಅಧ್ಯಮ ಬಯಕೆಯೇ ಈ ತೌಲನಿಕ ಅಧ್ಯಯನಕ್ಕೆ ಮುಖ್ಯ ಕಾರಣವಾಗಿ ಪರಿಣಮಿಸಿದೆ.

ಎರಡೂ ಕಾದಂಬರಿಗಳು ಕಲೆ ಮತ್ತು ಕಲಾವಿದನನ್ನು ವಸ್ತುವಾಗಿ ಹೊಂದಿರುವುದರಿಂದ ಈ ಎರಡೂ ಕಾದಂಬರಿಗಳನ್ನು ಅಧ್ಯಯನಕ್ಕೆಂದು ತೆಗೆದುಕೊಳ್ಳಲಾಗಿದೆ. ಎರಡೂ ಭಿನ್ನ ವ್ಯಕ್ತಿತ್ವದಿಂದ ರೂಪ ತಳೆದಿರುವ ಈ ಎರಡೂ ಕೃತಿಗಳಲ್ಲಿನ ಬೌದ್ಧಿಕತೆ, ವೈಚಾರಿಕತೆ ಅವುಗಳ ಮಟ್ಟ ಕೃತಿಯಲ್ಲಿ ಹೇಗೆ ಪಡಿಮೂಡಿದೆ ಎಂಬುದನ್ನು ಸಹ ಅಧ್ಯಯದಲ್ಲಿ ಚರ್ಚಿಸಲಾಗುವುದು.

ಕಥೆ ಒಬ್ಬ ಕಲಾವಿದನದೇ ಆದರು ಮಾಸ್ತಿಯವರು ಅದನ್ನು ನೋಡಿರುವ ರೀತಿ ಬೇರೆಯಾಗಿದೆ. ಇವರ ಈ ಕಥೆ ಜೀವನ ಮತ್ತು ಕಲೆಗಳ ಸಂಬಂಧದ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತದೆ. ಈ ಸಂಬಂಧ ಅನ್ಯೋನ್ಯವಾದದು ಎನ್ನುವುದರ ಬಗ್ಗೆ ಎರಡೂ ಮಾತಿಲ್ಲ ಈ ನಿಟ್ಟಿನಲ್ಲಿ ಮಾಸ್ತಿಯವರ ಈ ಕಾದಂಬರಿಯು ವಿಶೇಷವಾಗಿ ಮೂಡಿಬಂದಿರುವುದನ್ನು ನೋಡಬಹುದಾಗಿದೆ.

ಇನ್ನು ಅ.ನ.ಕೃ ಅವರ "ಸಂಧ್ಯಾರಾಗ" ಕಾದಂಬರಿಯೂ ಕೂಡ ಕಲಾವಿದನನ್ನು ಕುರಿತು ಬರೆದಿರುವ ಕಾದಂಬರಿಯಾಗಿದೆ. ಈ ಕಾದಂಬರಿಯನ್ನು ಅ.ನ.ಕೃ ನೋಡಿರುವ ರೀತಿ ಬೇರೆಯಾಗಿದೆ. ಕಲಾವಿದ ಮತ್ತು ಅವನ ಜಗತ್ತು ವಿಸ್ತೃತ ರೂಪದಲ್ಲಿ ಕಾದಂಬರಿಯ ವಸ್ತುವಾಗಿ ಬಳಕೆಯಾಗಿದೆ. 'ಸಂಧ್ಯಾರಾಗ' ಇಂದಿಗೂ ಕೂಡ ಸುಮಾರು ಜನ ಓದುಗರನ್ನು ಪಡೆದುಕೊಂಡಿರುವ ಯಶಸ್ವೀ ಕೃತಿಯಾಗಿದೆ.

ಅ.ನ.ಕೃ ಅವರ ಈ ಕಾದಂಬರಿಯನ್ನು ಕೇವಲ ಒಬ್ಬ ಕಲಾವಿದ ತನ್ನ ಪರಿಸರದೊಡನೆ ಹೋರಾಡುವ ಕಥೆಯೆಂದು ಓದುವುದು ತಪ್ಪಾಗುತ್ತದೆ. ಶಿವಾರಾಮ ಕಾರಂತರ "ಮರಳಿ ಮಣ್ಣಿಗೆ" ಯಂತೆ ಈ ಕಾದಂಬರಿಯೂ ಸಹ ಸಾವಯವ ಸಮಾಜದಲ್ಲಿ ಬೇರು ಬಿಟ್ಟ ಕೌಟುಂಬಿಕ ಜೀವನ ಆಧುನಿಕ ಜೀವನದ ಒತ್ತಡಗಳಿಗೆ ಸಿಕ್ಕಿ ಉಧ್ವಸ್ತವಾಗುವ ಪ್ರಕ್ರಿಯೆಯನ್ನು ಕುರಿತಾದ ಕಾದಂಬರಿ . ಕನ್ನಡದಲ್ಲಿ ಇಡೀಯ ಒಂದು ಪ್ರಶಸ್ತಿ ಗ್ರಂಥವನ್ನು ಪಡೆದ ಕಾದಂಬರಿಗಳಲ್ಲಿ 'ಸಂಧ್ಯರಾಗ' ಮೊದಲನೆಯದು.

ಮಾಸ್ತಿಯವರು ಬರೆದಿರುವ 'ಸುಬ್ಬಣ್ಣ' ಕಿರುಕಾದಂಬರಿ ಹಾಗೆಯೇ ಇದನ್ನು ನೀಳ್ಗಥೆ ಎನ್ನಲೂಬಹುದು. ಶಿವರಾಮ ಕಾರಂತರ "ಚೋಮನದುಡಿ" ಯಂತೆ "ಸುಬ್ಬಣ್ಣ' ಕೂಡ ಒಂದು ಚಿರಸ್ಮರಣಿಯವಾಗಿ ಉಳಿಯಬಲ್ಲ ಕಥಾವಸ್ತುವನ್ನು ಒಳಗೊಂಡಿದೆ. ಸುಬ್ಬಣ್ಣನನ್ನು ಓದುಗರ ಕಣ್ಣ ಮುಂದೆ ಇರಿಸಿ ಆತನ ಜೀವನದ ಸಂಕಟಗಳನ್ನು ಸಂಗೀತದ ಜೊತೆಗೇನೆ ಓದುಗರ ಅಂತರಾಳಗಳಲ್ಲಿ ಈರಿಸಿ ಆತನ ನೆನಪು ಚಿರಕಾಲ ಉಳಿಯುವಂತೆ ಮಾಡುವಲ್ಲಿ ಕಾದಂಬರಿ ಸಫಲವಾಗಿದೆ. ಒಬ್ಬ ಸಂಗೀತಗಾರನ ನೋವು ನಲಿವುಗಳನ್ನು ಉಂಡು ಈ ನೀಳ್ಗಥೆಯ ಮೂಲಕ ಸಾಧಾರಣ ವ್ಯಕ್ತಿತ್ವವನ್ನು ಪಡೆಯುವಂತೆ ಲೇಖಕರ ಲೇಖನಿ ತನ್ನ ಮೃದು ಭಾಷೆಯಲ್ಲಿ ಹೃದ್ಯಗೊಳಿಸಿರುವುದನ್ನು ಕಾಣಬಹುದಾಗಿದೆ.

ಮೊದಲ 86 ಪುಟಗಳಲ್ಲಿ ಕಲಾವಿದನ ಬದುಕಿನ ಚಿತ್ರವನ್ನು ಕಟ್ಟಿಕೊಡುವ ಯತ್ನ ಮಾಡಿದ್ದಾರೆ. ಕತೆಗಾರ ಹಾಗೂ ಸುಬ್ಬಣ್ಣ ಇಬ್ಬರೂ ಸೇರಿಯೇ ಈ ಕಥೆಯನ್ನು ಬೆಳೆಸುತ್ತಾರೆ. ಈ ಕಾದಂಬರಿ ಬರೆದ ಕಾಲದ ದೃಷ್ಠಿಯಿಂದಲೂ ಸಾಹಿತ್ಯ ಪ್ರಕಾರದ ದೃಷ್ಠಿಯಿಂದಲೂ ಈ ಅಂಶ ಗಮನರ್ಹವಾಗಿದೆ.

ಇಲ್ಲಿನ ಕಥನ ತಂತ್ರ ಕುತೂಹಲವಾದದು. ಗಾಯಕನೊಬ್ಬನ ಬದುಕಿಗೆ ಸಂಬಂಧಿಸಿದ ಕೃತಿಯಾಗಿಯೂ ಸುಬ್ಬಣ್ಣ ಕಾದಂಬರಿ ಪ್ರಥಮವಾಗಿದೆ.

ಅ.ನ.ಕೃ ಅವರು ಉದಯರಾಗದಿಂದ ಪ್ರಾರಂಭವಾದ ಕಾದಂಬರಿಗಳ ಮೂಲಿಕೆಯಲ್ಲಿ ಕಲಾವಿದನ ಜೀವನದ ಅನೇಕ ಮುಖಗಳನ್ನು ಆತ ಸಮಾಜದೊಂದಿಗೆ ಹೊಂದಿದ ಸಂಕೀರ್ಣ ಸಂಬಂಧವನ್ನು ಕಲೆಯ ಸಾಧನೆಯಲ್ಲಿ ಆತನ ಸೋಲು ಗೆಲುವುಗಳನ್ನು ಚಿತ್ರಿಸಲಾಗಿದೆ. 'ಸಂಧ್ಯಾರಾಗ' ದ ಹಿಂದಿನ ಉದ್ದೇಶವನ್ನು ಅ.ನ.ಕೃ ಅವರೇ ತಮ್ಮ ಮುನ್ನಡಿಯಲ್ಲಿ ಬಿಡಿಸಿ ಹೇಳುತ್ತಾ ಕಲಾವಿದನ ಗುರಿ ಸಮ್ಯಗ್ದರ್ಶನವಾಗಿದ್ದು ಇದು ಮೊದಲು ಅಂಶತಃ ಮಾತ್ರ ಅವನಿಗೆ ದೊರಕಿ ಕೊನೆಗೆ ಅದರ ಪೂರ್ಣದರ್ಶನ ಲಭ್ಯವಾಗುತ್ತದೆ ಎಂದಿದ್ದಾರೆ. "ಸಂಧ್ಯಾರಾಗ" ಶರಚಂದ್ರರ "ದೇವದಾಸ" ದಂಥ ಕಾದಂಬರಿಗಳಿಂದ ಸ್ಫೂರ್ತಿ ಪಡೆದಿರಬಹುದಾದ ಕಾದಂಬರಿ ಎಂದು ಕೆಲ ವಿಮರ್ಶಕರು ಹೇಳಿರುವರಾದರು ಅದು ಅ.ನ.ಕೃ. ಅವರ ಪ್ರತಿಭೆಯ ಸ್ಪಷ್ಟ ಮುದ್ರೆಯನ್ನು ಹೊಂದಿರುವ ಯಶಸ್ವಿ ಕಾದಂಬರಿಯಾಗಿದೆ ಅ.ನ.ಕೃ. ತಮ್ಮ ಕಾದಂಬರಿಗಳಲ್ಲಿ ಎರಡು ಮಹತ್ವದ ಮುಖಗಳ ಕಡೆಗೆ ಓದುಗರ ಲಕ್ಷ್ಯವನ್ನು ಎಳೆಯ ಬಯಸುತ್ತಾರೆ ಅದನ್ನು ಮುಂದಿನ ಅಧ್ಯಾಯಗಳಲ್ಲಿ ನೋಡಬಹುದಾಗಿದೆ.

ಸುಬ್ಬಣ್ಣ ಕೃತಿಯ ರಚನೆಯ ಹಿಂದಿನ ಪ್ರೇರಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಕಾದಂಬರಿಯ ಸಮಾಗ್ರಿ ದೊರೆತ್ತದ್ದು ಅವರ ಮಿತ್ರರಾದ ನವರತ್ನ ರಾಮರಾಯರಿಂದ " ಅವರು ಗುರುತು ಮಾಡಿಕೊಟ್ಟ ವೃದ್ದಗಾಯಕನ ಸಂಪೂರ್ಣ ಚಿತ್ರವೊಂದನ್ನು ಕಲ್ಪಿಸುವ ಪ್ರಯತ್ನದಲ್ಲಿ ಈ ಕಥೆ ನಿರ್ಮಾಣವಾಯಿತ್ತು." ಎಂದು ಮೊದಲನೆಯ ಮುದ್ರಣಕ್ಕಾಗಿ ಬರೆದ ಮುನ್ನುಡಿಯಲ್ಲಿ ಮಾಸ್ತಿಯವರೇ ಹೇಳಿರುವುದನ್ನು ಗಮನಿಸಬಹುದು.

ಮಾಸ್ತಿ ಸುಬ್ಬಣ್ಣನ ಜೀವನವನ್ನು ಪ್ರತ್ಯೇಕವಾಗಿ ಕಂಡಿರದಿದ್ದರೂ ರಾಮರಾಯರಿಂದ ದೊರೆತ ವಿವರಗಳನ್ನು ಉಪಯೋಗಿಸಿಕೊಂಡು ಅವರು ವೃದ್ದ ಗಾಯಕನ ಇಡೀ ಬದುಕನ್ನು ಅವರು ಕೌಟುಂಬಿಕ ಹಾಗೂ ಸಾಮಾಜಿಕ ಹಿನ್ನಲೆಗಳಲ್ಲಿ ಚಿತ್ರಿಸಿದ್ದಾರಲ್ಲದೆ, ಕಥೆಯ ಮೂಲಕ ತಮ್ಮದೇ ಆದ ಜೀವನ ದರ್ಶನವನ್ನು ಬಿಂಬಿಸಲು ಯತ್ನಿಸಿದ್ದಾರೆ, ಮಾಸ್ತಿಯವರ ಈ ಕಥೆ ಎಂ.ಎಸ್.ಪುಟ್ಟಣ್ಣ ರವರ" ಮಾಡಿದ್ದುಣ್ಣೋ ಮಹಾರಾಯ"ದ ಸಾಂಸಾರಿಕ ಚಿತ್ರಗಳನ್ನು ಹೋಲುತ್ತದೆ ಎಂದು

ವಿಮರ್ಶಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾಸ್ತಿ ಯವರ ಕಥೆಗಳ Mythical ಗುಣಕ್ಕೆ "ಸುಬ್ಬಣ್ಣ" ಕಥೆಯೂ ಉತ್ತಮ ಉದಾಹರಣೆಯಾಗಿದೆ ಯಾವ ಕೋಲಾಹಲ, ಕರ್ಕಶವೂ ಇಲ್ಲದೆ ನಮಗೆ ಅರಿವಾಗದಂತೆ ಹೃದಯವನ್ನು ಹೊಕ್ಕು ಪರಿಣಾಮವನ್ನು ಉಂಟುಮಾಡುತ್ತದೆ. ಜಗತ್ತಿನ ಮಹಾ ಪುರಾಣಗಳ ಕಥೆಗಳ ಗುಣ "ಸುಬ್ಬಣ್ಣ" ದ ಕಾದಂಬರಿಯಾಗಿದೆ.

ಒಟ್ಟಿನಲ್ಲಿ ಈ ಎರಡೂ ಕಾದಂಬರಿಗಳ ವಸ್ತು ಮೊದಲೆ ಹೇಳಿರುವಂತೆ ಒಂದೇ ಆಗಿದ್ದರೂ ದೃಷ್ಟಿ ಬೇರೆಯಾಗಿದೆ ಅ.ನ.ಕೃ ಕಲೆ ದೊಡ್ಡದೆಂದು ಒಪ್ಪಿಕೊಂಡವರು ಮಾಸ್ತಿ ಯವರು ಬದುಕು ದೊಡ್ಡದೆಂದು ಒಪ್ಪಿಕೊಂಡವರು ಯಾವ ಕಾರಣಕ್ಕಾಗಿ ಒಪ್ಪಿಕೊಂಡಿದ್ದಾರೆಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಹಾಗೆಯೇ ಇಲ್ಲಿ ಪಾತ್ರಗಳು ಹೇಗೆ ಮೂಡಿ ಬಂದಿದೆ ಎಂಬುದನ್ನು ಸಹ ನೋಡಬಹುದಾಗಿದೆ.

1928 ರಲ್ಲಿ ಪ್ರಕಟವಾದ "ಮಾಸ್ತಿ ಯವರ" ಸುಬ್ಬಣ್ಣ" ದಲ್ಲಿ ಕಲಾವಿದ ಕಥಾ ನಾಯಕನಾಗಿ ಕಾಣಿಸಿಕೊಂಡಿದ್ದಾರೆ ಅ.ನ.ಕೃ. ಅವರು ಕಲಾವಿದ ಮತ್ತು ಅವನ ಜಗತ್ತನ್ನು ವಿಸ್ತೃತ ರೂಪದಲ್ಲಿ ಬಳಸಿಕೊಂಡಿದ್ದಾರೆ.

ಚಿತ್ರ ಕಲಾವಿದನ ಜೀವನವನ್ನು ಚಿತ್ರಿಸುವ ಅ.ನ.ಕೃ ಅವರ 'ಉದಯರಾಗ' ಕ್ಕಿಂತಲೂ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದ ಕಾದಂಬರಿ ' ಸಂಧ್ಯಾರಾಗ' ವು ಸಂಗೀತ ಕಲಾವಿದನ ಹೋರಾಟವನ್ನು ಚಿತ್ತಿಸುತ್ತದೆ. ಕಲಾವಿದನ ಹೃದಯ ವು ಎಷ್ಟು ಮೃದು, ಮನಸ್ಸು ಎಷ್ಟು ತೀವ್ರ ಗಾಹಿ ಮತ್ತು ಅವನ ಆವೇಶಗಳು ಎಂಥ ಸ್ಫೋಟಕ ಶಕ್ತಿಯುಳ್ಳವುಗಳೆಂಬುದನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಈ ಕಾದಂಬರಿಗಳಲ್ಲಿ ಸಮಾಜದಲ್ಲಿ ಕಲಾವಿದನ ಬದುಕು ಮತ್ತು ಅವನ ಹೋರಾಟ, ಅಂತರಂಗದ ವಿಪ್ಲವಗಳನ್ನು ಹೇಳುವಂಥದ್ದಾಗಿದೆ ಬದುಕು ಎಂದರೇನು ? ಬದುಕಿನ ಅರ್ಥವೇನು ? ಇದರ ವ್ಯಾಪಕತೆಯಲ್ಲಿ ಹುಟ್ಟು ಸಾವುಗಳ ಬೆಲೆಯೇನು ? ಎಂಬುದನ್ನು ತಿಳಿಸುವುದಾಗಿದೆ.

ಮಾಸ್ತಿ ಯವರು ತಮ್ಮ ಕಾದಂಬರಿಯಲ್ಲಿ ತಮ್ಮ ಮತ್ತು ತಮ್ಮ ಬದುಕನ್ನು ಪಾತ್ರದ ಮೂಲಕ ಕಟ್ಟಿಕೊಡುವ ಸಾಹಸ ಮಾಡಿರುವುದು ಅವರ ಪರಿಪಕ್ವ ಮನಸ್ಸು ಮತ್ತು ಪ್ರತಿಭೆಗೆ ಸಾಕ್ಷಿಯಾಗಿದೆ.

ಒಟ್ಟಾರೆಯಾಗಿ ಈ ಎರಡೂ ಕಾದಂಬರಿಗಳುವಿಶಿಷ್ಟ ರೀತಿಯಲ್ಲಿ ರಚನೆಗೊಂಡು ಆಧುನಿಕ ಕಾಲದಲ್ಲಿ ಪ್ರಾಮುಖ್ಯತೆ ಗಳಿಸಿಕೊಂಡವು ಸಹೃದಯ ಓದುಗರನ್ನು ಸಂಗೀತ ಲೋಕದಲ್ಲಿ ವಿವರಿಸುವಂತೆ ಮಾಡುವ ಆಕರ್ಷಣೆಗೆ ಈ ಕಾದಂಬರಿಗಳಲ್ಲೊರುವ ಅನೇಕ ಅಂಶಗಳು ಕಾರಣವಾಗಿವೆ. ಎನ್ನಬಹುದು.

ಅಧ್ಯಾಯ – 2

ಮಾಸ್ತಿಯವರ ವ್ಯಕ್ತಿತ್ವ ಮತ್ತು ಸೃಜನಶೀಲತೆ

'ಮಾಸ್ತಿ ಕನ್ನಡದ ಆಸ್ತಿ' ಎಂಬ ಉಕ್ತಿಗೆ ತಮ್ಮ ಜೀವಿತಾವಧಿಯಲ್ಲಿ ಭಾಜನರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 'ಶ್ರೀನಿವಾಸ' ಎಂಬ ಕಾವ್ಯ ನಾಮದಿಂದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ಪ್ರತಿಭೆಯ ಅದ್ಭುತ ವಿರಾಟ ದರ್ಶನವನ್ನು ಮಾಡಿಸಿದವರು. ಕಥೆ, ಕಾದಂಬರಿ, ಕಾವ್ಯ ಗೀತನಾಟಕಗಳು, ಪ್ರಬಂಧ ಪ್ರವಾಸಕಥನ, ಪತ್ರಗಳು ಅನುವಾದಗಳು, ಸಂಪಾದಕೀಯ ಇತ್ಯಾದಿ ಎಲ್ಲದರಲ್ಲಿಯೂ ಸಿದ್ಧಹಸ್ತರೆನಿಸಿ ನಿಜಕ್ಕೂ 'ಕನ್ನಡದ ಅತ್ಯಮೂಲ್ಯ ಆಸ್ತಿ ನಮ್ಮ ಮಾಸ್ತಿ' ಎನಿಸಿಕೊಂಡವರು. ಅವರಿಗೆ ದೊರೆತ ಪ್ರಶಸ್ತಿಗಳು ಆಗಣಿತ ಆದರೆ 'ಕನ್ನಡದ ಆಸ್ತಿ' 'ಸಣ್ಣಕಥೆಗಳ ಜನಕ' 'ಹಿರಿಯಣ್ಣ' ಎಂಬಿತ್ಯಾದಿ ಪ್ರೀತಿ ಗೌರವಗಳು ಈ ಎಲ್ಲವುಗಳಿಗಿಂತ ಶ್ರೇಷ್ಟತೆಯನ್ನು ಸಾರುವಂತಿದೆ. ಅವರನ್ನು ಕರ್ನಾಟಕದ ಜನತೆ ಪ್ರೀತಿ, ಧನ್ಯತೆ , ಕೃತಜ್ಞತೆಯಿಂದ ಹೀಗೆ ಕರೆದದ್ದು , ಮಾಸ್ತಿ ಅವರ ಸಾಧನೆಯನ್ನು ಕಂಡು ಅವರ ಸೇವೆ ನಾಡಿಗೆ ಅಷ್ಟು ಅನಂತವೂ ಆಳದ್ದೂ ಆಗಿವೆ, ಮಾಸ್ತಿ ಜೀವನ ಕಾಲ ಚಕ್ರದಲ್ಲಿ ಸಂದು ಹೋಗಿದ್ದರೂ , ಅವರು ಸಲ್ಲಿಸಿದ ಮಹತ್ಕಾರ್ಯ, ನಾಡುನುಡಿಗೆ ಸಲ್ಲಿಸಿದ ಸೇವೆ, ಸರಳ ಸ್ವಚ್ಛ ಜೀವನ, ಮನುಕುಲದ ಏಳಿಗೆಗೆ ನಡೆಸಿದ ನಿರಂತರ ಚಿಂತನೆಗಳು ಇಂದೂ ನಾಡಿನಲ್ಲಿ ಚಲನಶೀಲನಾಗಿ ಮಿಂಚುತ್ತಿವೆ.

ಮಾಸ್ತಿ ಎಂಬ ಗ್ರಾಮ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೋಕಿಗೆ ಸೇರಿದ್ದು, ಇದು ಬೆಂಗಳೂರಿಗೆ ನಲವತ್ತೈದು ಕಿಲೋ ಮೀಟರ್ ದೂರದಲ್ಲಿದೆ. ಆ ಒಂದು ಗ್ರಾಮದ ಹೆಸರೇ ಕನ್ನಡದ ದೊಡ್ಡ ಪ್ರತಿಭಾವಂತರೊಬ್ಬರ ಹೆಸರಾಗಿರುವುದು ಒಂದು ಅದ್ಭುತ ಇವರು 6–6–1891 ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೋಕಿನ ಮಾಸ್ತಿ ಎಂಬ ಗ್ರಾಮದಲ್ಲಿ ರಾಮಸ್ವಾಮಿ ಅಯ್ಯಂಗಾರ್ ಮತ್ತು ತಿರುಮಲಮ್ಮ ದಂಪತಿಗಳಿಗೆ ದ್ವಿತೀಯ ಪುತ್ರರಾಗಿ ಜನಿಸಿದರು ಬಾಲ್ಯದ 7 ವರ್ಷಗಳನ್ನು ಆ ಗ್ರಾಮದಲ್ಲಿಯೇ ಕಳೆದ ವೆಂಕಟೇಶ್ ಅಯ್ಯಂಗಾರರ ಹೆಸರೇ ಮಾಸ್ತಿಯೆಂದು ರೂಢಿಗೆ ಬಂದದು ಕನ್ನಡ ಸಾಂಸ್ಕೃತಿಕ ಲೋಕದ ಒಂದು ಪವಾಡವೆನ್ನಬಹುದು.

ಮಾಸ್ತಿಯಲ್ಲಿ ಅವರಿದ್ದ 7 ವರ್ಷಗಳಲ್ಲಿಯೂ ಬಡತನದ ದಾರುಣತೆ ಅವರನ್ನು ಕಾಡಿತು

ಬಡತನವೊಂದೇ ಆಗಿದ್ದರೇ ಆ ಪರಿಸ್ಥಿತಿ ಬೇರೆಯಾಗುತ್ತಿತ್ತೊ ಏನೋ! ಪೆರಿಯಾರ್ ಅನ್ನಿಸಿಕೊಂಡ ಕುಟುಂಬಕ್ಕೆ ಸೇರಿದವರೆಂಬ ಸಾಮಾಜಿಕ ಭಾವನೆ ಸೂಕ್ಷ್ಮ ಸಂವೇದನೆಯ ಮಾಸ್ತಿಯವರ ಎಳೆಯ ಮನಸ್ಸಿನ ಮೇಲೆ ಮೂಡಿಸಿದ ಭಾವನೆಗಳು ಒಂದರ್ಥದಲ್ಲಿ ಅವರನ್ನು ಬದುಕಿನುದ್ದಕ್ಕೂ ನಡೆಸಿಕೊಂಡು ಬಂದ ನೇರ ನಡೆಗೆ ಪ್ರೇರಕವಾದವು.

ಮಾಸ್ತಿಯವರ ಶಿಕ್ಷಣಕ್ಕೆ ಭದ್ರವಾದ ತಳಹದಿ ಹಾಕಿದವರು ಅವರ ತಾಯಿಯ ತಂದೆಯಾದರೆ ಅದರ ಮುಂದುವರಿಕೆಗೆ ಕಾರಣರಾದವರು ಅವರ ಹಿರಿಯ ಸೋದರ ಮಾವನಾದ ವೆಂಕಟರಾಮು ಅಯ್ಯಂಗಾರರು. ಮಾಸ್ತಿಯವರು ಕಷ್ಟಪಟ್ಟು ವಿಧ್ಯಾಭ್ಯಾಸ ಮಾಡಿ ಸ್ವಂತ ಪ್ರತಿಭೆಯಿಂದ 1907 ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ, 1909 ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. 1912 ರಲ್ಲಿ ಬಿ.ಎ. 1914 ರಲ್ಲಿ ಎಂ.ಎ. ಪದವಿಗಳಿಸಿದರು.

ಶ್ರೀನಿವಾಸರದು 'ಪೆರಿಯಾರ್' ಮನೆತನ ಅಂದರೆ ದೊಡ್ಡ ಮನೆತನ. ಆದರೆ ಅವರ ಬಾಲ್ಯ ಮತ್ತು ವಿಧ್ಯಾಭ್ಯಾಸವೆಲ್ಲವೂ ಬಡತನದಲ್ಲೇ ಕಳೆದವು. ವಾರಾನ್ನ ಉಂಡು ವಿದ್ಯಾಭ್ಯಾಸ ಮುಗಿಸಿದರು. ತಮಗೆ ಸಹಾಯ ಮಾಡಿದ ಮಹನೀಯರುಗಳನ್ನೆಲ್ಲ ಅವರು ಕೃತಜ್ಞತೆಯಿಂದ ನೆನೆಯುತ್ತಿದ್ದರು ಅಂಥವರ ಔದರ್ಯದಿಂದ ಕನ್ನಡ ನಾಡು ಲಾಭ ಪಡೆಯಿತು. ಅಂದು ವಾರಾನ್ನ ಉಂಡ ಮಾಸ್ತಿಯವರು ಮುಂದೆ ಇಡೀ ಕನ್ನಡ ಸಾರಸ್ವತ ಲೋಕಕ್ಕೇ ತಮ್ಮ ಸಾಹಿತ್ಯದ ರಸದೂಟ ಬಡಿಸಿದರು. ವಿದ್ಯಾರ್ಜನೆಯ ಸಮಯದಲ್ಲಿ ತಾವು ಅನುಭವಿಸಿದ ಕಷ್ಟಗಳನ್ನು ಮರೆಯದೆ ಮುಂದೆ ಬಹಳ ಮಂದಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದರು. ಅಷ್ಟೇ ಅಲ್ಲ ಕಷ್ಟದಲ್ಲಿ ಬೆಂದು ಜೀವನ ನಡೆಸುತ್ತದ್ದ ಅನೇಕ ಸಾಹಿತಿಗಳಿಗೆ ಆರ್ಥಿಕ ಸಹಾಯವನ್ನು ನೀಡಿ ಪುಣ್ಯ ಕಟ್ಟಿಕೊಂಡ ಮಾಸ್ತಿಯವರ ವ್ಯಕ್ತಿತ್ವ ಬಹಳ ದೊಡ್ಡದು. ಅವರದು ವಿಶಾಲ , ಉದಾರ ಮನೋಭಾವ, ಅವರ ಅಂತರಂಗದಲ್ಲಿ ಔದಾರ್ಯ ವಿಸ್ತಾರವಾಗಿ ಹರಡಿತ್ತು.

ಮಾಸ್ತಿಯವರಿಗೆ 1930 ರಲ್ಲಿ ಡೆಪ್ಯೂಟಿ ಕಮೀಷನರ್ ಹುದ್ದೆಗೆ ಬಡ್ತಿ ದೊರೆಯಿತ್ತು. 1943 ರಲ್ಲಿ ಸೇವೆಯಿಂದ ಪುಯಂ ನಿವೃತ್ತಿ ಪಡೆದರು. 1942 ರಲ್ಲಿ ಮೈಸೂರು ಮಹಾರಾಜರು ' ರಾಜಸೇವಾ ಪ್ರಶಸ್ತಿ' ಬಿರುದು ನೀಡಿ ಗೌರವಿಸಿದರು 'ಸರ್ಕಾರಿ ನೌಕರಿಯ ಅನುಭವ ಅವರ

ಸಾಹಿತ್ಯ ಕೃಷಿಗೆ ಬಹಳ ಸ್ಫೂರ್ತಿ ನೀಡಿತೆನ್ನಬಹುದು. ಸರಕಾರಿ ಹುದ್ದೆಯಲ್ಲಿದ್ದಾಗ ಅವರು ಬೇರೆ ಬೇರೆ ಕಡೆಗೆ ಪ್ರವಾಸ ಮಾಡಬೇಕಾಗಿತ್ತು. ಅದು ಅವರಿಗೆ ಜನ ಸಂಪರ್ಕದ ಸದವಕಾಶವನ್ನು ದೊರಕಿಸಿಕೊಟ್ಟಿತ್ತು ಹೀಗೆ ಜನ ಸಂಪರ್ಕದಿಂದ ಅವರು ಅಮುದಾಯದ ಬದುಕನ್ನು ಕಂಡು ಆದರಿಂದ ಅಪಾರ ಅನುಭವಗಳನ್ನು ಪಡೆದರು. ಆ ಅನುಭವಗಳೇ ಅವರ ಕೃತಿಗಳಲ್ಲಿ ಬಿಂಬಿತವಾಗಿವೆ. ಜನ ಸಾಮಾನ್ಯರ ಬದುಕು, ಸಮಾಜದ ಮೌಲ್ಯಗಳು, ಸಂಪ್ರದಾಯಗಳು, ಅಲ್ಲಿನ ಕುಂದು ಕೊರತೆಗಳು ಇವೆಲ್ಲವೋ ಅವರ ಕೃತಿಗಳ ಕೇಂದ್ರವಸ್ತುವಾಗಿರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ಬಿ.ಎಂ.ಶ್ರೀ ಯವರು ಹೇಳಿದಂತೆ ಶ್ರೀನಿವಾಸರದು 'ವಿಶ್ವದೃಷ್ಟಿ' ಆ ದೃಷ್ಟಿ ಅವರ ಜೀವನದಲ್ಲಲ್ಲದೆ ಅವರ ಕೃತಿಗಳಲ್ಲೂ ಹರಡಿಕೊಂಡಿದೆ.

ಹೊಸಗನ್ನಡದ ಅರುಣೋದಯ ಕಾಲದಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಮಾಸ್ತಿಯವರು ಸುಮಾರು ಎಂಟು ದಶಕಗಳಷ್ಟು ಕಾಲ ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಸಣ್ಣಕತೆ, ಕಾದಂಬರಿ, ನಾಟಕ, ವಿಮರ್ಶೆ, ಭಾಷಾಂತರ ಹೀಗೆ ಅವರು ಕೈಯಾಡಿಸಿದ ಪ್ರಕಾರವಿಲ್ಲ ಎನ್ನಬಹುದು. ಸಣ್ಣ ಕತೆಯ ಕ್ಷೇತ್ರದಲ್ಲಂತೂ ಅವರದು ಅನುಪಮ ಸಾಧನೆ. ಮಾಸ್ತಿ ತಮ್ಮ ಅಪಾರ ಕತೆಗಳಲ್ಲಿ ನೂರಾರು ಸೂತ್ರಗಳ ಮೂಲಕ ಬದುಕಿನ ಅನಂತ ಮುಖಗಳನ್ನು ಅವುಗಳ ಸ್ವಭಾವ ವೈಚಿತ್ರ್ಯಗಳನ್ನು ಹೃದಯ ಸ್ಪರ್ಶಿಯಾಗುವಂತೆ ನಿರೂಪಿಸಿದ್ದಾರೆ. ಪ್ರೀತಿ, ನೋವು, ನಲಿವು, ದೇಶದ ಮತ್ತು ಮನುಷ್ಯನ ಘನತೆ, ಅವನತಿ , ಸಾರ್ಥಕ ಜೀವನ, ಸಂಸ್ಕೃತಿಯ ಮಹತ್ವ ಪರಂಪರಾನುಗತ ಮೌಲ್ಯಗಳ ವಿಶ್ಲೇಷಣೆ, ನೈತಿಕ ಹೊಣೆಗಾರಿಕೆ– ಹೀಗೆ ಅವರು ಕತೆಗಳಲ್ಲಿ ಬದುಕನ್ನು ಇಡಿಯಾಗಿ ನೋಡುವ ಸೂಕ್ಷ್ಮ ದೃಷ್ಟಿಯಿದೆ. ಪ್ರಬುದ್ಧ ಜೀವನ ದರ್ಶನವಿದೆ. ಮಾನವೀಯ ಅನುಕಂಪವಿದೆ. ಇವರ ನೂರು ಕತೆಗಳನ್ನು ಒಟ್ಟಿಗೆ ಓದಿದಾಗ ಒಬ್ಬರೇ ವ್ಯಕ್ತಿ ಇಷ್ಟೆಲ್ಲಾ ಬಗೆಯ ಕತೆಗಳನ್ನು ಬರೆದರೆಂದು ನಂಬುವುದೇ ಕಷ್ಟವಾಗುತ್ತದೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನ ಎಂಥದು ಮುಂದಿನ ಪೀಳಿಗೆಯವರಿಗೆ ಅವರ ಮಹತ್ವ ಎಷ್ಟು ಎಂಬ ಬಗೆಗೆ ಡಾ॥ ಯು.ಆರ್. ಅನಂತಮೂರ್ತಿಯವರು ಬರೆದಿರುವುದು ತೀರ ಅರ್ಥಪೂರ್ಣ. ಹಾಗಾಗಿ ಅವರ ಮಾತುಗಳನ್ನು ಇಲ್ಲಿ ನೆನೆಯುವುದು ಔಚಿತ್ಯ ಪೂರ್ಣವೆನಿಸುತ್ತದೆ " ಪ್ರಾಯಕ್ಕೆ ಬರುತ್ತಿರುವ ಮಕ್ಕಳಿಗೆ ಯಾವನಾದರೂ ಒಬ್ಬ

ಕನ್ನಡ ಲೇಖಕನನ್ನು ಓದಲು ಕೊಡಬೇಕೆಂದು ಅನಿಸುವುದಾದರೆ ಅದು ಮಾಸ್ತಿ ಎಂದು ನನ್ನ ಭಾವನೆ. ಜೀವನದ ನಿಜಗಳೇನು, ನೋವುಗಳೇನು, ತಾಳುವುದೆಂದರೇನು, ಗೆಲ್ಲುವುದೆಂದರೇನು ಎಂಬ ಕಷ್ಟಗಳನ್ನು ಭಾವತಿರೇಕವಿಲ್ಲದೆ, ಸೋಲಿಲ್ಲದೆ ಎದುರಿಸಲು ಖಂಡಿತ ಮಾಸ್ತಿ ಕಲಿಸುತ್ತಾರೆ. ನಮ್ಮ ಭಾವನಾ ಪ್ರಪಂಚವನ್ನು ಪಕ್ವವಾಗಿಸಬಲ್ಲ ಶಿಕ್ಷಣ ಅವರ ಕಥೆಗಳಿಂದ ಖಂಡಿತ ಸಿಗುತ್ತದೆ. ನಯವಾದ ಮಾತಾಡುವನರನ್ನೆಲ್ಲ ಅನುಮಾನದಿಂದ ನೋಡುವುದು ಸರಿಯೆನ್ನಿಸುವ ಈ ಕಾಲದಲ್ಲಿ ಅಂಥ ಮಾತುಗಳನ್ನೇ ಆಡಿಯೂ ಪ್ರಮಾಣಿಕರಾಗಿರುವ ಮಾಸ್ತಿಯವರಂಥ ಅಪ್ಪಟ ಸಾಹಿತಿಗಳು ಕನ್ನಡದಲ್ಲಾಗಲಿ, ಇಂಗ್ಲೀಷಿನಲ್ಲಾಗಲಿ ತೀರಾ ಅಪರೂಪ".

ಮಾಸ್ತಿಯವರ ಸಣ್ಣಕಥೆಗಳ ಭಾಷೆ, ನಿರೂಪಣೆ ಶೈಲಿ ಸರಳ ಜೀವನದ ಅನುಭವ ಹೆಚ್ಚಳ ಕಥೆಯ ನಿರೂಪಣೆಗೆ ಅವರದೇ ಆದ ವಿಧಾನವಿದೆ ಸಂಗೀತಗಾರನೊಬ್ಬನ ಜೀವನವನ್ನು ಆಧರಿಸಿರುವ 'ಸುಬ್ಬಣ್ಣ' ಎಂಬ ನೀಳ್ಗಥೆ ಪ್ರಪಂಚದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುವಂಥದು. 1968ರಲ್ಲಿ ಮಾಸ್ತಿಯವರ 'ಸಣ್ಣಕಥೆಗಳು' ಎಂಬ ಗ್ರಂಥಕ್ಕೆ ದಲಿತ ಸಾಹಿತ್ಯ ಆಕಾಡೆಮಿಯ ಬಹುಮಾನ ದೊರೆಯಿತು.

ಮಾಸ್ತಿಯಾವರಾದರೋ ಸಣ್ಣಕಥೆಯ ಪ್ರಕಾರವನ್ನು ಕನ್ನಡದಲ್ಲಿ ನೆಲೆಯೂರಿಸಿದವರು ಅವರಿಗಿಂತ ಮೊದಲೇ ಪಂಜೆಮಂಗೇಶರಾಯರು ಕಥೆಗಳನ್ನು ಬರೆದಿದ್ದರು. ಆದರೆ ಆಳವಾದ ಆಂಗ್ಲ ಸಾಹಿತ್ಯ ಪರಂಪರೆಯನ್ನು ತಮ್ಮ ಆಸ್ತಿಯಾಗಿ ಪಡೆದಿದ್ದ ಮಾಸ್ತಿಯವರು ಸಣ್ಣಕತೆಯ ಪ್ರಕಾರದ ಸಾಧ್ಯತೆಗಳನ್ನೆಲ್ಲ ತೆರೆದು ತೋರಿ ಮಾರ್ಗ ಪ್ರವರ್ತಕರೇ ಆದರು.

ತಾವು ಮೆಚ್ಚಿದ ಷೇಕ್ಸ್‌ಪಿಯರ್‌ನ ಕೃತಿಗಳ ದೃಶ್ಯಗಳನ್ನು ಮೂರು ಸಂಪುಟಗಳಲ್ಲಿ ಅನುವಾದಿಸಿಕೊಟ್ಟರು. ತಮ್ಮ ಬದುಕಿನ ಚಿಂತನ ಶ್ರಮಕ್ಕೆ ಮೆಚ್ಚುಗೆಯಾದ ಆಗಸ್ಟಿನ್ ಸಾಧುವಿನ ಗ್ರಂಥವನ್ನು ಕುರಿತು ಬರೆದರು. ತಮಿಳು ಪ್ರಬಂಧಗಳ ಕಾವ್ಯಗುಣಕ್ಕೆ ಅವರು ಮನಸೋತಾಗ ಅದನ್ನು ಕನ್ನಡಿಗರಿಗೆ ತಿಳಿಸುವುದು ಒಂದು ಕರ್ತವ್ಯವೆಂದು ಭಾವಿಸಿ ಕ್ರಿಯಾಶೀಲರಾದರು.

ಮಾಸ್ತಿಯವರ ಸಾಹಿತ್ಯ ಪ್ರಪಂಚದಲ್ಲಿ 'ಚೆನ್ನಬಸವನಾಯಕ' ಮತ್ತು 'ಚಿಕ್ಕವೀರರಾಜೇಂದ್ರ'

ಕಾದಂಬರಿಗಳು ಶಿಖರಪ್ರಾಯವಾದವುಗಳು ಇವು ಕ್ರಮವಾಗಿ 1949 ಮತ್ತು 1986 ರಲ್ಲಿ ಪ್ರಕಟವಾಗಿವೆ. ಇವೆರಡು ಐತಿಹಾಸಿಕ ಕಾದಂಬರಿಗಳು 'ಚಿಕ್ಕವೀರರಾಜೇಂದ್ರ' ಕಾದಂಬರಿಗೆ 1983 ರಲ್ಲಿ 'ಜ್ಞಾನಪೀಠ' ಪ್ರಶಸ್ತಿ ಬಂದಿತು. ಈ ಪ್ರಶಸ್ತಿ ಬಂದ ಸಂದರ್ಭದಲ್ಲಿ ಮಾಸ್ತಿಯವರನ್ನು ಸರ್ಕಾರದ ವತಿಯಿಂದ ಸನ್ಮಾನಿಸುವ ಸಂದರ್ಭದಲ್ಲಿ ತಮಗೆ ಪ್ರಶಸ್ತಿ ಬಂದ ಬಗ್ಗೆ ಅಭಿಮತ ವ್ಯಕ್ತಪಡಿಸುತ್ತ ಹಿರಿಯಣ್ಣ ಮಾಸ್ತಿಯವರು ಅಂದಿನ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರನ್ನು ಮನೆಯಲ್ಲಿ ಸಿಹಿ ತಿಂಡಿ ಮಾಡಿದರೆ ಮೊದಲು ಯಾರಿಗೆ ಕೊಡುತ್ತಾರ್ರಿ? ಎಂದು ಪ್ರಶ್ನಿಸಿದರು. ಕಿಕ್ಕಿರೆದು ನೆರೆದಿದ್ದ ಸಭೆ ಒಕ್ಕೊರಲಿನಿಂದ 'ಮಕ್ಕಳಿಗೆ' ಎಂದಿತು. ಹಾಗೆಯೇ ಮೊದಲು ಮಕ್ಕಳಿಗೆ ಸಿಹಿತಿಂಡಿ ಕೊಟ್ಟು ಆಮೇಲೆ ದೊಡ್ಡವರಿಗೆ ನೀಡುವಂತೆಯೇ ಮುಂಚೆ ಚಿಕ್ಕ ಚಿಕ್ಕವರಿಗೆ ಜ್ಞಾನಪೀಠ ಪ್ರಶಸ್ತಿ ನೀಡಿ ಅನಂತರ ನನಗೆ ನೀಡಿದ್ದಾರೆ ಎಂದು ಹಾಸ್ಯವಾಗಿ ನುಡಿದರಂತೆ ಆದರೆ ಅವರ ಆ ಮಾತುಗಳು ಮಾರ್ಮಿಕವಾಗಿದ್ದವು. ಏಕೆಂದರೆ ಮಾಸ್ತಿಯವರ ಸಾಹಿತ್ಯ ರಚನೆಯ ಹಿನ್ನಲೆಯಲ್ಲಿ ಪ್ರಶಸ್ತಿ ದೊಡ್ಡದೇನಲ್ಲ ಮಾಸ್ತಿಯವರಿಗೆ ಬಂದ ಪ್ರಶಸ್ತಿ ಕನ್ನಡಿಗರಿಗೆ, ಕನ್ನಡ ನಾಡಿಗೆ ಬಂದ ಪ್ರಶಸ್ತಿಯಾಗಿದೆ. ಪ್ರಶಸ್ತಿ ನೆಪದಲ್ಲಿ ಕನ್ನಡದ ಸಾಹಿತಿ ಮಾಸ್ತಿ ಭಾರತದ ಸಾಹಿತಿಯಾದರು.

ಮಾಸ್ತಿಯವರು ಸಾಕಷ್ಟು ಕಾವ್ಯಗಳನ್ನು ಬರೆದಿದ್ದಾರೆ ಅವರ ಕಾವ್ಯಗಳಲ್ಲಿ 'ಶ್ರೀನಿವಾಸ' ದರ್ಶನ ಪ್ರಮುಖವಾಗಿದೆ ದೇವರಲೀಲೆ ಆತ್ಮ ನಿವೇದನೆ , ಪ್ರಕೃತಿ ಸೌಂದರ್ಯ , ಕನ್ನಡ ಪ್ರೇಮ, ಸಮಾಜದ ಅಂಕುಡೊಂಕು ಎದ್ದು ಕಾಣುತ್ತದೆ.

ಕಥನ ಗೀತೆಗಳಲ್ಲಿ ಶ್ರೀನಿವಾಸರ ಸಾಧನೆ ಸಿದ್ದಿ ಗಮನಾರ್ಹ ಗದ್ಯದಲ್ಲಾಗಲಿ, ಪದ್ಯದಲ್ಲಾಗಲಿ, ಕಥೆ ಹೇಳುವುದರಲ್ಲಿ ಒಂದೇ ರೀತಿಯ ಪರಿಣತಿ ಕಂಡುಬರುತ್ತದೆ 1940 ರಲ್ಲಿ ಪ್ರಕಟವಾದ "ಗೌಡರ ಮಲ್ಲಿ" ಅನಂತರ ಬೆಳಕು ಕಂಡ "ನವರಾತ್ರಿ" "ಮೂಕನ ಮಕ್ಕಳು" 'ರಾಮನವಮಿ' ಸಂಗ್ರಹಗಳಲ್ಲಿ ಶ್ರೀನಿವಾಸರ ಕಥನ ಗೀತೆಗಳು ಅಡಕವಾಗಿದೆ.

ಮಾಸ್ತಿಯವರ ಹಲವು ನಾಟಕಗಳನ್ನು ಬರೆದಿದ್ದಾರೆ. 1923 ರಲ್ಲಿ ಪ್ರಕಟವಾದ 'ಶಾಂತ' ಅವರ ಮೊದಲ ನಾಟಕ 'ಮಂಜುಳಾ' ಎಂಬುದು ಸಾಮಾಜಿಕ ನಾಟಕ ಐತಿಹಾಸಿಕ ಅಂಶಗಳನ್ನೊಳಗೊಂಡ 'ಕಾಕಾನ ಕೋಟೆ' ಮಾಸ್ತಿಯವರ ಉತ್ತಮ ನಾಟಕ . ಮಹಾಕವಿ ಕಾಳಿದಾಸನ

ಬಗೆಗೆ ಇರುವ ಕಟ್ಟುಕಥೆ , ಇತಿಹಾಸವನ್ನು ಬಳಸಿಕೊಂಡು ರಚಿಸಿರುವ 7 ಅಂಶಗಳ ನಾಟಕ 'ಕಾಳಿದಾಸ' ಇದಕ್ಕೆ 1983 ರಲ್ಲಿ ವರ್ಧಮಾನ ಪ್ರಶಸ್ತಿ ದೊರಕಿದೆ. ಮಾಸ್ತಿಯವರ ಸುಸಂಸ್ಕೃತ ಮನೋಧರ್ಮವು ನಾಟಕ ರಚನೆಯಲ್ಲಿ ನಿಚ್ಚಳವಾಗಿ ಕಾಣುತ್ತದೆ. ಕನ್ನಡ ನಾಟಕ ಕ್ಷೇತ್ರಕ್ಕೆ ಮಾಸ್ತಿಯವರ ನಾಟಕ ಕೃಷಿ ರಸವತ್ತಾಗಿ ಹರಿದು ಬಂದಿದೆ.

ಮಾಸ್ತಿಯವರ ಆತ್ಮಕಥೆ 'ಭಾವ' ಮೂರು ಸಂಪುಟಗಳಲ್ಲಿ ಪ್ರಕಟವಾಗಿದೆ. 'ಭಾವ'ದಲ್ಲಿ ಅವರ ಬದುಕಿನ ಮೂಲಧಾತುಗಳ ದಾಖಲೆಗಳಿವೆ. ಅಲ್ಲದೆ ನವರತ್ನರಾಮರಾವ್ , ರವೀಂದ್ರನಾಥ ಠಾಗೂರ್ , ರಾಮಕೃಷ್ಣ , ಎಂಬ ಜೀವನ ಚರಿತ್ರೆಗಳನ್ನು ಬರದಿದ್ದಾರೆ. ವೇದಗಳ ಕಾಲದಿಂದ ಬೆಳೆದು ಬಂದ ಧರ್ಮ ಸಂಸ್ಕೃತಿ ಪರಂಪರೆಗಲಲ್ಲಿ 'ಅಂತರಗಂಗೆ' ವಾಲ್ಮೀಕಿ ರಾಮಾಯಣವನ್ನು ಕುರಿತು ವಿಮರ್ಶಾತ್ಮಕ ಅಧ್ಯಯನವಾದ 'ಆದಿಕವಿ ವಾಲ್ಮೀಕಿ' ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದ ಮುಖ್ಯ ಘಟ್ಟಗಳನ್ನು ವಿವೇಚಿಸುವ 'ನಮ್ಮ ಹೊಸ ಸಾಹಿತ್ಯದ ಆರಂಭ' ಹಿಂದೂಧರ್ಮದ ಹಿನ್ನಲೆಯಲ್ಲಿ ಮೂಡಿರುವ 'ಧರ್ಮಸಂರಕ್ಷಣೆ' ಮಹಾಭಾರತ ಕಾವ್ಯದ ಸಾರಸಂಗ್ರಹವಾದ 'ಭಾರತ ತೀರ್ಥ' ಗ್ರಂಥಗಳು ಮಾಸ್ತಿಯವರ ಪರಿಪಕ್ವ ಬದುಕಿನ ಉದಾತ್ತಾ ಚಿಂತನೆಯ ವೈಚಾರಿಕ ಗ್ರಂಥಗಳಾಗಿವೆ. ಭಾರತ ಮತ್ತು ಪಾಶ್ಚಾತ್ಯ ಕೃತಿಗಳು ವಿವೇಚನೆಯನ್ನೊಳಗೊಂಡ ವಿಮರ್ಶೆಗಳು 'ನೂರಾರು ಪ್ರಸಂಗಗಳು' ವಿಚಾರ ಸೂಕ್ತಿಗಳು ಕನ್ನಡ ಕೆಚ್ಚನ್ನು ಉತ್ತೇಜಿಸುವ ಲೇಖನಗಳು ಅವರಿಂದ ರಚಿಸಲ್ಪಟ್ಟಿವೆ. 'ಕರ್ಣಾಟಕ ಭಾರತ ಕಥಾಮಂಜರಿ' ರವೀಂದ್ರ ಪ್ರಶಸ್ತಿ, ಸಂಭಾವನೆ, ಸರ್.ಎಂ.ವಿಶ್ವೇಶ್ವರಯ್ಯ ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ.

ಮಾಸ್ತಿಯವರ ಕೃತಿಗಳು ಸಂಖ್ಯೆಯಲ್ಲಿ, ಸತ್ವದಲ್ಲಿ, ಗುಣದಲ್ಲಿ, ಗಾತ್ರದಲ್ಲಿ, ವೈವಿಧ್ಯದಲ್ಲಿ ದೊಡ್ಡವು ಕತೆ, ಕಾದಂಬರಿ, ನಾಟಕಕ್ಕೆ, ವಿಮರ್ಶೆ, ಆತ್ಮಕಥೆ, ಜೀವನ ಚರಿತ್ರೆ, ಪ್ರಬಂಧ, ಜನಪದ, ಪತ್ರಿಕೋದ್ಯಮ, ವಿಚಾರ ಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಗ್ರಂಥಗಳನ್ನು ಬರದಿದ್ದಾರೆ, ಪ್ರತಿಭಾವಂತ ಸಾಹಿತಿಗಳನ್ನು ಗುರುತಿಸಿ ಪ್ರೋತ್ಸಾಹಿಸಿದ್ದಾರೆ. ಕನ್ನಡದಲ್ಲಿ ಸಾಹಿತಿಗಳ ಪಡೆ ಹೆಚ್ಚಾಗಲು ನೆರವಾಗಿದ್ದಾರೆ.

ಇಂಗ್ಲೀಷ್ ಭಾಷೆಯಲ್ಲೂ ಗ್ರಂಥಗಳನ್ನು ರಚಿಸಿರುವ ಮಾಸ್ತಿಯವರು ತಮ್ಮ ಕೆಲವು ಕೃತಿಗಳಿಗೆ ಅನ್ಯ ಮೂಲಗಳಿಂದ ಪ್ರೇರಣೆ ಪಡೆದಿದ್ದಾರೆ. ತಮಗೆ ಪ್ರಿಯವಾದ ಅನ್ಯ ಭಾಷೆಯ ಕೃತಿಗಳನ್ನು

ಕನ್ನಡಕ್ಕೆ ಭಾಷಾಂತರಿಸಿ ಕನ್ನಡದ ಸಾಹಿತ್ಯ ಸಂಪತ್ತು ವೃದ್ಧಿಸಲು ಕಾರಣರಾಗಿದ್ದಾರೆ. ಅನ್ಯಭಾಷೆಯ ಸಾಹಿತ್ಯಗಳಿಂದ ಗಳಿಸಿಕೊಂಡ ಅನುಭವವನ್ನು ತಮ್ಮ ಗ್ರಂಥಗಳ ಮೂಲಕ ಕನ್ನಡಿಗರಿಗೆ ನೀಡಿದ್ದಾರೆ.

ಕನ್ನಡ ನಾಡು ನುಡಿಗೆ ಬಹುಮುಖ ಸೇವೆ ಸಲ್ಲಿಸಿ ಕೀರ್ತಿಗಳಿಸಿದ ಮಾಸ್ತಿಯವರಿಗೆ ಹಲವು ಗೌರವ ಸ್ಥಾನಗಳು ಲಭಿಸಿವೆ. 1977 ರಲ್ಲಿ ಮೈಸೂರುವಿಶ್ವವಿದ್ಯಾಲಯ ಮಾಸ್ತಿಯವರಿಗೆ 'ಗೌರವ ಡಾಕ್ಟರೇಟ್' ಪ್ರಶಸ್ತಿ ನೀಡಿ ಗೌರವಿಸಿತು. 1983 ರಲ್ಲಿ ಜ್ಞಾನಪೀಠ ಪ್ರಶಸ್ತಿ ನೀಡಿ ಗೌರವಿಸಲಾಯಿತು. 1974 ರಲ್ಲಿ ಸಾಹಿತ್ಯ ಆಕಾಡೆಮಿ ಪೆಲೋ ಆಗಿ ಆಯ್ಕೆಯಾದದು. ಕನ್ನಡ ಸಾಹಿತಿಗೆ ದೊರಕಿದ ರಾಷ್ಟ್ರಮಟ್ಟದ ಗೌರವ. 1979 ರಲ್ಲಿ 'ಕರ್ನಾಟಕ ರಾಜ್ಯ ಸಾಹಿತ್ಯ ಆಕಾಡಮಿ' ಪ್ರಶಸ್ತಿಗೆ ಪಾತ್ರರಾದರು.

ಮಾಸ್ತಿಯವರ ಜೀವನ ಶೈಲಿ ಮಾತಿನಲ್ಲಿ ಹುದುಗಿರುವ ನಯ-ವಿನಯ ಸಾಂಸ್ಕೃತಿಕ ಪರಂಪರೆಯನ್ನು ಅನುಷ್ಠಾನದಲ್ಲಿ ಇರಿಸಿಕೊಳ್ಳುವ ಹಂಬಲ ಸಕಲರಿಗೆ ಲೇಸನ್ನು ಬಯಸುವ ಪ್ರಾಮಾಣಿಕ ಆಕಾಂಕ್ಷೆ ಈ ಕಾಲದಲ್ಲಿ ಬಹುಮಂದಿಗೆ ಅಚ್ಚರಿಯಾಗಿ ಕಾಣಿಸುವ ಸಂಗತಿಗಳೇ ಅವರು ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಚಾಚುತಪ್ಪದೆ ಪರಿಪಾಲಿಸಿಕೊಂಡು ಬಂದವರಾಗಿದ್ದರು. ಆಧುನಿಕ ಬದುಕಿನ ಅವಸರ ಬದುಕಿನಲ್ಲಿ ಅಳವಡಿಸಿಕೊಂಡು ಬಂದಿರುವ ನಿಯಮಗಳನ್ನು ಅಪವ್ಯಯಗೊಳಿಸುವ ಕಾಲಘಟ್ಟದಲ್ಲಿ ವರ್ತಮಾನದ ಬದುಕು ಹೇಗೆ ನಿಂತಿದೆ ಎನ್ನುವ ವಿಷಯವಾಗಿ ಅವರು ಅರವತ್ತರ ದಶಕದಷ್ಟು ಹಿಂದೆಯೇ ಮುಂಬಯಿಯಲ್ಲಿ ಒಮ್ಮೆ ಹೀಗೆಂದಿದ್ದರಂತೆ ನಾವು ಸ್ನಾನಕ್ಕೆಂದು ಎರಡು ತಂಬಿಗೆ ನೀರನ್ನು ತಲೆಗೆ ಸುರಿದುಕೊಳ್ಳುವಾಗ 'ಗಂಗೇಚಯ ಮುನೇಚೈದ ಗೋದಾವರಿ ಸರಸ್ವತಿ ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿದಿಂ ಶುರು' ಎನ್ನುತ್ತಾ ಆ ಪವಿತ್ರ ನದಿಗಳ ಜಲವನ್ನು ಬರಮಾಡಿಕೊಂಡಂತೆ ಅವಸರವಾಗಿ ಸ್ನಾನ ಮುಗಿಸಿ ಜಲಪಾತಾದಿಗಳನ್ನು ಅವಸರವಾಗಿಯೇ ಮುಗಿಸುವ ದಿನಗಳಲ್ಲಿ ಬದುಕುತ್ತಿದ್ದೇವೆ.

ಮಾಸ್ತಿಯವರು ಕಷ್ಟ ಸಹಿಷ್ಣು ಸುಖವನ್ನೂ ದುಃಖವನ್ನೂ ಅವರು ನುಂಗಿಕೊಂಡೇ ಬದುಕನ್ನು ಹೆಚ್ಚು ಅರ್ಥಗರ್ಭಿತಗೊಳಿಸಲು ಪ್ರಯತ್ನಿಸುತ್ತಾ ಬಂದವರಾಗಿದ್ದರು. ಅವರ ಪ್ರತಿಭೆಗೆ ಉನ್ನತೋನ್ನತ ಕೀರ್ತಿಯ ಬೆಳಕು ಬೆಳಗುತ್ತಲೇ ಇತ್ತು. ಅವರು ಗೌರವನ್ವಿತ ಹುದ್ದೆಯಲ್ಲಿದ್ದಾಗಲಾಗಲಿ ಕನ್ನಡವನ್ನು

ಉಸಿರಾಗಿ ಮಾಡಿಕೊಂಡು ಸಾಹಿತ್ಯ ಸರಸ್ವತಿಯನ್ನು ಪ್ರಸನ್ನೀಕರಿಸುತ್ತಾ ಬಂದ ಸಂದರ್ಭದಲ್ಲಿಯಾಗಲಿ ಕೀರ್ತಿಯ ಬಯಕೆ ಹೊತ್ತು ಇವೆನೆಲ್ಲಾ ಮಾಡಬೇಕೆಂದು ತಮ್ಮನ್ನು ತೊಡಿಗಿಸಿಕೊಂಡವರಲ್ಲ . ಮಾಸ್ತಿಯವರ ವ್ಯಕ್ತಿತ್ವವೇ ಅಪರಂಜಿ ಅದು ಮೆತ್ತಗೆ ಇದ್ದು ಕೊಂಡೇ ಚಮತ್ಕಾರಿಕ ರೀತಿ ಕುಸುರಿನ ಕೆಲಸಗಳನ್ನು ಪೂರೈಸಿ ಎಲ್ಲರ ಬೆರಗಿನ ಮೆಚ್ಚುಗೆಗೆ ಸಮರ್ಥವೆನ್ನಿಸುವ ರೀತಿ ತನ್ನಡೆಗೆ ಆಕರ್ಷಿಸಿಕೊಳ್ಳುತ್ತಲ್ಲಿತ್ತು ಮಾಸ್ತಿಯವರ ಸಂಪರ್ಕಕ್ಕೆ ಬಂದವರಾರು ಅವರಿಂದ ದೂರ ಸರಿಯಲು ಬಯಸಿದೆಯಲ್ಲಾ ಅವರ ಕಥಾ ತಂತ್ರ ಮತ್ತು ವ್ಯಕ್ತಿತ್ವ ಅವರಲ್ಲಿ ಅತೀವ ಗೌರವದ ಭಾವ ಮೂಡುವಂತೆ ಮನಸ್ಸಿನಲ್ಲಿ ಗೌರವ ಉದ್ಬವಿಸಿ ನೆಲೆಗೊಳ್ಳಲು ಸಹಕಾರಿಯಾಗುತ್ತಿತ್ತು.

ಕನ್ನಡ ಸಣ್ಣ ಕಥೆಯ ಬೆಳವಣಿಗೆಯಲ್ಲಿ ಮಾಸ್ತಿಯವರು ಒಬ್ಬ ಯುಗ ಪ್ರವರ್ತಕರು ಎಂಬುದರಲ್ಲಿ ಎರಡು ಮಾತಿಲ್ಲ 1921 ರಲ್ಲಿ ಪ್ರಕಟವಾದ ಬಿ.ಎಂ.ಶ್ರೀ ಅವರ ' ಇಂಗ್ಲೀಷ್ ಗೀತೆಗಳು' ಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಯಾವ ಸ್ಥಾನವಿದೆಯೋ 1921ರಲ್ಲಿ ಪ್ರಕಟವಾದ ಮಾಸ್ತಿಯವರ 'ಸಣ್ಣ ಕಥೆಗಳಿಗೂ' ಅದೇ ಸ್ಥಾನವಿದೆ ಎರಡು ತಮ್ಮದೇ ಆದ ರೀತಿಯಲ್ಲಿ ಹೊಸ ಸಾಹಿತ್ಯ ಪ್ರಕಾರಗಳು ವಸ್ತು, ರೀತಿ, ಜೀವನ ದೃಷ್ಟಿಗಳಲ್ಲಿ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟವು ಈ ಎರಡು ಕೃತಿಗಳ ಪ್ರಭಾವ ತೀಕ್ಷ್ಣದಾಗಿತ್ತೋ ಅಷ್ಟೇ ತೀವ್ರವಾಗಿತ್ತು.

ಮಾಸ್ತಿ ಕೇವಲ ಯುಗ ಪ್ರವರ್ತಕರಷ್ಟೆ ಅಲ್ಲ' ಒಬ್ಬ ಮೇಜರ್ ಲೇಖಕರೂ ಹೌದು. ಜೀವನ ಮತ್ತು ಕತೆ ಎರಡರಲ್ಲಿಯೂ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿದ್ದು ಅವರ ಹೆಚ್ಚುಗಾರಿಕೆ ಜೊತೆಗೆ ಅವೆರಡು ಭಾರತೀಯ ಸಂಪ್ರದಾಯದೊಂದಿಗೆ ನಿಕಟವಾದ ಸಂಬಂದವನ್ನು ಕಂಡುಕೊಂಡಿದ್ದು ಅವರ ವೈಶಿಷ್ಟ ಸಣ್ಣ ಕಥೆಯಿಂದ ಸಾಹಿತ್ಯ ಪ್ರಕಾರವನ್ನು ಅಭಿವ್ಯಕ್ತಿಯ ಮುಖ್ಯಮಾಧ್ಯಮವಾಗಿ ಮಾಡಿಕೊಂಡ ಮುಖ್ಯ ಲೇಖಕರು ಜಾಗತಿಕ ಸಾಹಿತ್ಯದಲ್ಲಿ ಬಹಳಷ್ಟು ಕಡಿಮೆ. ಕಾರಣವೆಂದರೆ ಒಂದು ಸಾಹಿತ್ಯ ಪ್ರಕಾರವಾಗಿ ಸಣ್ಣ ಕಥೆಗಿರುವ ಸಹಜವಾದ ಮಿತಿ ಪರಿಣಾಮದ ಏಕತೆ , ಉದ್ದೇಶದ ಏಕತೆ ಇತ್ಯಾದಿ ಹಲವಾರು ನಿರ್ಭಂಧಗಳಲಿ ಬದುಕನ್ನು ಅದರ ಸಮಗ್ರತೆಯಲ್ಲಿ ಸಂಕೀರ್ಣತೆಯಲ್ಲಿ ಗ್ರಹಿಸಲು ಸಣ್ಣ ಕಥೆಗೆ ಸಾದ್ಯವಿಲ್ಲ ಆದ್ದರಿಂದ ಬದುಕನ್ನು ಆಳದಲ್ಲಿ ಸ್ಪರ್ಶಿಸುವ ಅನುಭವ ಆಗುವುದಿಲ್ಲ. ಆದರೂ ಜೀವನದ ಹತ್ತು ಹಲವು ಚಿತ್ರಗಳ ಮೂಲಕವೂ ಒಂದು ಸಮಗ್ರ ದೃಷ್ಠಿಯಲ್ಲಿ ಅವಕ್ಕೆಲ್ಲ ಐಕ್ಯವನ್ನು ತಂದುಕೊಳ್ಳುವುದು. ಲೇಖನಿಗೆ ಸಾಧ್ಯವೆಂಬುದಕ್ಕೆ ಮಾಸ್ತಿಯವರೇ ಒಳ್ಳೆಯ ಉದಾಹರಣೆಯಾಗಿದ್ದಾರೆ.

ಹಾಗೆಯೇ ಮಾಸ್ತಿಯವರ ಕತೆಗಳು ಪಾಶ್ಚಾತ್ಯ ಕತೆಗಳಂತೆ ಅನಿರೀಕ್ಷಿತ ತಿರುವಿನ ಅರ್ಥ ಸ್ಫೋಟದಲ್ಲಿ ತಟ್ಟನೆ ಮುಗಿಯುವುದು ಇಲ್ಲ . ಜನಪದ ಕತೆಗಳ ಹಾಗೆಯೇ ನಿಧಾನವಾಗಿ , ಶಾಂತವಾಗಿ ಸಮಾಧಾನದ ಸ್ಥಿತಿಯಲ್ಲಿ ಮುಗಿಯುತ್ತದೆ.

ಮಾಸ್ತಿಯವರು ಒಂಭತ್ತನೇಯ ದಶಕದ ಪೂರ್ವಭಾಗದಲ್ಲಿ –ಅಂದರೆ ಅವರ ಸುಮಾರು ತೊಂಭತ್ತನೇಯ ವಯಸ್ಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆದ ಕವಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು. ಅದರ ಅಧ್ಯಕ್ಷತೆ ವಯಸಿದ್ದವರು ಡಾ. ವಿನಾಯಕ ಕೃಷ್ಣ ಗೋಕಾಕ್‌ರು . ಆಗ ತಮ್ಮ ಕವಿತೆಯನ್ನು ವಾಚನ ಮಾಡುತ್ತಾ ಮಾಸ್ತಿಯವರು ಹೇಳಿದ ಮಾತು ಅರ್ಥಪೂರ್ಣವಾದದ್ದು "ಮೂವತ್ತು ವರ್ಷದ ತರುಣಿ ಹಡೆದದ್ದು ಮಗುವೇ ಇಳಿ ವಯಸ್ಸಿನ ಹೆಣ್ಣು ಮಗಳು ಹಡೆದದ್ದು ಮಗುವೇ ಯಾರೂ ಹಡೆದರೆನ್ನುವುದಿಲ್ಲ ಮುಖ್ಯ. ಮಗು ಹೇಗಿದೆ ಎನ್ನುವುದು" 1. ಅವರ ಈ ಮಾತು ಸೃಜನಶೀಲತೆಗಿರುವ ಸದ್ಯೋಜಾತ ಶಕ್ತಿಯನ್ನು ಸೂಚಿಸುತ್ತದೆ. ಅವರು ಅಲ್ಲಿ ಒಬ್ಬ ಕವಿತೆಯಂತೆ ಪಾಲ್ಗೋಂಡಿದ್ದು ಅವರ ಸೌಜನ್ಯ ಹಾಗೂ ಸಾಹಿತ್ಯ ನಿರ್ಮಾಣಕ್ಕೆ ಅಗತ್ಯವಾದ ಆರೋಗ್ಯಕರ ಮನಸ್ಥಿತಿಯನ್ನು ವ್ಯಂಜಿಸುತ್ತದೆ.

ಮಾಸ್ತಿಯವರ ಕಥೆಗಳನ್ನು ಕುರಿತು ಎಂ.ಜಿ.ಕೃಷ್ಣಮೂರ್ತಿಯವರು ಸಮಕಾಲಿನ ಸಮಾಜಿಕ ಚೌಕಟ್ಟುಗಳ ಸಂವೇದನಾ ಶೀಲತೆಗೆ ಸ್ತಂಬದ್ದವಾಗಿರುವುದರಿಂದ ಸಂವೇದನೆ ಬದಲಾದಂತೆ ಭಾವವನ್ನು ಕಳೆದುಕೊಳ್ಳಬಹುದು" 2.ಎನ್ನುತ್ತಾರೆ.

ಇದು ವಿಮರ್ಶಕ ಜ್ಯೋತಿಷಿಯಾಗಿ ಹೇಳುವ ಮಾತು ವಾಸ್ತವವಾಗಿ ಮಾಸ್ತಿಯವರ ಕಥೆಗಳ ಕಲೆಗಾರಿಕೆ ಎಷ್ಟು ಸಶಕ್ತವಾಗಿ ಮುಂದಿನ ತಲೆಮಾರಿನ ಪ್ರಮುಖ ಕಥೆಗಾರರನ್ನು ಪ್ರಭಾವಿಸಿದೆಯೆಂಬುದು ಗಮನಿಸಿದರೆ ಈ ಮಾತನ್ನು ಒಪ್ಪುವುದು ಕಷ್ಟ . ಯಶವಂತ ಚಿತ್ತಾಲ, ಅನಂತಮೂರ್ತಿ, ಲಂಕೇಶ್, ಮಾಸ್ತಿಯವರ ಕಲಾ ಪ್ರತಿಭೆಯಿಂದ ಪ್ರಭಾವಿತರಾಗಿದ್ದಾರೆ.

---

1) ಶ್ರೀನಿವಾಸ – ನವ ಕರ್ನಾಟಕ ಸಾಹಿತ್ಯ ಸಂಪದ – ಕೇಂದ್ರ – ಸಾಹಿತ್ಯ ಅಕಾಡೆಮಿ ಪುರಸ್ಕೃತರು ಪುಟ : 44

2) ಅದೇ ಪುಟ : 99

ಮಾಸ್ತಿಯವರ ಸಾಹಿತ್ಯದಲ್ಲಿ ಅವರ ಸಂಯಮ ಒಂದು ವಿಶಿಷ್ಟವಾದ ಕಾಂತಿ ಪಡೆಯುತ್ತದೆ. ಮಾಸ್ತಿ ಮಾತಿನ ಬಳಕೆಯಲ್ಲಿ ತೋರುವ ಸಂಯಮ ಅಸಾಧಾರಣವಾದದ್ದು. ಅವರ ಶೈಲಿಯ ಹೆಗ್ಗುರುತ್ತು ಅದು. ಅವರು ಎಂದು ಯಾವ ಭಾವತೀರೇಕಕ್ಕೂ , ಉತ್ಪ್ರೇಕ್ಷೆಗೂ ,ಬೆಡಗು, ಬಿನ್ನಾಣಗಳಿಗೂ ಹೋಗುವರಲ್ಲ ಹೇಳುವುದನ್ನು ಅದಷ್ಟೂ ಕಡಿಮೆ ಪದಗಳಲ್ಲಿ ಹೇಳುವ ವ್ರತ ಅವರದು. ನೂರು ಕಥೆ ಬರೆದಿದ್ದಾರೆ. ಅವರದು ನೂರು ಇಪ್ಪತ್ತಾರು ಪುಸ್ತಕಗಳಿವೆ. ಅಷ್ಟು ಬರೆದರೂ ಎಲ್ಲೂ ಏಕೆ ಇಷ್ಟೊಂದು ಬರೆಯುತ್ತಾರಪ್ಪಾ ಎಂದು ಅನ್ನಿಸುವುದಿಲ್ಲಾ ಹೇಳಬೇಕಾದನ್ನು ಹೇಳಿ, ಸಾಕಷ್ಟನ್ನೂ ಹೇಳದೆ ಉಳಿಸಿ, ನಮ್ಮ ಮನಸ್ಸು ಕೆಲಸ ಮಾಡುವಂತೆ ಮಾಡುತ್ತಾರೆ. ಭಾಷೆಯ ಬಗ್ಗೆ ವಾಲ್ಮೀಕಿಗೆ ಎಂದು ಅಳಿಯದ ಕೌತುಕ, ಅದರ ಶ್ರದ್ದೆ ಅದು ಬದುಕಿನ ಒಂದು ಜೀವಂತ ಅಂಗ ಎಂಬ ಭಾವನೆ ಇರುವುದೆಂಬ ಬಗ್ಗೆ ಕೇಳಿದ್ದೇವೆ. ಒಳ್ಳೆಯ ಸರಳವಾದ ಶುದ್ದವಾದ ಸಂಸ್ಕೃತ ಕಲಿಯಬಯಸುವವರು ವಾಲ್ಮೀಕಿಯನ್ನು ಓದಬೇಕು ಎಂಬ ಮಾತನು ಕೇಳಿದ್ದೇವೆ. ಮಾಸ್ತಿಯವರು ಹಾಗೇಯೆ ಒಳ್ಳೆಯ ಕನ್ನಡ ಕಲಿಯಬೇಕಾದರೆ ಮಾಸ್ತಿಯನ್ನೊದಬೇಕು. ಅವರ ಭಾಷೆ ಅತ್ಯಂತ ಸ್ವಚ್ಚ, ಕಥೆಗಳ ಶೈಲಿ ಸರಳ ಹೇಳುವ ರೀತಿ ನೇರ. ಎಂದು ಅವರು ತಂತ್ರಕ್ಕಾಗಿ ಒದ್ದಾಡಿದವರಲ್ಲಾ ಕಥೆ ಹೇಳುವುದು ವಿರ್ಮಶಕರಿಗಾಗಲ್ಲ, ಜನಕ್ಕಾಗಿ ಎಂಬುದನ್ನು ಉದ್ದಕ್ಕೂ ಪಾಲಿಸಿದವರು. ಆದರೆ ಆ ಸರಳತೆಯಲ್ಲೂ ಒಂದು ಬಗೆಯ ಕಲೆ ಹುದುಗಿದೆ. ಬದುಕಿನಲ್ಲಿ ಸರಳತೆ ಸಾಧಿಸುವುದು ಎಷ್ಟು ಕಷ್ಟವೋ ಸಾಹಿತ್ಯದಲ್ಲೂ ಅಷ್ಟೇ ಅಲ್ಲವೇ ?

ಒಟ್ಟಿನಲ್ಲಿ ಮಾಸ್ತಿಯವರದು ಉದ್ವೇಗ ರಹಿತವಾದ ಶಾಂತವಾದ ಬರವಣಿಗೆ ಎಂಬುದನ್ನು ಎಲ್ಲ ವಿಮರ್ಶಕರು ಗಮನಿಸಿದ್ದಾರೆ.

ಸಮನ್ವಯ 'ಸಮರಸ್ಯ' ಎಂಬುದು ಮಾಸ್ತಿಯವರ ಮಟ್ಟಿಗೆ ಒಂದು ವಿಶೇಷ ಪದ ಪ್ರಯೋಗವಲ್ಲ ಅದು ಅವರ ಬಾಳಿನ ಸಮಗ್ರತೆಯನ್ನು ಏಕಾಗ್ರತೆಯನ್ನು ಒಂದಾಗಿಸಿದೆ. ಅವರು ನಂಬಿ, ನೆಚ್ಚಿ, ನುಡಿದು ನಡೆದು ಬಂದ ಮೌಲ್ಯಗಳ ವೈಶಾಲ್ಯವನ್ನು, ನೈರ್ಮಲ್ಯವನ್ನು, ಸಾಫಲ್ಯವನ್ನು ವ್ಯಾಪಿಸಿ ಅದಕ್ಕೊಂದು ಕೈವಲ್ಯ ತಂದಿರಿಸಿದೆ 'ಶೀಲದಂತೆ ಶೈಲಿ' ಎಂಬ ಮಾತು ಇವರ ಜೀವನದ ಧಾತುವಾಗಿದೆ. ಅವರ ವ್ಯಕ್ತಿತ್ವದಲ್ಲಿ ಯಾವ ಬೆರಕೆಯು ಇಲ್ಲ, ಯಾವ ಬಿರುಕು ಇಲ್ಲ.

ಒಟ್ಟಿನಲ್ಲಿ ಮಾಸ್ತಿಯವರಿಂದ ನಮ್ಮ ನಾಡಿನ ಹಿರಿಮೆ ಬೆಳೆಯಿತು. ಅವರ ಪರಿಶುದ್ಧ ಅಂತರಂಗದ ಪ್ರತೀಕಗಳಾಗಿ ನಿಂತಿವೆ. ಅವರ ಹಲವು ಕೃತಿಗಳು ಆದರೆ ಅವರ ಸ್ನೇಹ , ಸೌಜನ್ಯ , ಕರುಣೆ , ಹಲವರ ಜೀವನವನ್ನು ಹಸನು ಮಾಡಿದೆ. 'ಹೇಳದೆ ಧರ್ಮವ ಕಲಿಸುವ ಗುರುವಾಗಿ" ಪ್ರೇಯಸ್ಸಿನ ಮಾರ್ಗದಲ್ಲಿ ಶ್ರೇಯಸ್ಸಿಗೆ ಒಯ್ದಿದಾರೆಯವರು ಹಲವು ಮಿತ್ರರ ಬಾಳನ್ನು.

ಕೋಲಾರ ಜಿಲ್ಲೆಯ ಮಲೂರು ತಾಲೋಕಿನ ಮಾಸ್ತಿಯಲ್ಲಿ 1891 ರ ಜೂನ್ 8 ರಂದು ಜನಿಸಿದ ಮಸ್ತಿಯವರು ಬೆಂಗಳೂರಿನ ಬಸವನಗುಡಿಯ ಅವರ ಮನೆಯಲ್ಲಿ 1986ರಜೂನ್ 7 ರಂದು ನಿಧನರಾದರು. 95 ವರ್ಷಗಳ ಅವರ ತುಂಬ ಜೀವನ ಅನನ್ಯ. ಚಿನ್ನದಗಣಿ ಇರುವ ಜಿಲ್ಲೆಎಂದೆ ಹೆಸರಾಗಿರುವ ಕೊಲಾರ ಜಿಲ್ಲೆಯವರಾದ ಡಾ.ಮಾಸ್ತಿವೆಂಕಟೇಶ್ ಆಯ್ಯಾಂಗರ್ ಅವರು ಕನ್ನಡ ಸಾರಸ್ವತ ಲೋಕದ ಚಿನ್ನದ ಗಣಿಯಂತಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು

ತಮ್ಮ ಬಾಳಿನುದ್ದಕ್ಕು ಒಳಿತನ್ನು ಸ್ಮರಿಸುತ್ತಾ ಆಶಿಸುತ್ತಾ ಹರಸುತ್ತಸಾಗಿದ ಮಾಸ್ತಿ ವೆಂಕಟೇಶ್ ಆಯ್ಯಂಗರ್ ಧನ್ಯ ಜೀವಿ'ಎಂದು ಅಂದು ಡಿ.ವಿ.ಜಿ ಹೇಳಿದ ನುಡಿ ಇಂದಿಗೂ ಸ್ಮರಣಿಯ. ಬರೆದಷ್ಟು ಇನ್ನು ಉಳಿಯುತ್ತದೆ ಉಳಿಯಬೇಕೆಕೆ ಎಂದು ಮತ್ತೆ ಬರೆದರು ಮತ್ತೊ ಉಳಿಯುತ್ತದೆ.'ಎಳೆಯ ಮಗುವಿನ ಮೊಗದ ನೆಗೆಯುವುದು ಮೊಗದೆ"ಎಂದು ಮಾಸ್ತಿಯವರು ಗಾಂದಿಜೀಯನ್ನು ಕುರಿತು ಬರೆದಿದ್ದಾರೆ.ಈ ಮಾತು ಅವರಿಗೆ ಬೇಕದಷ್ಟು ಅನ್ವರ್ಥಕವಾಗುತ್ತದೆ.

ಅಧ್ಯಾಯ-3

ಅ.ನ.ಕೃ ಅವರ ವ್ಯಕ್ತಿತ್ವ ಮತ್ತು ಸೃಜನಶೀಲತೆ

ಸುಪ್ರಸಿದ್ಧ ಕನ್ನಡ ಸಾಹಿತಿ ಶ್ರೀ ಅ.ನ.ಕೃಷ್ಣರಾವ್ ಅವರು ಕನ್ನಡ ನಾಡಿನ ಹೊರಗೂ ಕೀರ್ತಿತರಾಗಿರುವ ಕೆಲವೇ ಕನ್ನಡ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಅವರು ಕೃಷಿ ಮಾಡದ ಸಾಹಿತ್ಯ ಪ್ರಕಾರವಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ.

ಅ.ನ.ಕೃ ಅವರ ಬದುಕು ಕನ್ನಡದ ಬದುಕು. ಅನಕೃ ಅದೊಂದು ವ್ಯಕ್ತಿಯಲ್ಲ, ಒಂದು ಶಕ್ತಿ. ಅವರ ಯಾವುದೇ ಒಂದು ಚಟುವಟಿಕೆಯನ್ನು ಕುರಿತು ಬರೆದರೂ ಅದೊಂದು ವಿಸ್ತಾರವಾದ ಕೃತಿಯಾಗುವುದರಲ್ಲಿ ಸಂದೇಹವಿಲ್ಲ. ಅಷ್ಟು ವಿಸ್ತಾರವಾದ ಅಭ್ಯಾಸ, ಕನ್ನಡನಾಡಿನ ಸರ್ವತೋಮುಖವಾದ ಏಳಿಗೆಗಾಗಿ ಚಿಂತನೆ ಮುಂದೆ ಬರುವ ಕನ್ನಡ ಮಕ್ಕಳಗಾಗಿ ಭವ್ಯವಾದ ಭವಿಷ್ಯವನ್ನು ವಿರಚಿಸುವ ಹವ್ಯಾಸ ಒಂದಲ್ಲ ಎರಡಲ್ಲ ಹತ್ತು ಹಲವು ಮುಖಗಳಲ್ಲಿ ದಶರಥನಂತೆ ದಿವ್ಯಾಶ್ವಗಳನ್ನು ನಡೆಯಿಸಿದ ಸೇನಾನಿ ಅವರು ಅ.ನ.ಕೃ ಅವರು ನರಸಿಂಗರಾವ್ ಮತ್ತು ಅನ್ನಪೂರ್ಣಮ್ಮನವರಿಗೆ ಅರಕಲಗೂಡಿನಲ್ಲಿ 1908 ಮೇ. 9 ರಮದು ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣ ಕೂಲಿಮಠದಲ್ಲಿ ಪ್ರಾರಂಭವಾಯಿತು. ಭೂಗೋಲವೆಂದರೆ ತಲೆನೋವು. ಹಾಗೂ ಹೀಗೂ ತೆವಳಿಕೊಂಡು ಲೋವರ್ ಸೆಕೆಂಡರಿ ಮುಟ್ಟಿದರು. ಅವರ ಮೇಲೆ ಆ ಕಾಲದಲ್ಲಿ ಪ್ರಭಾವ ಬೀರಿದ ಗುರುಗಳೆಂದರೆ ಸೀತಾರಾಮಶಾಸ್ತ್ರಿ ಮತ್ತು ಗೋವಿಂದರಾಯರು.

ಅ.ನ.ಕೃ ಅವರ ಎಳೆಯ ವಯಸ್ಸಿನ ಮೇಲೆ ದೇಶಭಕ್ತಿ ಮತ್ತು ಧರ್ಮಶ್ರದ್ಧೆ ಅಳಿಯಲಾರದ ಪರಿಣಾಮ ಒದಗಿಸುತ್ತಿತ್ತು. ತಂದೆಯ ನಿಸ್ಪೃಹ ವೃತ್ತಿ. ತಾಯಿಯ ಸಂಪದ್ವಿನಿ ಯೋಗದೃಷ್ಟಿ, ದೇಶೀಯ ವಿದ್ಯಾಶಾಲೆಯ ದೇಶ ಸೇವೆಯ ವ್ರತ. ಅಲ್ಲಿಗೆ ಬರುತ್ತಿದ್ದ ದೇಶದ ಮುಂದಾಳುಗಳ ಭಾರತೀಯ ದೃಷ್ಟಿ ಎಲ್ಲವೂ ತರುಣ ಮನಸ್ಸಿನ ಮೇಲೆ ಪರಿಣಾಮ ಬೀರಿದವು.

ಅ.ನ.ಕೃ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಹುಲುಸಾದ ಬೆಳೆ ನಿರ್ಮಿಸಿದುದರ ಜೊತೆಗೆ ಎಲ್ಲ ವಿಧದ ರಾಜಕೀಯ,ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಹಿಂದೂ,ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳ ಆಳವಾದ ಅಭ್ಯಾಸ ನಡೆಸಿದ್ದಾರೆ. ಅವರ ಅಪರಿಮಿತವಾದ ಓದು, ಆಳವಾದಜೀವಾನನುಭವಗಳ

ಜೊತೆಗೆ ಪಿತೃಗಳಿಂದ ಬಂದ ಅಮೂಲ್ಯ ಸಾಂಸ್ಕೃತಿಕ ಸಂಪತ್ತು, ಸಮಭಾವದ ಅಮೂಲ್ಯ ನಿಧಿ ಚಿರಂತನ ಸೆಲೆಯಾಗಿ ಅವರ ಅಂಗಾಂಗಗಳಲ್ಲಿ ಪ್ರವಹಿಸಿ ನಾಡನ್ನು ಕಟ್ಟುವುದಕ್ಕೆ ನೆರವಾಯಿತು.

"ಅ.ನ.ಕೃ ಅಚ್ಚ ಕನ್ನಡ ಕುಲದವರು. ಹುಟ್ಟಿನಿಂದಲೇ ಕನ್ನಡಿಗರಾದ ಅವರು ಜೀವನದಿಂದಲೂ ಕನ್ನಡಿಗರಾಗಿದ್ದಾರೆ. ಅವರ ಕುಲಕನ್ನಡ ಕುಲ. ಧರ್ಮ ಕನ್ನಡ ಧರ್ಮ ಕರ್ಮವೂ ಕನ್ನಡಕ್ಕೆ ಮೀಸಲು. ಕನ್ನಡದೊಂದಿಗೆ ತಾದಾತ್ಮ್ಯವನ್ನು ಹೊಂದಿದ ಕೆಲವೇ ಜನರಲ್ಲಿ ಕೃಷ್ಣರಾಯರು ಒಬ್ಬರು"1.

ಎಂದು ತ.ರಾ.ಸು ಹೇಳಿರುವುದು ಒಪ್ಪುವಂತದ್ದಾಗಿದೆ.

ಕನ್ನಡವನ್ನು ಒಂದು cause ಎಂದು

ಕಟ್ಟಿಕೊಂಡು ಬದುಕಿದವರುಂಟು

ಕಾಸಿಗೋಸ್ಕರ ಕನ್ನಡವನ್ನು

ಕಟ್ಟಿಕೊಂಡು ಬದುಕಿದವರುಂಟುಅ.ನ.ಕೃ ಅವರು ಮೊದಲಿನ ವರ್ಗಕ್ಕೆ ಸೇರಿದವರು ಎಂದು ಡಾ.ಜಿ.ಪಿ ರಾಜರತ್ನಂ ಅ.ನ.ಕೃ ಪ್ರಕಟಿಸಿದ 'ಸ್ನೇಹದ ದೀಪದ' ಮೊದಲಲ್ಲೇ ಸಾರಿದ್ದಾರೆ. ಅ.ನ.ಕೃ ಅವರು ನಿಜದ ನೇರಕ್ಕೆ ಬದುಕನ್ನು ತೇದವರು. ಗಂಡು ಗುಣ ಅವರ ಪ್ರಧಾನ ಲಕ್ಷಣ. ಸದಾ ಹಿರಿಯರಲ್ಲಿ ಪ್ರೀತಿ, ವಿಶ್ವಾಸ ತೋರುತ್ತಾ, ಕಿರಿಯರಲ್ಲಿ ವಾತ್ಸಲ್ಯಮಯಿಯಾಗಿ ಬಾಳಿದವರು.

ಅರಕಲಗೂಡು ನರಸಿಂಗರಾಯ ಕೃಷ್ಣರಾಯ ಅ.ನ.ಕೃ ಎಂದು ಸಂಕ್ಷಿಪ್ತ ನಾಮದಿಂದ ಕನ್ನಡ ನಾಡಿನಲ್ಲಿ ಜನಪ್ರಿಯವಾಗಿ ಸುಮಾರು ನಾಲ್ಕು ದಶಕಗಳ ಕಾಲ ಕನ್ನಡವನ್ನು, ಕರ್ನಾಟಕವನ್ನು ಕಟ್ಟಲು ಪ್ರಯತ್ನಿಸಿದರು. 250 ಕೃತಿಗಳನ್ನು ರಚಿಸಿದರು. ಅವರ ವೈವಿಧ್ಯಮಯ ಬರವಣಿಗೆಗಳ ನಡುವೆ ಅವರನ್ನು ಮುಖ್ಯವಾಗಿ ಗುರುತಿಸುವುದು ಕಾದಂಬರಿಕಾರರಾಗಿ. ಪ್ರಚಂಡ ಉತ್ಸಾಹ ಮತ್ತು ಚೈತನ್ಯಗಳಿಂದ ಅವರು ಎಷ್ಟು ಜನಪ್ರಿಯರಾಗಿದ್ದರೋ ಅಷ್ಟೇ ಭಿನ್ನಾಭಿಪ್ರಾಯಗಳ ಕೇಂದ್ರವಾಗಿದ್ದರು. ಇವರ ಇಡೀ ಬದುಕನ್ನು ಪರಿಶೀಲಿಸಿದಾಗ ಮುಖ್ಯವಾಗಿ ಕಂಡು ಬರುವ ಮನೋಧರ್ಮ 'ಕರ್ನಾಟಕತ್ವ'. ಅ.ನ.ಕೃ ಅವರ ಬದುಕನ್ನು ಕೇವಲ ಅವರ ಸಾಹಿತ್ಯ ನಿರ್ಮಿತಿಯನ್ನು

---

1) ["ಅ.ನ.ಕೃ" ತ.ರಾ.ಸು ಪುಟ 181]

ಮಾತ್ರ ಗಮನಿಸುವುದರಿಂದ ಅವರ ಧೀಮಂತ ವ್ಯಕ್ತಿತ್ವ ಪೂರ್ಣವಾಗುವುದಿಲ್ಲ.

ಕೃಷ್ಣರಾಯರು ಸರಳ ಸ್ವಭಾವದವರು, ಸೌಜನ್ಯಶೀಲರು, ಹಿರಿಯರಲ್ಲಿ, ಕಿರಿಯರಲ್ಲಿ ಒಂದಾಗಿ ಬೆರೆಯಬಲ್ಲರು. ಅಂತೆಯೇ ಅ.ನ.ಕೃ ಘಾತಕತನವನ್ನಾಗಲಿ ಮುಚ್ಚು ಮರೆಯನ್ನಾಗಲಿ ಅರಿಯಲಾರದವರಾಗಿದ್ದರು. ಆದರೆ ಅ.ನ.ಕೃ ಮೇಧಾವಿ, ಸುಜ್ಞಾನಿ. ಅಪಾರಲೋಕಾನುಭವವುಳ್ಳ ಕನ್ನಡ ಸಾಹಿತಿ. ಅವರ ಅರಿವಿನ ಅಳತೆಗೊಳಗಾಗದ ಲಲಿತಕಲೆಯೇ ಇಲ್ಲವೆನಿಸುತ್ತದೆ. ಮನುಷ್ಯ ಜೀವನದ ವಿವಿಧ ಮುಖಗಳ ಪರಿಚಯವಿದ್ದ ಅ.ನ.ಕೃ ತಮ್ಮ ಅನುಭವವನ್ನು ಕನ್ನಡ ಸಾರಸ್ವತ ಲೋಕಕ್ಕೆ ಧಾರೆಯೆರೆದಿದ್ದಾರೆ.

ತಾರುಣ್ಯದಲ್ಲೇ ಗಾಂಧಿಜೀ, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಪಂಡಿತ ತಾರಾನಾಥ, ಕೈಲಾಸಂ ಪ್ರಭಾವಕ್ಕೆ ಒಳಗಾಗಿ ತಮ್ಮ ಮುಂದಿನ ಬದುಕನ್ನು ರೂಪಿಸಿಕೊಡರು. ಜೀವನದಲ್ಲಿ 'ಬಿ.ವೆಂಕಟಚಾರ್ಯ' ಹಾಗೂ 'ಗಳಗನಾಥ' ಅನುವಾದಿತ ಕಾದಂಬರಿಗಳ ಓದು ಎಂ.ಎಸ್ 'ಪುಟ್ಟಣ್ಣ' ನವರ ಕೃತಿಗಳ ಅಧ್ಯಯನ ಮುಂದೆ ಕಾದಂಬರಿಯನ್ನು ಅ.ನ.ಕೃ ತಮ್ಮ ಸೃಜನಶೀಲ ಮಾಧ್ಯಮವನ್ನಾಗಿ ಆರಿಸಿಕೊಳ್ಳಲು ಪ್ರೇರಣೆ ನೀಡಿತು 1924 ರಲ್ಲಿ ಮದುವೆಯೋ ಮನೆ ಹಾಳೋ" ಎಂಬ ನಾಟಕದ ಮೂಲಕವಾಗಿ ತಮ್ಮ 16ನೇಯ ವಯಸ್ಸಿನಲ್ಲಿಯೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಸಿಸಿದ ಕೃಷ್ನರಾಯರು ಆಧುನಿಕ ಕನ್ನಡ ಸಾಹಿತ್ಯದ ಒಂದು ಶಕ್ತಿಯಾಗಿದ್ದಾರೆ. ಪ್ರಗತಿಶೀಲ ಸಾಹಿತ್ಯ ಪಂಥವನ್ನು ಕನ್ನಡಕ್ಕೆ ತಂದು ಕನ್ನಡ ಸಾಹಿತ್ಯದಲ್ಲಿ ವಾಸ್ತವಿಕತೆಯ ಬೇರಿಳಿಸಿದವರು ಶೈಲಿ, ಸಂಭಾಷಣೆಗಳು ಕೃಷ್ಣರಾಯರ ಕೃತಿಗಳ ಬತ್ತದ ಆಕರ್ಷಣೆ. ವಸ್ತು ಸಮಸ್ಯೆಗಳ ವೈವಿದ್ಯದ ದೃಷ್ಟಿಯಿಂದ ಅವರ ಕೃತಿ ಪ್ರಪಂಚ ವಿಸ್ತಾರವಾದದ್ದು. ಮಧ್ಯಮ ವರ್ಗದ ಜನರ ಸುಖ ದುಃಖ ಅವರ ಕಾದಂಬರಿಗಳ ಕೇಂದ್ರ.

ಸುಮಾರು ಕಳೆದ ಶತಮಾನದ ನಲವತ್ತರ ದಶಕದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಚಳುವಳಿ ಕನ್ನಡ ಸಾಹಿತ್ಯದ ಹೊಸ ತಿರುವಿಗೆ ಲವಲವಿಕೆಗೆ ವಾಗ್ವಾದಕ್ಕೆ ಕೇಂದ್ರ ಬಿಂದುವಾಯಿತು. ಈ ಒಂದು ಪಂಥದಲ್ಲಿ ಮುಖ್ಯವಾಗಿ ಕಂಡು ಬಂದವರು ಅ.ನ.ಕೃ. ಅವರು 1924 ರಲ್ಲಿ ಸಾಹಿತ್ಯರಂಗ ಪ್ರವೇಶಿಸಿದ ಅ.ನ.ಕೃ 1930 ರಲ್ಲಿ ಧಾರವಾಡದಲ್ಲಿ ನಡೆದ ಮೊದಲ ಸಮ್ಮೇಳನಕ್ಕೆ

ಅತಿಥಿಯಾಗಿ ಹೋದರು. 1932 ರಲ್ಲಿ ಬರೆದ ಭಾರತೀಯ ಚಿತ್ರಕಲೆಯಲ್ಲಿ ರಾಜ ರವಿವರ್ಮನಸ್ಥಾನ 'ಕನ್ನಡದಲ್ಲಿ ಚಿತ್ರಕಲಾ ವಿಮರ್ಶೆ ಒಳಗೊಂಡ ಮೊದಲ ಪುಸ್ತಕ ಅ.ನ.ಕೃ. ಕರ್ನಾಟಕ, ಹಿಂದೂಸ್ತಾನಿ ಸಂಗೀತ ಸಂಪ್ರದಾಯಗಳ ಬಗ್ಗೆ ತೋರಿದ ಪ್ರೀತಿ ಅದಕ್ಕಾಗಿ ಅವರು ಮಾಡಿದ ಪರಿಚಾರಿಕೆ ಅನೇಕ ಕಲಾವಿದರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಟ್ಟಿತ್ತು. 1936-37 ರಲ್ಲಿ "ವಿಶ್ವವಾಣಿಯ" ಸಂಪಾದಕರಾಗಿ 1939ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನುಡಿಯ ಮೊದಲ ಸಂಪಾದಕರಾದರು. 1969 ರಲ್ಲಿ ಕನ್ನಡ ಸಾಹಿತ್ಯ ಆಕಾಡೆಮಿಯ ಪ್ರಶಸ್ತಿ ಲಭಿಸಿತು. 1970 ರಲ್ಲಿ ಮೈಸೂರು ವಿಶ್ವವಿಧ್ಯಾನಿಲಯ ಗೌರವ ಡಾಕ್ಟರೇಟ್ ಪದವಿಯಿತ್ತು ಗೌರವಿಸಿತು. ಕೊನೆಯುಸಿರಿರುವ ತನಕ ನಾಡು ನುಡಿಯ ಬಗ್ಗೆ ಮುಂಚೂಣಿಯ ಹೋರಾಟಗಾರರಾಗಿಯೇ ಇದ್ದರು.

ಅ.ನ.ಕೃ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ನವೀನ ಪ್ರಯೋಗಗಳನ್ನು ನಡೆಸಿದ್ದಾರೆ ಆದೆರೆ ಅವರಿಗೆ ಕೀರ್ತಿಯನ್ನು ತಂದುಕೊಟ್ಟದ್ದು ಕಾದಂಬರಿ ಮಾದ್ಯಮ. ಬರವಣಿಗೆಯನ್ನು ವೃತ್ತಿಯಾಗಿ ಮಾಡಿಕೊಂಡರು ಕೃತಿಗಳ ಸಂಖ್ಯೆ ದೃಷ್ಟಿಯಿಂದ ಪ್ರಯೋಗಗಳ ದೃಷ್ಟಿಯಿಂದ ವಸ್ತು ವೈವಿದ್ಯದಿಂದ ಮಾಂತ್ರೀಕ ಪ್ರಭಾವವನ್ನು ಬೀರಿದರು 4 ಮತ್ತು 5 ನೇ ದಶಕದಲ್ಲಿ ಕಾದಂಬರಿಯನ್ನು ಪ್ರಮುಖ ಅಭಿವ್ಯಕ್ತಿ ಪ್ರಕಾರವನ್ನಾಗಿ ರೂಪಿಸಿದರೂ " ಮಿಂಚು" 'ಅದೃಷ್ಟ ನಕ್ಷತ್ರ' ಮುಂತಾದ ಕಥಾಸಂಕಲನಗಳಲ್ಲಿ ಹಾಗೂ ಕಾದಂಬರಿಗಳಲ್ಲಿ ಮುಖ್ಯವಾಗಿ ಮಾನವಿಯ ದೋರಣೆಯನ್ನು ಸಾಮಾನ್ಯರಿಗೆ ಬದುಕಿನಲ್ಲಿ ಘನತೆಯನ್ನು ತಂದು ಕೊಡುವ ಪ್ರಯತ್ನ ಮಾಡಿದರು.

'ಉದಯರಾಗ', 'ಸಂಧ್ಯಾರಾಗ"; 'ಸಾಹಿತ್ಯರತ್ನ', 'ಕನ್ನಡಮ್ಮನಗುಡಿ' ಯಲ್ಲಿ 'ದೀಪರಾಧನ' 'ನಟಸಾರ್ವಭೌಮ' 'ಚಿತ್ರವಿಚಿತ್ರ', 'ಬಣ್ಣದಬದುಕು' ಇನ್ನೂ ಮೊದಲಾದ ಕೃತಿಗಳಲ್ಲಿ ಅ.ನ.ಕೃ ಕಲಾವಿದರ ಜೀವನದ ಸೋಲು ಗೆಲುವುಗಳನ್ನು ತೆರೆದಿಟ್ಟಿದ್ದಾರೆ. ಸಂದ್ಯಾರಾಗ ಅವರ ಸಾಹಿತ್ಯಕಾಶದಲ್ಲಿ ಬೆಳಗುವ ಚಿರಂತನ ತಾರೆ. ಕನ್ನಡದಲ್ಲಿ ಬರೆಯುವುದೆ ಅಪಚಾರವಾಗಿದ್ದಂತಹ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಮನೆಮನೆಗೂ ಮುಟ್ಟಿಸಿ ಜನಕೋಟಿ ಅದನ್ನು ಸವಿಯುವಂತೆ ತನ್ನ ಜೀವನ ಪ್ರತಿಬಿಂಬವನ್ನು ಅದರಲ್ಲಿ ಕಾಣುವಂತೆ ಮಾಡಿದ ಕೀರ್ತಿಶಾಲಿಗಳಲ್ಲಿ ಅಗ್ರಸ್ಥಾನ ರಾಯರಿಗೆ! ಕನ್ನಡದಲ್ಲಿ ಏನಿದೆ ಎಂದು ಪರಪ್ರಾಂತೀಯರು ಕೇಳಿದರೆ ಇವು ಎಂದು ತೋರಿಸುವ

ಅಮೂಲ್ಯ ಗ್ರಂಥಗಳಲ್ಲಿ ಸಂಧ್ಯಾರಾಗವೂ ಒಂದು. ಸಮಾಜದಲ್ಲಿ ನಡೆಯುವ ವಾಸ್ತವಿಕ ಘಟನೆಗಳನೆತ್ತಿಕೊಂಡು ಅ.ನ.ಕೃ ಅವರು ಬಹು ಕೌಶಲ್ಯದಿಂದ ಸಂದ್ಯಾರಾಗವನ್ನು ಬರೆದಿದ್ದಾರೆ, ಮಹೋನ್ನತ ಧ್ಯೇಯ ಸಾಧಕನಾದ ಒಬ್ಬ ಕಲಾವಿದನ ಅಂತರಂಗಕ್ಕೆ ಜೀವನ ಒಳತೊಟ್ಟಿಯನ್ನು ಈ ಮಹಾ ಕಾದಂಬರಿಯಲ್ಲಿ ಚೆನ್ನಾಗಿ ಚಿತ್ರಿಸಲಾಗಿದೆ. ಇದು ಎಲ್ಲಾ ಕಾದಂಬರಿಕಾರರಿಗೂ ಸಿದ್ಧಿಸುವ ಕಲೆಯಲ್ಲ ಕನ್ನಡಿಗರ ಜೀವನ ಸಂಸ್ಕೃತಿಯ ಪ್ರತೀಕವಾಗಿದೆ. ಈ ಕಾದಂಬರಿಯು ಹಿಂದಿ, ಇಂಗ್ಲೀಷ್, ಮರಾಠಿ, ತಮಿಳು, ತೆಲುಗು, ಮಲೆಯಾಳಿ ಭಾಷೆಗಳಲ್ಲಿ ಅನುಮೋದನೆಗೊಂಡಿರುವುದು ಜೊತೆಗೆ ಇದು ಅ.ನ.ಕೃ ಅವರ ಸಾಹಿತ್ಯ ಸತ್ವದ ದ್ಯೋತಕವಾಗಿದೆ ಚಲನಚಿತ್ರ ರೂಪದಲ್ಲಿಯು ಸಂದ್ಯಾರಾಗ ತೆರೆಕಂಡಿದೆ.

ಒಟ್ಟಿನಲ್ಲಿ ರಾಯರಿಗೂ ಕನ್ನಡ ಕಲಾವಿದರಿಗೂ ಎಲ್ಲಿಲ್ಲದ ಬಾಂಧವ್ಯ ಕಲೆಯನ್ನು ಅರ್ಥೈಸುವ ಜಾಣ್ಮೆ ರಾಯರಲ್ಲಿದೆ. ಕಲಾವಿದರ ಬಗ್ಗೆ ಆದರವಿದೆ ಕಳಕಳಿಯಿದೆ ದಿನನಿತ್ಯ ಕಲಾವಿದರ ಯಾತ್ರೆ ರಾಯರ ಮನೆಗೆ ತಪ್ಪಿದ್ದಲ್ಲವಂತೆ ನೃತ್ಯಗಾರನಿರಲಿ, ಸಂಗೀತಾಗಾರನಿರಲಿ, ಸಾಹಿತಿಯಾಗಿರಲಿ, ಚಿತ್ರಕಾರನಾಗಿರಲಿ, ನಾಟಕಕಾರನಾಗಿರಲಿ ಯಾರೇ ಬಂದರೂ ಇವರ ಗೃಹಕ್ಕೆ ಸ್ವಾಗತವೆ.

ಅ.ನ.ಕೃ ಯಲಹಂಕ ಭೂಪಾಲ ಮತ್ತು ಕಿತ್ತೂರುರಾಣಿಚೆನ್ನಮ್ಮ ಮತ್ತು ವಿಜಯನಗರ ಸಾಮ್ರಾಜ್ಯವನ್ನು ಕುರಿತು ಐತಿಹಾಸಿಕ ಕಾದಂಬರಿ ಮಾಲೆಯನ್ನು ರಚಿಸಿದ್ದಾರೆ. ಈ ಕಾದಂಬರಿಗಳ ಮುಖ್ಯ ಗುಣವೆಂದರೆ ಕರ್ನಾಟಕ ಚರಿತ್ರೆಯನ್ನು ಜನಪ್ರಿಯಗೊಳಿಸುವುದು 9 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾಮನಬಿಲ್ಲು ಸಂಕಲನಗಳಲ್ಲಿ ದೇಶ ವಿದೇಶದ ಉತ್ತಮ ಕಥೆಗಳನ್ನು ಆಯ್ಕೆ ಮಾಡಿಕೊಂಡು ಸುಧೀರ್ಘವಾದ ಉಪಯುಕ್ತವಾದ ಮುನ್ನುಡಿಗಳನ್ನು ಬರೆದಿದ್ದಾರೆ. ಈ ರೀತಿಯ ಪ್ರಯತ್ನ ಕನ್ನಡದಲ್ಲಿ ಇದೇ ಮೊದಲು.

ಅ.ನ..ಕೃ ಸಾಹಿತ್ಯ ಜೀವನವನ್ನು ಪ್ರಾರಂಭಿಸಿದ್ದೇ ನಾಟಕದಿಂದ. ಕೈಲಾಸಂ, ಶ್ರೀರಂಗರು ನಾಟಕಗಳನ್ನು ಬರೆಯಲು ಪ್ರಾರಂಭಿಸಿದ ಕಾಲದಲ್ಲೇ ಇವರು ನಾಟಕಗಳನ್ನು ಬರೆದರೂ ಕೊನೆಗೆ ಕಾದಂಬರಿಯನ್ನೆ ಆಯ್ಕೆ ಮಾಡಿಕೊಂಡರು

ಅ.ನ.ಕೃ ಕೇವಲ ಕಥಾ ಸಾಹಿತ್ಯ ನಾಟಕಗಳಿಗೆ ಮಾತ್ರ ಸೀಮಿತವಾದ ಬರಹಗಾರರಾಗಿರಲಿಲ್ಲ. ಅವರು ಜೀವನ ಚರಿತ್ರೆ, ವ್ಯಕ್ತಿ ಚಿತ್ರಗಳು, ವಿಮರ್ಶೆ, ಕಲಾವಿಮರ್ಶೆ, ಆತ್ಮಕಥನ ಮತ್ತು ಪ್ರಚಾರ ಸಾಹಿತ್ಯವನ್ನು ರಚಿಸಿದ್ದಾರೆ. ಇವರ ಸಾಹಿತ್ಯಾಭಿವೃದ್ಧಿಯು ಒಂದು ಮುಖ್ಯವಾದುದಲ್ಲ. ನಾನಾ ಮುಖವಾಗಿ ಸಾಗಿದ ಸಾಮರಸ್ಯ ಕಲಾ ಸಾಹಿತ್ಯ, ಬಹುದೇಶ ಸಂಚಾರ, ಬಹುಜನ ಜೀವನದ ಪರಿಚಯ, ಬಹುಭಾಷಾಭಿಜ್ಞತೆ ಇವರ ಸಾಹಿತ್ಯವನ್ನು ಪರಿಪಕ್ವಗೊಳಿಸಿ ಎಲ್ಲರಿಗೂ ಸರಳವಾಗಿ-ಸುಲಭವಾಗಿ ತಿಳಿಯುವ ಸಾಹಿತ್ಯವಾಗಿ ಇವರ ಸಾಹಿತ್ಯ ಕೃಷಿ ಬೆಳೆಯಿತು.

ಕನ್ನಡ ಸಾಹಿತ್ಯ ಸಾರಸ್ವತ ಪ್ರಪಂಚದಲ್ಲಿ ಇವರು ಮಾಡಿದ ಸೇವೆ ಅನುಪಮವಾದುದು. ಅದರಲ್ಲಿಯೂ ಕನ್ನಡ ಕಥಾಪ್ರಪಂಚಕ್ಕೆ ಸಲ್ಲಿಸಿದ ಇವರ ಕಾರ್ಯವನ್ನು ಕನ್ನಡನಾಡು ಎಂದಿಗೂ ಮರೆಯದು. ಕನ್ನಡ ಸಾಹಿತ್ಯದ ಬಗ್ಗೆ ನಾಡಿನ ಸುಸಂಸ್ಕೃತ ಜನ ಅಸಡ್ಡೆಯನ್ನು ತಳೆಯುತ್ತಿರುವಾಗ "ಕಥಾಂಜಲಿ" ಯಿಂದ ಓದುಗರಲ್ಲಿ ಅಭಿರುಚಿಯನ್ನು ಉಂಟುಮಾಡಿತು. ಅವರ ಕಥೆಗಳಲ್ಲಿಯ ಶೈಲಿಯನ್ನು ಮೆಚ್ಚಿದ ಜನ ಕನ್ನಡ ಕಥೆಗಳನ್ನು ಆಸ್ಥೆಯಿಂದ ಓದುತೊಡಗಿದರು. ಇಂದಿಗೂ ಅ.ನ.ಕೃ ಓದುಗರನ್ನು ಪಡೆಯುವುದರಲ್ಲಿ ಹಿರಿಯರಾಗಿದ್ದಾರೆ. ಕಾದಂಬರಿಯ ಲೋಕದಲ್ಲಿ ಅ.ನ.ಕೃ ಹೆಸರು ಮೆರೆಯತೊಡಗಿದ್ದು ಇವರ ಸತ್ವಪೂರ್ಣವಾದ ಜೀವಂತ ಶೈಲಿಗೆ ಸಾಕ್ಷಿಯಾಗಿದೆ.

ಅ.ನ.ಕೃ ಎಂದ ಕೂಡಲೇ ನಮ್ಮ ಕಣ್ಣಮುಂದೆ ಸಾಲುಸಾಲಿಗಿ ಒಂದಕ್ಕಿಂತಲೂ ಒಂದು ಶ್ರೇಷ್ಟವಾದ ಕಾದಂಬರಿ ಮಾಲೆಗಳ ಸರಣಿಯೇ ಹಾದು ಹೋಗುತ್ತದೆ. 'ಕಣ್ಣೀರು', 'ಕಾಲಚಕ್ರ', 'ಜೀವನಯಾತ್ರೆ', 'ಅನುಗ್ರಹ', 'ಮಂಗಳಸೂತ್ರ', 'ಆಶೀರ್ವಾದ', ವಿದ್ಯಾರಣ್ಯ ಮೊದಲಾದ ಅನೇಕ ಉತ್ತಮ ಕೃತಿಗಳು ಹೊರ ಬಂದು ಇವರು 'ಕಾದಂಬರಿ ಸಾರ್ವಭೌಮ' ಎಂಬುದು ಅನ್ವರ್ಥವೆಂದು ತೋರಿಸಿಕೊಟ್ಟಿದೆ.

ಅ.ನ.ಕೃ ವ್ಯಕ್ತಿತ್ವದ ವಿಶೇಷ ಲಕ್ಷಣವೆಂದರೆ ಮಾನವತಾವಾದದಲ್ಲಿ ಅವರಿಗಿದ್ದ ಶ್ರದ್ಧೆ, ಇದು ಅವರ ಸಾಹಿತ್ಯದ ನಂಬಿಕೆಯೂ ಆಗಿದ್ದಿತು. 1930 ರಲ್ಲಿ ಪ್ರಕಟವಾದ ಮಿಂಚು ಸಂಗ್ರಹದ ಮುನ್ನುಡಿಯಲ್ಲಿ "ಈ ನನ್ನ ಅಲ್ಪಸೇವೆಯಿಂದ ಸಮಾಜದ ಘಾತುಕಗಳಿಂದ ಗಾಸಿಗೊಂಡಿರುವವರಿಗೆ ಸ್ವಲ್ಪವಾದರೂ ಮನಶ್ಯಾಂತಿ ದೊರೆತಲ್ಲಿ ಹಾಗೂ ಇವರನ್ನು ನೋಯಿಸುವುದು 'ದೇವ' ನೊಪ್ಪಿದ

ಕೆಲಸವೆಂದು ದಬ್ಬಾಳಿಕೆಯ ದರ್ಪದಲ್ಲಿ ಸತ್ಯ ಪ್ರೇಮಗಳಿಗೆ ತಿಲತರ್ಪಣವನ್ನು ಕೊಟ್ಟಿರುವವರಲ್ಲಿ ತಿಳಿವು ಸ್ವಲ್ಪಾದರೂ ಉಂಟಾದರೆ ನಾನು ಧನ್ಯನೆಂದು ಭಾವಿಸುತ್ತೇನೆ" 2. ಎಂದಿದ್ದಾರೆ. ಸಾಹಿತಿಯಲ್ಲಿ ಕರುಣೆಯ ಮಹತ್ವವೆಷ್ಟಿದೆ ಎಂಬುದನ್ನು ವಿವರಿಸುತ್ತ ಅ.ನ.ಕೃ ಅವರೇ ಹೀಗೆಂದಿದ್ದಾರೆ "ಮಾನವನಿಗೆ ಮ್ಯಾನವ್ಯದಲ್ಲಿ ಗೌರವ, ಮಾನವರಲ್ಲಿ ಅನುಕಂಪ ಮೂಡಿಸುವುದೇ ನನ್ನ ಕಾದಂಬರಿಗಳ ಗುರಿ"3.

ಕೃಷ್ಣರಾಯರಲ್ಲಿ ಪ್ರಧಾನವಾಗಿ ಎದ್ದು ಕಾಣುವ ಗುಣ ಕರ್ನಾಟಕದ ಸಾಹಿತ್ಯ ಮತ್ತು ಲಲಿತಕಲಾ ಸಂಪತ್ತುಗಳ ಮೇಲ್ಮೆ ಹಿರಿಮೆಗಳಲ್ಲಿ ಅವರಿಗಿರುವ ಅಪಾರ ಪ್ರೀತಿ, ಗೌರವ, ರಾಯರ ರಕ್ತನಾಳಗಳಲ್ಲಿ ಪ್ರವಹಿಸುತ್ತಿರುವುದು ಸಂಪೂರ್ಣವಾಗಿ ಕನ್ನಡತನದ ರಕ್ತ . ಕರ್ನಾಟಕದ ಲಲಿತಕಲೆಗಳೆಂದರೆ ರಾಯರಿಗೆ ಮೈನವಿರೆದ್ದು, ಅದರ ಪ್ರಾಚೀನ ಘನ ಅಂತಸ್ತಿನ ನೆನಪು ಹೃದಯಾಂತರಾಳದಿಂದ ಉಕ್ಕೇರಿ ಬರುತ್ತದೆ ಆ ವಿಷಯದಲ್ಲಿ ಉಬ್ಬುಟ್ಟಿ ಮಾತನಾಡುವ ಸ್ಫೂರ್ತಿ ಚಿಮ್ಮುತ್ತದೆ.

ಅ.ನ.ಕೃ ಪ್ರಗತಿಶೀಲರು. ಮಡಿ ಸಾಹಿತ್ಯದ ಬಂಧನವನ್ನು ಕಡಿದೇಗೆದು ನೈಜ ಸಾಹಿತ್ಯವನ್ನು ಸೃಷ್ಟಿಸಿದ ಕೆಲವೇ ಮಂದಿ ಲೇಖಕರಲ್ಲಿ ಅ.ನ.ಕೃ. ಹಿರಿಮಣ್ಣಿ ಅ.ನ.ಕೃ ಕೃತಿಗಳಲ್ಲಿ ಬಂದಷ್ಟು ಟೀಕೆ ಟಿಪ್ಪಣ್ಣಿಗಳು ಬಹುಶಃ ಇತರ ಸಾಹಿತ್ಯ ಕೃತಿಗಳಿಗೆ ಬಂದಿರಲಾರದು ಟೀಕಾಕರರಿಗೆ ಸಮರ್ಪಕವಾದ ಉತ್ತರವನ್ನಿತ್ತು ಬಾಯಿ ಮುಚ್ಚಿಸುವ ಎದಿಕಾರಿಕೆ ಅ.ನ.ಕೃ ರವರಿಗೆ ಇದ್ದುದರಿಂದಲ್ಲೇ ಅವರು ಇಷ್ಟೊಂದು ಕೃತಿಗಳನ್ನು ರಚಿಸಿದರು. ಅ.ನ.ಕೃ ಸಾಹಿತ್ಯವೆಲ್ಲ ಮೇಲ್ಮಟ್ಟದೆಂದು ಯಾರೂ ಹೇಳುವುದಿಲ್ಲ, ಆದರೆ ಅವರ ಕೃತಿಗಳಲ್ಲಿ ಜೆಳ್ಳಿನ ಪ್ರಮಾಣ ಕಡಿಮೆ ಎಂಬುದಂತೂ ಸತ್ಯ.

ಒಟ್ಟಿನಲ್ಲಿ ಅ.ನ.ಕೃ ಕನ್ನಡದ ಮತ್ತೊಬ್ಬ ಹಿರಿಯ ಕಾದಂಬರಿಕಾರ ಕಾರಂತರಂತೆ ಬಹುಮುಖ ಪ್ರತಿಭೆಯುಳ್ಳ ಸಾಹಿತಿ ಮನಮುಟ್ಟುವ ಕಿರುತೆರೆಗಳನ್ನು , ಕವಿತೆಯನ್ನು, ನಾಟಕವನ್ನು ಮೇಲ್ಮಟ್ಟದ ವಿಮರ್ಶೆಯನ್ನು ಬರೆದಿದ್ದಾರೆ. ವಿವೇಕಾನಂದರೇ ಮೊದಲಾದ ಭಾರತ ಭಾಗ್ಯವಿದಾತರ ಜೀವನ ಚರಿತ್ರೆಯನ್ನೂ ಬರೆದಿದ್ದಾರೆ. ಕನ್ನಡ ಮಾತ್ರವಲ್ಲ ಇಂಗ್ಲೀಷ್ ಸಾಹಿತ್ಯದಲ್ಲೂ ಅ.ನ.ಕೃ ಕೈಯಾಡಿಸಿದ್ದಾರೆ.

---

2 ಕನ್ನಡ ಕಥನ ಸಾಹಿತ್ಯ : ಕಾದಂಬರಿ ಪುಟ : 181

3 ಅದೇ ; ಪುಟ - 181

ಅ.ನ.ಕೃ. ಒಳ್ಳೆಯ ವಾಗ್ಮಿ ಬರಹದಂತಯೇ ಮಾತೂ ನಿರರ್ಗಳ ವಿಷಯ ಯಾವದಾದರೂ ಚಿಂತೆಯಿಲ್ಲ ಅವರ ಮಾತಿನ ಝುರಿಯಲ್ಲಿ ಮಿನಿಟಿಗೆ ಮೂವತ್ತರಂತೆ ಉದುರುವ ಪಾಶ್ಚಾತ್ಯಪಾಶ್ಚಾತ್ಯ, ಪೌರ್ವಾತ್ಯ ಲೇಖಕರ ಕಲಾವಿದರ ಕ್ರಾಂತ್ರಿ ಪುರುಷರ ಹೆಸರು ಪಟ್ಟಿಯ ಪಟಾಕಿ ಸರ ಎಂದು ಹಲವಾರು ವಿಮರ್ಶಕರು

ಅಭಿಪ್ರಾಯಪಟ್ಟಿದ್ದಾರೆ. ಕೇಳುವ ಸಹೃದಯನಿಗೆ ಅ.ನ.ಕೃ ಮಾತಿನಲ್ಲಿ ವಿಸ್ಮಯ ಮತ್ತು ಸಮ್ಮೋಹಕ ಗುಣ ಕಾಣಿಸುತ್ತದೆ. ಒಂದರ್ಥದಲ್ಲಿ ಅ.ನ.ಕೃ ಬಾಳು ನೂರು ಹೋರಾಟಗಳ ಕಣ.ಕನ್ನಡತನದ ರಕ್ಷೆ ಮಾತು ಬಂದಾಗಲಂತೂ ಅವರು ಸಾಕ್ಷತ್ ಈದ ಹುಲಿ 'ಶುದ್ದ ಕರ್ನಾಟಕಿ' ಎಂದು ಜರಿಯುವ ಅನ್ಯಭಾಷಾಂಧರಿಗೆ ಅ.ನ.ಕೃ ಸಿಂಹಸ್ವಪ್ನ ಎಂದು ಹಲವು ಜನ ಲೇಖಕರು ಅ.ನ.ಕೃ ಅವರನ್ನು ಕುರಿತು ನುಡಿದಿದ್ದಾರೆ.

ಒಟ್ಟಿನಲ್ಲಿ 50 ವರ್ಷಗಳ ಹಿಂದೆ ಎಲ್ಲೆಲ್ಲೊ ಗುಡಗಾಡಿದ ಪ್ರಗತಿಶೀಲ ಚಳುವಳಿಗೂ ಅ.ನ.ಕೃ ಅಧ್ವರ್ಯ. ಮಾಧುರ್ಯ ಪ್ರಧಾನವಾದ ಸಂಗೀತಕ್ಕೂ , ಚಿತ್ರಕಲೆಯೂ ಅ.ನ.ಕೃ ಅವರಿಗೆ ಪ್ರಿಯವಾದ ವಿಚಾರ ಪಾಶ್ಚಾತ್ಯ ಪೌರ್ವಾತ್ಯವೆಂಬ ತಾರತಮ್ಯವಾಗಲಿ , ದಾಕ್ಷೀಣಾತ್ಯವೆಂಬ ದೃಷ್ಟಿಬೇಧವಾಗಲಿ ಅ.ನ.ಕೃ ಗೆ ಸರ್ವಧಾ ಇಲ್ಲ . ಒಬ್ಬ ವಿಮರ್ಶಕನಿಗೆ ಇರಬೇಕಾದ ನಿಷ್ಠುರ , ಸತ್ಯತೆ , ವಾಗ್ಮಿಗೆ ಇರಬೇಕಾದ ವಾಕ್‌ಪ್ರಭುತ್ವ , ಕಾದಂಬರಿಕಾರನಿಗೆ ಇರಬೇಕಾದ ಊಹಾ ಸಾಮರ್ಥ್ಯ ಮೊದಲಾದ ಗುಣಗಳು ಒಂದೇ ವ್ಯಕ್ತಿಯಲ್ಲಿ ಕಾಣುವುದು ದುರ್ಲಭ . ವಿಮರ್ಶಕನಾಗಿ , ವಾಗ್ಮಿಯಾಗಿ , ಕಾದಂಬರಿಕಾರನಾಗಿ , ನಾಟಕಕಾರನಾಗಿ , ಚಿತ್ರಸಾಹಿತಿಯಾಗಿ , ಚಳುವಳಿಕಾರನಾಗಿ , ಸ್ನೇಹಿತನಾಗಿ , ಸಹಪಾಠಿಯಾಗಿ ತಮ್ಮ ಕಾರ್ಯಗಳಿಂದ ತಮ್ಮ ವ್ಯಕ್ತಿತ್ವದಿಂದ ಎಲ್ಲರನ್ನು ಅಚ್ಚರಿಗೊಳಿಸಿದ್ದಾರೆ. ಅ.ನ.ಕೃ ಅವರ ಸಾಹಿತ್ಯ ಸ್ವರ ಜನಪ್ರಿಯವಾದದು. ಯಾರೇ ಇವರ ಕೃತಿಯನ್ನು ಕೈಗೆತ್ತಿಕೊಂಡು ಓದಲು ಮೊದಲು ಮಾಡಿದರೆ ಮುಗಿಸುವ ತನಕ ಕೆಳಗಿಡಲಾರರು. ಇವೇ ಅ.ನ.ಕೃ ಸಾಹಿತ್ಯ ಸೃಷ್ಟಿಯ ವೈಶಿಷ್ಟ

ಕಳೆದ ಶತಮಾನದ ಎಪ್ಪತ್ತರ ದಶಕದವರೆಗೂ ಜೀವಿಸಿದ ಅ.ನ.ಕೃ ಬದಲಾಗುತ್ತರುವ ಸಾಮಾಜಿಕ ಪರಿಸರಕ್ಕೆ ಪ್ರತಿಸ್ಪಂದಿಸಿದರು. ಆದರೆ ಅವರ ಬೇರುಗಳು ಔದ್ಯೋಗಿಕರಣಕ್ಕೂ ಮುಂಚಿನ

ಪಾರಂಪರಿಕ ಮೌಲ್ಯಗಳಲ್ಲಿ ಶ್ರದ್ಧೆಯಿಟ್ಟ ಗ್ರಾಮಜೀವನದಲ್ಲಿಯೇನಟ್ಟಿದ್ದವು.

ಒಟ್ಟಾರೆ ಆನೆಯನ್ನು ವರ್ಣಿಸಲು ಹೊರಟ ಕುರುಡರ ರೀತಿಯಂತೆ ಆಗುತ್ತದೆ. ಶ್ರೀ.ಅ.ನ.ಕೃಷ್ಣರಾಯರನ್ನು ಕುರಿತು ಹೇಳಬೇಕಾದರೆ. ಏಕೆಂದರೇ ಅವರ ಬದುಕಿನ ವಿವಿಧ ಮುಖಗಳನ್ನು, ಸಾಹಿತ್ಯ ಸಾಮರ್ಥ್ಯವನ್ನು ಎಷ್ಟೆ ಬರೆದರೂ ಅದು ಅಲ್ಪವೇ ಅವರ ಸಾಧನೆ ಅಸೀಮಿತವಾದವುಗಳು.

ಅಧ್ಯಾಯ –4

ಸುಬ್ಬಣ್ಣ ಮತ್ತು ಸಂಧ್ಯಾರಾಗ ಕಾದಂಬರಿಗಳ ಕಥಾ ವಿನ್ಯಾಸ

ಸುಬ್ಬಣ್ಣ :–

ಸುಬ್ಬಣ್ಣ ಎಂಬ ಕಾದಂಬರಿಯು ಒಬ್ಬ ಸಂಗೀತ ಕಲಾವಿದನ ಕಥೆಯಾಗಿದೆ ಕಥೆಯು ಶ್ರೀಮನ್ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ಮೈಸೂರು ಸಿಂಹಾಸನವನ್ನು ಅಲಂಕರಿಸಿದ ಕಾಲದಲ್ಲಿ ನಡೆದದ್ದೆಂದು ಕಾದಂಬರಿಕಾರರು ಸೂಚಿಸಿರುತ್ತಾರೆ.

ನಾರಾಯಣ ಶಾಸ್ತ್ರಿಗಳು ಸಂಸ್ಕೃತ ಪಾರಂಗತರು. ವೇದಾಧ್ಯಯನದ ಮೂಲಕ ವಿದ್ವಾಂಸರು ಎನ್ನಿಸಿಕೊಂಡವರು. ಅವರಿಗೆ ರಾಜಾಶ್ರಯವಿತ್ತು . ನಾರಾಯಣ ಶಾಸ್ತ್ರಿಗಳಿಗೆ ಇಬ್ಬರು ಹೆಣ್ಣು ಮಕ್ಕಳು. ಒಬ್ಬ ಮಗ, ಮಗನೇ ಕೊನೆಯವನು. ಆತ ತಂದೆಯಂತೆ ಸಂಸ್ಕೃತ ಕಲಿತು ಪಂಡಿತನಾಗಿದ್ದರೆ ಸುಬ್ರಹ್ಮಣ್ಯ ಶಾಸ್ತ್ರಿ ಎಂದು ಕರೆಸಿಕೊಳ್ಳುತ್ತಿದ್ದ ಆದರೆ ಹಾಗಾಗದೇ ಇದ್ದ ಕಾರಣ ಸುಬ್ಬಣ್ಣನಾಗಿಯೇ ಉಳಿಯುತ್ತಾನೆ. ಇದಕ್ಕೆ ಕಾರಣ ಸುಬ್ಬಣ್ಣನಿಗೆ ಚಿಕ್ಕಂದಿನಿಂದಲೂ ಸಂಗೀತದ ಮೋಹ ಬಾಲ್ಯದಲ್ಲೇನೋ ಇದು ಸರಿಯಾಗಿತ್ತು. ಆದರೆ ಹುಡುಗ ಬೆಳೆಯುತ್ತಿದ್ದಂತೆ ಆತನ ಗಮನ ಸಂಸ್ಕೃತದ ಕಡೆಗೆ ಹರಿಯದೆ ಸಂಗೀತದ ಕಡೆಗೆ ಹರಿಯುವುದನ್ನು ಗಮನಿಸುವ ಶಾಸ್ತ್ರಿಗಳಿಗೆ ಆತಂಕ ಆರಂಭಗೊಳ್ಳುತ್ತದೆ.

ಒಮ್ಮೆ ಮಹಾರಾಜರ ಸಮ್ಮುಖದಲ್ಲಿ ಸುಬ್ಬಣ್ಣ ತಂದೆಯ ಪಕ್ಕದಲ್ಲೇ ಕುಳಿತಿದ್ದ. ಆಗ ಮಹಾರಾಜರು ಈ ಹುಡುಗ ನಿಮ್ಮ ಕುಮಾರನೋ ಶಾಸ್ತ್ರಿಗಳೇ ? ಎಂದು ಕೇಳಿದಾಗ ಶಾಸ್ತ್ರಿ 'ಹೌದು' ಎನ್ನಲು ರಾಜರು "ಏನಪ್ಪಾ" ನೀನು ಅಪ್ಪಾಜಿಯ ಹಾಗೆ ಪುರಾಣ ಹೇಳ್ತೀಯೊ ? ಎನ್ನಲು ಹುಡುಗ "ನಾನು ಪುರಾಣ ಹೇಳೋಲ್ಲ ಸಂಗೀತ ಹೇಳ್ತಿನಿ" ಎನ್ನುತ್ತಾನೆ ಹೇಳು ಎಂದು ಮಹಾರಾಜರು ಅನ್ನುತ್ತಾರೆ ಸುಬ್ಬಣ್ಣ " ಶ್ರೀ ರಾಘುವಂ ದಶರಥಾತ್ಮಜಂ" ಎನ್ನುವ ಶ್ಲೋಕವನ್ನು ರಾಗವಾಗಿ ಹೇಳಿದಾಗ ರಾಜರು ಸಂತೋಷವಾಗಿ ನೀನು ಒಳ್ಳೆಯ ಹುಡುಗ ಚೆನ್ನಾಗಿ ಹಾಡುವುದನ್ನು ಕಲಿತಿಕೋ, ನಿನಗೆ ಖಿಲ್ಲತ್ತನ್ನು ಕೊಡುತ್ತೇನೆ ಎಂದಾಗ ಸುಬ್ಬಣ್ಣನಿಗೆ ಖುಷಿ.

ಅಂದಿನಿಂದ ಮಹಾರಾಜರಿಂದ ಖಿಲ್ಲತ್ತು ಪಡೆಯಲೇಬೇಕೆಂದು ಸುಬ್ಬಣ್ಣ ಸಂಗೀತದ

ಗೀಳನ್ನು ಅಂಟಿಸಿಕೊಳ್ಳುತ್ತಾನೆ. ಹಠವಾದಿ ಸುಬ್ಬಣ್ಣ ಹಿಡಿದ ಕೆಲಸವನ್ನು ಕೊನೆಮುಟ್ಟಿಸಲೇಬೇಕು ಎಂಬ ಛಲಬಾಲ್ಯದಿಂದಲೂ ಇತ್ತು.

ಇಲ್ಲಿ ಸುಬ್ಬಣ್ಣನ ಕಲೆಗೆ ಗಣನೀಯ ಸ್ಥಾನವಿದೆ. ಆದರೂ ಕಡೆಯಲ್ಲಿ ಮುಖ್ಯವಾದದ್ದು ಅವನ ಗಾನ ಕಲೆ ಮೊದಲು ಸುಬ್ಬಣ್ಣನಿಗೆ ಸಂಗೀತ ಜೀವನದ ಗುರಿ ಎಂಬ ಭಾವನೆ ಇದ್ದಿರಬೇಕು. ಅವನು ತನ್ನ ಮನಸ್ಸಿನಲ್ಲಿ ಕಲಿಸಿಕೊಳ್ಳುತ್ತಿದ್ದ ಭವಿಷ್ಯವೆಲ್ಲಾ ಸಂಗೀತಕ್ಕೆ ಸಂಬಂಧಪಟ್ಟದ್ದು ಉಳಿದದ್ದು ಅವನಿಗೆ ಅಷ್ಟು ಮುಖ್ಯವಲ್ಲ. ಮದುವೆಯಾದ ಹೆಂಡತಿಯ ವಿಷಯದಲ್ಲೂ ಅವನು ಇವಳು ಬೇರೆ ಕುತ್ತಿಗೆ ಸುತ್ತಿದ್ದಾಳೆ ಇದೆಲ್ಲಿಯ ಶನಿ ಎಂದುಕೊಂಡಿದ. ನೀಲಸಾನಿಯ ಮನೆಯಲ್ಲೂ ಅವನಿಗೆ ಬೇಕಾದದ್ದು ಸಂಗೀತಾಭ್ಯಾಸಕ್ಕೆ ಬೇಕಾದ ವಾತಾವರಣ.

ಸುಬ್ಬಣ್ಣ ಮಹಾರಾಜರನ್ನು ಮೆಚ್ಚಿಸುವ ಚಪಲಕ್ಕಾಗಿ ಎಲ್ಲಿ ಸಂಗೀತವಾದರೆ ಅಲ್ಲೆಲ್ಲಾ ಹೋಗಿ ಕುಳಿತುಕೊಂಡು ಕೇಳುವನು ಅಲ್ಲಲ್ಲಿ ಸಣ್ಣ ಪುಟ್ಟ ಗುಂಪುಗಳಲ್ಲಿ ಹಾಡುವನು. ಸಂಗೀತಗಾರರು ಅವನಿಗೆ ಮೊದಲು ವಿಶ್ವಾಸದಿಂದಲೂ ಬರುಬರುತ್ತಾ ಅರಮನೆಯ ಈರ್ಷೆಯಿಂದಲೂ ಗೌರವವನ್ನು ತೋರಿಸುವುದಕ್ಕೆ ಆರಂಭಿಸಿದರು. ಬಾಯ ಹಾಡುಗಾರಿಕೆಯಲ್ಲೇ ಅಲ್ಲದೇ ಸುಬ್ಬಣ್ಣ ಪಿಟೀಲು ವೀಣೆಗಳನ್ನು ನುಡಿಸುವುದರಲ್ಲಿಯೂ, ಮೃದಂಗವನ್ನು ಬಾರಿಸುವದರಲ್ಲಿಯೂ ಅತಿಶಯವಾದ ಶಕ್ತಿ ಇತ್ತು. ಸುಬ್ಬಣ್ಣ ತಾನು ಸಂಗೀತಕ್ಕೆ ಹೋಗುತ್ತಿದ್ದ ವಿಷಯವನ್ನು ಮನೆಯಲ್ಲಿ ಹೇಳದಿರುವುದಕ್ಕೆ ಕಾರಣವಿತ್ತು. ಆಗಿನ ಕಾಲದಲ್ಲಿ ಸಂಗೀತಗಾರರ ಬದುಕಿಗೆ ಹೆಚ್ಚು ಮನ್ನಣೆ ಇರಲ್ಲಿಲ್ಲ. ಸಂಗೀತ ಕಲಿಯುವುದೆಂದರೆ ಒಂದೋ ಅದೇ ಕಸುಬಿನವರಾಗಿರಬೇಕು ಇಲ್ಲವೇ ನಟುವಾಂಗದವರು ಅಥವಾ ಸೂಳೆಯರು ತಮ್ಮ ವೃತ್ತಿಯ ಆಕರ್ಷಣೆಗಾಗಿ ಅದನ್ನು ಕಲಿಯಬೇಕಾಗಿತ್ತು ಇವರಿಂದ ಸುಬ್ಬಣ್ಣ ಸೂಳೆಯರ ಮನೆಗೂ ಹೋಗಬೇಕಾಗಿ ಬರುತ್ತದೆ. ಸುಬ್ಬಣ್ಣನ ಸಂಗೀತ ಕಲಿಕೆಯ ದಾಹಕ್ಕೆ ನೀಲಾಸಾನಿ ಎಂಬ ವೇಶ್ಯ ಪೋಷಣೆ ನೀಡುತ್ತಾಳೆ . ಸುಬ್ಬಣ್ಣನ ಮುಖದಲ್ಲಿ ಏನೋ ಒಂದು ಆಕರ್ಷಣೆಯನ್ನು ಆಕೆ ಗುರುತಿಸಿಕೊಳ್ಳುತ್ತಾಳೆ. ಸುಬ್ಬಣ್ಣ ನೀಲಾಸಾನಿಯ ಮನೆಗೆ ಬಂದರೆ ಅವಳ ಮುಖ ಅರಳಿದ ಹೂವಿನಂತಾಗುತ್ತದೆ. ಸುಬ್ಬಣ್ಣನೇನೋ ನೀಲಾಸಾನಿಯ ಸಹವಾಸಕ್ಕೆ ಬಿದ್ದವನಲ್ಲ. ಅವನಿಗೆ ಸಂಗೀತ ಕಲಿಯಲು ಒಂದು ಜಾಗ ಬೇಕಾಗಿತ್ತು.

ಈ ಕಾರಣದಿಂದ ಸುಬ್ಬಣ್ಣ ತನ್ನ ಸಂಗೀತ ಅಭ್ಯಾಸವನ್ನು ಗುಟ್ಟಾಗಿಯೇ ಇರಿಸಿದ ಸಂಗೀತ ಕಛೇರಿಗಳು ನಡೆಯುವಲ್ಲಿ ಹೋಗಿ ಕೇಳುವುದೂ ಸೇರಿದಂತೆ ಸಂಗೀತ ಪಾಠ ಹೇಳಿ ಕೊಡುವ ಸ್ಥಳಗಳತ್ತವೂ ಹೋಗುವುದಕ್ಕೆ ಮೊದಲು ಮಾಡಿದನು.

ನಾರಾಯಣ ಶಾಸ್ತ್ರಿಗಳು ಮಗನು ಸಂಸ್ಕೃತ ಕುರಿತು ಅನಾಸಕ್ತನಾಗಿರುವುದನ್ನು ನೋಡಿ ಸಂಸಾರಿಯಾದರೆ ಅವನು ಸಂಗೀತದ ಕಡೆಗಿನ ತನ್ನ ಗಮನವನ್ನು ಕುಲ ವೃತ್ತಿಯ ಕಡೆಗೆ ಹರಿಸಬಹುದೆಂದು ಭಾವಿಸಿ ಮದುವೆಯನ್ನು ಮಾಡಿದರು.

ಮದುವೆಯಾದರೂ ಸುಬ್ಬಣ್ಣನಲ್ಲಿ ಯಾವ ಬದಲಾವಣೆಯೂ ಕಂಡು ಬರಲ್ಲಿಲ್ಲ. ಅವನ ಉದ್ದೇಶ ಮಹಾರಾಜರ ಮುಂದೆ ತಾನು ಪಿಟೀಲು ಬಾರಿಸಬೇಕು ಅವರಿಂದ ಬಹುಮಾನ ಪಡೆಯಬೇಕು ಎನ್ನುವ ಕುರಿತೇ ಆಗಿತ್ತು.

ಸಂಗೀತವನ್ನೇ ತನ್ನ ಬದುಕಿಗೂ ಆಸರೆ ಎಂಬ ರೀತಿ ಆ ಕುರಿತು ತೀರಾ ಆಸಕ್ತಿ ವಹಿಸಿದ ಸುಬ್ಬಣ್ಣ ಏನನ್ನೂ ಸಂಪಾದಿಸುವ ಹಾಗಿರಲ್ಲಿಲ್ಲ. ಸಂಗೀತವನ್ನು ಕಲಿತವನು ಸಂಪಾದನೆ ಮಾಡುವುದೆಂದರೆ ಬಹಳ ದಿನ ಕಳೆಯಬೇಕು ಸಂಸ್ಕೃತವನ್ನು ಕಲಿತಿದ್ದರೆ ಪೌರೋಹಿತ್ಯವನ್ನು ಅಥವಾ ಇತರ ಯಾವುದಾದರೂ ಕೆಲಸವನ್ನಾದರೂ ಮಾಡಬಹುದಿತ್ತು. ಆದರೆ ಸಂಗೀತಕ್ಕೆ ಬಾಳನ್ನು ಅರ್ಪಿಸಿ ಸಂಪಾದನೆ ದಾರಿ ಇಲ್ಲದಂತೆ ಮಾಡಿಕೊಂಡನು.

ಸುಬ್ಬಣ್ಣ ನೀಲಸಾನಿಯರ ಸಂಬಂಧ ಕಾದಂಬರಿಯಲ್ಲಿ ಅತ್ಯಂತ ಮುಖ್ಯವಾದ ಸಂಗತಿ ನೀಲ ಸುಬ್ಬಣ್ಣನನ್ನು ದೇವರೆಂದು ಭಾವಿಸಿದ್ದಳು ತೀರ ಹತ್ತಿರ ಸುಳಿದ್ದಾಡುತ್ತಿದ್ದರು. ದೂರದಲ್ಲಿಯೇ ನಿಂತು ನಡೆದು ಅವನನ್ನು ಅರಾಧಿಸುತ್ತಿದ್ದಳು. ಅವನು ಕೇಳಿದಾಗ ಹಣ ಕೊಡುವಳು ಸುಬ್ಬಣ್ಣ ಹಗಲೆಲ್ಲಾ ನೀಲಸಾನಿಯ ಮಹಡಿಯಲ್ಲಿ ಹೋಗಿ ಕೂರುತ್ತಿದ್ದನು. ಪಿಟೀಲಿನ ವ್ಯಾಸಂಗ ಮಾಡುತ್ತಾ ರಾಗಗಳ ಹೊಸ ಸಂಗರಿ ವರೇಕು ಹಾಕಿಕೊಳ್ಳುತ್ತ "ದೇವರೇ" ಊಟಕ್ಕೆ ಹೊತ್ತಾಯಿತು ಎಂದೂ ನೀಲಾ ಎಚ್ಚರಿಸಿದ್ದಾಗಲೇ ಆತ ಇಳಿದು ಬರುತ್ತಿದ್ದದು. ನಗೆ ಮೊಗದಿಂದ ಮಾತಾಡಿಸಿ. ಮಡಿಯಲ್ಲಿಯೇ ಮಾಡಿಟ್ಟ ತಿಂಡಿ ತಿನಿಸುಗಳನ್ನು ಅವನಿಗೆ ತಿನ್ನಲು ತೆಗೆದಿರಿಸಿ ಸರ್ವ ವಿಧವಾಗಿಯೂ ಅನುಕೂಲಳಾಗಿ ನಡೆಯುತ್ತಿದ್ದಳು. ಅವನನ್ನು ಅವಳಿಂದ ನಿರ್ದಿಷ್ಟ ಅಂತರಕ್ಕೆ ಇಟ್ಟಿದ್ದು ಎರಡು

ಒಂದು ಅವಳ ಶಾಲೀನತೆ, ಸೌಜನ್ಯ ಇನ್ನೊಂದು ಏನೂ ದೋಷವರಿಯದೆ ತಾಯ ಎದೆ ಬಳಿ ಮುಖವನ್ನಿಟ್ಟು ಸ್ತಾನ್ಯಕ್ಕಾಗಿ ಅರಸುವ ಮಗುವಿನಂತೆ ಜೀವನದ ವಿಚಾರವನ್ನು ತಿಳಿಯದೇ ಇಲ್ಲಿ ಏನಿದೆಯೋ ಎಂದು ತಿಳಿಯಲು ಪ್ರಯತ್ನ ಪಡುತ್ತಿರುವ ಅವನ ಸರಳತೆ, ಮುಗ್ಧತೆ ನೀಲಸಾನಿಗೆ ಅವನಲ್ಲಿ ಒಂದು ಅಸಾಧಾರಣ ಮಮತೆ ಉಂಟುಮಾಡಿತ್ತು ಅವಳ ದೇಹಕ್ಕಾಗಿ ಅಲ್ಲ ಅವಳ ರೂಪಕ್ಕಾಗಿ ಅಲ್ಲ, ಅವಳ ಭಾವಕ್ಕಾಗಿ ಗುಣಕ್ಕಾಗಿಯೇ ಒಲಿದು ಬಂದ ರಸಿಕ ಸುಬ್ಬಣ್ಣ, ಸುಬ್ಬಣ್ಣನೇ ಕೃಷ್ಣನೆಂದು ಕಂಡುಕೊಂಡ ಗೋಪಿಕಾ ಸ್ತ್ರೀ ಆಕೆ.

ಸುಬ್ಬಣ್ಣನ ಮನೆಯಲ್ಲಿ ಸದಾ ಜಗಳ ತಂದೆ. ಮಗನಿಗೆ ವಿರಸ. ತಾಯಿ ಸೊಸೆಯನ್ನು ನಿಕೃಷ್ಟವಾಗಿ ಕಾಣುವುದು– ಹೀಗೆಲ್ಲಾ ನೆಡೆಯುತ್ತಿತ್ತು. ಆದಾಯಕ್ಕೆ ದಾರಿಯನ್ನು ಕಂಡುಕೊಳ್ಳದ ಸಂದರ್ಭದಲ್ಲೇ ಲಲಿತೆ ಗರ್ಭಿಣಿಯಾಗುತ್ತಾಳೆ. ಮಗಳು ಲಕ್ಷ್ಮಿಯೂ ಗರ್ಭಿಣಿಯಾಗಿ ಬರುತ್ತಾಳೆ. ಮನೆಯಲ್ಲಿ ಲಕ್ಷ್ಮೀಯನ್ನು ಉಪಚರಿಸದಂತೆ ಸೊಸೆಯನ್ನು ಉಪಚರಿಸುತ್ತಿರಲಿಲ್ಲ. ಮಗನ ಮೇಲೆ ಅಪಾರ ಪ್ರೀತಿಯುಳ್ಳ ತಂದೆ ಕೂಡ ಒಮ್ಮೆ ಅಪ್ಪಿ ತಪ್ಪಿ ಅನ್ನಕ್ಕೆ ಹೊರೆ, ಎಂದು ಅಂದು ಬಿಡುತ್ತಾರೆ. ಹಠದ ಸ್ವಭಾವದ ಸುಬ್ಬಣ್ಣ ಈ ಎಲ್ಲಾ ರಾದ್ಧಾಂತಗಳಿಂದ ಬೇಸತು ಒಮ್ಮೆ ಹೆಂಡತಿಯ ಮೇಲೂ ಕೈ ಮಾಡುತ್ತಾನೆ. ಸುಬ್ಬಣ್ಣ ಹೆಂಡತಿಗೆ ಹೊಡೆದದ್ದು ನಿಜವಾದರೂ ಯಜಮಾನಿಗೆ ಅದು ನಿಜವೆಂದು ತಿಳಿಯುತ್ತಿರಲ್ಲಿಲ್ಲ ಮಗಳಿಗೆ ತುಪ್ಪ ಬಡಿಸಿದ್ದರೆ ಸೊಸೆಗೆ ಇಲ್ಲ ಇವೆಲ್ಲವನ್ನು ನೋಡಿ ತುಂಬಾ ಬೇಸತ್ತ ಸುಬ್ಬಣ್ಣ ಒಂದು ರಾತ್ರಿ ಮನೆಯಿಂದ ಹೊರಬೀಳುವ ನಿರ್ಧಾರ ಮಾಡುತ್ತಾನೆ ಅದಕ್ಕಾಗಿ ಅವನು ಹಣ ಹೊಂದಿಸಿಕೊಳ್ಳಲು ನೀಲಾ ಸಾನಿನ ಮನೆಗೆ ಹೋಗಿ ನೂರು ರೂಪಾಯಿ ಕೇಳುತ್ತಾನೆ. ಈ ಒಂದು ಸಂದರ್ಭವನ್ನು ಅವಳು ಬಹಳ ಸಂತೋಷದಿಂದ ಸ್ವೀಕರಿಸುತ್ತಾಳೆ ಇದಕ್ಕೆ ಕಾರಣ ಸುಬ್ಬಣ್ಣನಿಗೆ ನೆರವಾಗುವ ಈ ಒಂದು ಸಂದರ್ಭ ಬಂದಿತಲ್ಲಾ ಎಂಬುದು.

ಸುಬ್ಬಣ್ಣ ಊರು ಬಿಟ್ಟು ಹೋದಾಗ ಮತ್ತೆ ನೀಲಾ ಸಾನಿಗೆ ಹಣವನ್ನು ಕಳುಹಿಸಿದ ಸಂದರ್ಭದಲ್ಲಿ ಯಜಮಾನಿ ನಿಷ್ಟುರವಾಗಿ ನುಡಿದಳು " ನಮ್ಮನ್ನು ಮರೆತರೂ ಸೂಳೆಯ ಜ್ಞಾಪಕವಿದೆಯಲ್ಲಾ" 1 ಎಂದು.

---

1) ಸುಬ್ಬಣ್ಣ ಕಾದಂಬರಿ : ಪುಟ :41

ಕಲ್ಕತ್ತೆಗೆ ಬಂದಾಗ ಇದ್ದದ್ದರಲ್ಲಿ ಸುಬ್ಬಣ್ಣನ ಹೆಂಡತಿ ಲಲಿತೆ ಸುಖವಾಗಿದ್ದಳು ಅವಳಿಗೆ ಸುಬ್ಬಣನೇ ದೇವರು. ಸುಬ್ಬಣ್ಣನೇ ಪ್ರಪಂಚ ಅವನು ಎದುರಿಗಿದ್ದರೆ, ಅವನು ಸುಖವಾಗಿದ್ದರೆ ಅವಳಿಗಿನ್ನೇನೂ ಬೇಕಾಗಿಲ್ಲಾ ಅಥವಾ ಇನ್ನೇನಾದರೂ ಬೇಕಾದರೂ ಅದರ ವಿಷಯದಲ್ಲಿ ಅಷ್ಟು ಖಂಡಿತವಾದ ಆಸೆಯಿಲ್ಲ ಇಂಥ ನಿರ್ಲಿಪ್ತತೆ ಹೆಂಗಸರಲ್ಲಿ ಅನೇಕರಿಗೆ ಸಾಧ್ಯ ಪುರಾಣದ ಸಾವಿತ್ರಿ ಸೀತೆಯರು ಈ ರೀತಿಯ ಮಹಿಳೆಯರು ಇವರ ಈ ನಿರ್ಲಿಪ್ತತೆ ಯಾವ ಋಷಿಯ ತಪಸ್ಸಿಗಿಂತಲೂ ಕಡಿಮೆಯಾದದ್ದಲ್ಲ ಇವರು ಆದರಿಂದಲೇ ಜೀವನದ ಸಮಸ್ತ ಸಂಸ್ಕಾರಗಳನ್ನು ಸಾಧಿಸಿ ಬಿಡುವರು. ಲಲಿತೆ ಈ ಮೊದಲೇ ಬದುಕಿನಲ್ಲಿ ಒಂದು ದೊಡ್ಡ ಅಂತಸ್ತನ್ನು ಸೇರಿಬಿಟ್ಟಿದಳು ಯಾವುದರಲ್ಲಿಯೂ ತನ್ನ ಸುಖ, ತನ್ನ ಆಸೆ ತನ್ನದು ಎನ್ನುವುದನ್ನು ಮರೆಯುವುದನ್ನು ಅವಳು ಕಲಿತಳು. ತನ್ನ ಗಂಡ ಮಕ್ಕಳ ಮೇಲೆ ತನ್ನ ಹೃದಯದ ಅನಂತವಾದ ದಯೆಯನ್ನು ಸುರಿಸುತ್ತ ಅವರಿಗೆ ದೇವಿಯ ಅವತಾರವೆಂಬಂತೆ ರಕ್ಷಕಳಾದಳು. ಅಲ್ಲದೆ ಗಂಡನ ಸಂಗೀತ ಅವಳಿಗೂ ಬಂದಿತು. ಹೀಗೆ ತನ್ನ ಗಂಡ ಮಕ್ಕಳೊಂದಿಗೆ ಜೀವನ ರೂಪಿಸಿಕೊಂಡಿದ್ದಳು ಲಲಿತೆ ಕಲ್ಕತ್ತೆಯಲ್ಲಿ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡುತ್ತಾಳೆ. ಸುಬ್ಬಣ್ಣ ಮೈಸೂರಿನ ಬೇಸತ್ತ ಬದುಕಿಗಿಂತ ಇಲ್ಲಿ ಹೆಚ್ಚಿನ ಸುಖವನ್ನು ಕಾಣಲು ಪ್ರಯತ್ನಿಸುತ್ತಾನೆ. ಹೆಂಡತಿ ಮಕ್ಕಳನ್ನು ಅವರು ಅಪೇಕ್ಷಿಸಿದ್ದನ್ನು ಒದಗಿಸಿಕೊಡುವ ಮಟ್ಟಿಗೆ ಅವನಿಗೆ ಸಂಪಾದನೆಯೂ ಇರುತ್ತದೆ. ಈ ಸಂಪಾದನೆಯ ಮೂಲ ಸಂಗೀತದ ಪಾಠವಾಗಿರುತ್ತದೆ. ಇದರಿಂದ ಅವನ ಜೀವನ ತುಂಬಾ ಸುಖ ಸಂತೋಷದ್ದಾಗಿರುವುದಿಲ್ಲ. ಶೋಕವು ಅವರ ದಾಂಪತ್ಯ ಜೀವನದಲ್ಲಿ ನಿರಂತರ ಪ್ರವಾಹದಂತೆ ಹರಿದು ಬರುವಂತಾಗುತ್ತದೆ. ಇದ್ದುದರಲ್ಲಿ ಸುಖವನ್ನು ಅನುಭವಿಸುತ್ತಿದ್ದ ಸುಬ್ಬಣ್ಣನ ಪುಟ್ಟ ಸಂಸಾರ ಅವನ ಕನಸಿಗೊಂದು ರೂಪ ಕೊಡುವನೆಂದುಕೊಂಡಿದ್ದ ಶೇಷ ವಿಷಮ ಶೀತ ಜ್ವರದಿಂದ ತೀರಿ ಹೋದದ್ದು ಅಪಾರವಾದ ದುಃಖಕ್ಕೆ ಕಾರಣವಾಗುತ್ತದೆ. ಸುಖ ದುಃಖ ಸಮ್ಮಿಶ್ರ ಸವಿಯನ್ನು ಅನುಭವಿಸುತ್ತಿರುವಾಗಲೀ ಒಂಭತ್ತು ವರ್ಷದ ಮಗಳ ಮದುವೆಯ ಚಿಂತೆ ಲಲಿತೆಯನ್ನು ಕಾಡುತ್ತದೆ. ಮಗಳ ಮದುವೆಯ ನೆಪದಿಂದಾದರೂ ಊರಿಗೆ ಹೋಗುವುದು ಸಾಧ್ಯವಾದೀತೇ ಎನ್ನುವ ಅವಳ ಆಸೆಯೂ ಈಡೇರುವುದಿಲ್ಲ. ಈ ಮಾತನ್ನು ಗಂಡನೊಂದಿಗೆ ಪ್ರಸ್ತಾಪಿಸಬೇಕೆನ್ನುವಷ್ಟರಲ್ಲಿಯೇ ಒಂದು ದಿನ ಗಂಗಾ ನದಿಯಲ್ಲಿ ಸ್ನಾನ ಮಾಡಲು ಹೋದಾಗ ನೀರಲ್ಲಿ ಮುಳುಗಿ ಮಗಳು ಸಾವನ್ನು ಕಾಣುತ್ತಾಳೆ.

ಸುಬ್ಬಣ್ಣ ಮಕ್ಕಳನ್ನು ಕಳೆದುಕೊಂಡ ಹೆಂಡತಿಗೂ ಕಾಯಿಲೆ ಆರಂಭವಾಯಿತು. ಆಗ ಅವಳು ಊರಿಗೆ ಹೋಗೋಣವೆಂದಾಗ " ಬರುವಾಗ ಇದ್ದ ಹುಮ್ಮಸೇನು ಈಗ ಊರಿಗೆ ಹೋಗುವುದೆಂದರೇನು ? ಅಲ್ಲಿ ಹೋಗಿ ಆಗತಕ್ಕದ್ದೇನು! ಇಲ್ಲೇ ಇರೋಣ, ಕಾಗೆ ಮಳೆಯಲ್ಲಿ ನೆನೆದ ಹಾಗೆ ನೆನೆದದ್ದಾಯಿತು. ಎಲ್ಲೊ ಇದ್ದು ಕಣ್ಣು ಮುಚ್ಚಿ ಬಿಡುವುದು" 2 ಎಂದನು.

ಸುಬ್ಬಣ್ಣ ಲಲಿತೆ ಸಾಯುವವರೆಗೂ ಅವಳ ಬಳಿಯಲ್ಲೇ ಇದ್ದು ಅವಳನ್ನು ಎಳೆಯ ಮಗುವಿನಂತೆ ನೋಡಿಕೊಂಡನು. ಕೊನೆಕೊನೆಗೆ ಇವರು ಗಂಡ ಹೆಂಡತಿಯರಂತೆ ಮರ್ಯಾದೆಯಿಂದಿರುವುದನ್ನು ಬಿಟ್ಟರು, ಅಣ್ಣ ತಂಗಿಯರೇ ಎಂಬತೆ ಧಾರಾಳವಾದ ಒಂದು ವಿಚಿತ್ರ ಸ್ನೇಹದಿಂದಿದ್ದರು. ಇವರ ಮನಸ್ಸೆರಡು ಒಂದಾಯಿತು. ಲಲಿತೆ ಗಂಡನನ್ನು ಕುರಿತು ಯಾವಾಗಲೂ ದೇವರು, ದೇವರ ಇಚ್ಛೆ, ದೇವರ ಕೆಲಸ, ಎಂದು ಹೇಳುತ್ತಿರುವಳು ಸುಬ್ಬಣ್ಣ ಹೆಂಡತಿಯ ಪಕ್ಕದಲ್ಲಿ ಕುಳಿತು ಯೋಚಿಸುತ್ತಾ ಇವಳ ಜೀವ ಎಷ್ಟು ಸಂಸ್ಕಾರ ಪಡೆದದ್ದು ! ನಾನು ಹಠವಾದಿ ನನ್ನ ಹಠಕ್ಕಾಗಿ ನಾನು ಹೇಳಿದ್ದನ್ನೆಲ್ಲಾ ಮಾಡಿ ತಾನು ಎನ್ನುವುದನ್ನೇ ಮರೆತಳಲ್ಲ ! ಈ ದೇವರು ಭಕ್ತ ಎಂಥದು ! ಎಂದು ಕೊಳ್ಳುವನು ಕೊನೆಗೆ ಅವಳು ತನ್ನನ್ನು ತಿದ್ದುವುದಕ್ಕೆ ಬಂದಿದ್ದ ದೇವಿಯ ಅವತಾರವೇ ಎಂದು ಭಾವಿಸಿಕೊಂಡನು.

ಗಂಡನೊಬ್ಬನನ್ನು ನಂಬಿ ಬಂದ ಹೃಹೊಣಿ ಬದುಕಿನ ನಂಜುಗಳನ್ನೆಲ್ಲಾ ಉಂಡು ಗಂಡನ ನೆರಳಾಗಿ ಅರ್ಪಣಾ ಮನೋಭಾವದ ಮಡದಿ ತನ್ನನ್ನು ತಿಳಿಯದೇ ಪೀಡಿಸಿದ ಅತ್ತೆಯ ಬಗೆಗಾಗಲಿ ಇದ್ದಕ್ಕಿದ್ದಂತೆ ಮನೆಯಿಂದ ಕಲ್ಕತ್ತೆಗೆ ಗಂಡ ಎಳೆದುಕೊಂಡು ಹೋದದ್ದಕ್ಕಾಗಲಿ ವ್ಯಥೈ ಪಡೆದ, ತನ್ನ ಬದುಕು ಇರುವುದು ಗಂಡನೆಗೆಂದು ಬದುಕಿದ ರೀತಿ ಸುಬ್ಬಣ್ಣನನ್ನು ಮಾಗಿಸಿತು. ಏಕಾಕಿಯಾಗಿ ತನ್ನನ್ನು ಹಿಂಬಾಲಿಸಿದ ಮಡದಿ ಮಗನನ್ನು ಕಳೆದುಕೊಂಡಾಗಲೂ, ಮದುವೆಗೆ ಸಿದ್ದಳಾಗುತ್ತಿದ್ದ ಮಗಳು ನದಿಯಲ್ಲಿ ಮುಳುಗಿದಾಗಲೂ ತನ್ನ ಆಳುವನ್ನೆಲ್ಲಾ ನುಂಗಿಕೊಂಡು ಗಂಡನೊಂದಿಗೆ ಬಾಳಿ ಮುತ್ತೈದೆಯಾಗಿ ಸಾಯಬೇಕೆಂಬ ವ್ರತ ಮಾಡಿ ವಿಷಮ ಶೀತ ಜ್ವರಕ್ಕೆ ತುತ್ತಾದಳು.

---

2) ಸುಬ್ಬಣ್ಣ : ಪು. 41

ನಾವು ಹುಟ್ಟುವುದು ಏಕೆ ? ಬಾಳುವುದು ಹೇಗೆ ? ಎಲ್ಲಿಂದ ಬರುತ್ತೇವೆ ಎಲ್ಲಿಗೆ ಹೋರಟ್ಟಿದ್ದೇವೆ ? ಸಂಸಾರವೆಂಬ ಸಾಗರದಲ್ಲಿ ಮಲೆತ ಮೇಲೆ ಬರುವ ಅಲೆಯ ನೀರಿನ ದಿಬ್ಬವನ್ನು ಹಿಮಾಲಯವೆಂದೇ ಭ್ರಮಿಸಿ ಭಿತಿ ಪಡುವುದೇಕೆ ? ಕಷ್ಟವೆನ್ನುವುದು ಬರಿಯ ಭ್ರಮೆಯ ಭೀತಿಯಾದರೆ ನಿಜ ಯಾವುದು ? ಸುಖ ನಿಜವೆ ? ಸಂತೋಷ ನಿಜವೆ ? ಎಂಬ ಪ್ರಶ್ನೆಗೆ ಉತ್ತರ ತೋರದೆ ಜೀವವೆನ್ನುವುದು ಸಭಿಕರಿಗೆ ವೇಷ ಹಾಕಿ ಕಾಣಿಸುವ ಬಯಲ ನಾಟಕ"[3] ಎಂದುಕೊಂಡರು.

ಸುಬ್ಬಣ್ಣ ಕಲ್ಕತ್ತೆಯಿಂದ ಮುಂಬಯಿಗೆ ಬರುತ್ತಾನೆ.ಅಲ್ಲಿ ಒಂದು ಮಿಠಾಯಿ ಅಂಗಡಿಯ ಪಕ್ಕದಲ್ಲಿ ಕುಳಿತಿ ಪಿಟೀಲು ನುಡಿಸುತ್ತಾನೆ. ಅವನ ಸುಶ್ರಾವ್ಯ ಪಿಟೀಲು ವಾದನಕ್ಕೆ ಹಾದಿಯಲ್ಲಿ ಹೋಗುವವರು ಬಂದು ಸೇರುತ್ತಾರೆ, ಮಿಠಾಯಿ ಮಾರುವ ಅಂಗಡಿಯ ಒಡತಿಗೂ ಹೆಚ್ಚು ವ್ಯಾಪಾರವಾಗುತ್ತದೆ. ಆಕೆ ಸುಬ್ಬಣ್ಣನಿಗೆ ಹಣ ಕೊಡಲು ಹೋದಾಗ ಸುಬ್ಬಣ್ಣ ನನಗೆ ಹಣ ಬೇಡ ಎಂದಾಗ ಮುದುಕಿ "ನಿನಗೆ ತಿಳಿಯದು ನೀನು ಪರಸ್ಥಳದವನಂತೆ ಇದ್ದೀಯೆ. ಇಲ್ಲಿ ನೀನು ತಲೆನೋವು, ಮೂಗು ನೋವು ಎಂದರೆ ನಿನ್ನನ್ನು ಕೇಳುವವರಾರು ? ಕೆಟ್ಟ ಮಾತಾಡಬಾರದು ಸತ್ತುಹೋದರೆ ಹೆಣ ನಾಯಿ ಪಾಲಾಗುತ್ತದೆಯೆಲ್ಲ ? ಪರದೇಶದಲ್ಲಿರುವವನು ಕೈಯಲ್ಲಿ ಕಾಸು ಇಟ್ಟುಕೊಂಡಿರಬೇಕು. ತಿಳಿದ ಇಬ್ಬರ ಸ್ನೇಹಿತರನ್ನು ಮಾಡಿಕೊಳ್ಳಬೇಕೆಂದು ಹೇಳಿದಳು.

ಸುಬ್ಬಣ್ಣ ಮೈಸೂರಿಗೆ ಹಿಂದಿರುಗಿ ಬಂದಾಗ ವೈಶಾಖ ಮಾಸ. ಐದಾರು ದಿನಗಳಿಂದ ಸಂಜೆಯ ಮಳೆ ಬಂದು ಆ ಉದಯದ ಆಕಾಶವು ಶುಭ್ರವಾಗಿತ್ತು. ಬೀದಿಗಳೆಲ್ಲಾ ನೀರು ಹಾಕಿ ಉತ್ಸವಕ್ಕೆ ಸರಿ ಮಾಡಿದಂತಿತ್ತು. ಗಾಳಿ ತಣ್ಣಗೆ ದಕ್ಷಿಣದಿಂದ ಹರಿದು ಬರುತ್ತಿತ್ತು . ಎಲೆ ತುಂಬಿದ್ದ ಮರಗಳ ಮೇಲೆಲ್ಲಾ ನೂರಾರು ಹಕ್ಕಿಗಳು ಕುಳಿತು ಸಂಭ್ರಮದಿಂದ ಕಲ ಕಲ ಧ್ವನಿಯನ್ನು ಮಾಡುತ್ತಿದ್ದುವ ಅಂದವಾದ ಉದಯ ಆನಂದವನ್ನು ಕೋ ಎಂದು ಸಾವಿರ ಕೈಗಳಿಂದ ನೀಡಿಕೊಳ್ಳುತ್ತಿರುವ ಬಾಲ ಸೂರ್ಯ ಇರದ ಹೃದಯದಲ್ಲಿ ಆನಂದ ಉಕ್ಕಿ ಬರುವಂತೆ ಪುನಃ ಕುಗ್ಗಿತು, ಮನೆಯ ಹತ್ತಿರ ಬಂದಾಗ ಜನ ಇನ್ನೂ ಅಷ್ಟಾಗಿ ಓಡಾಡುತ್ತಿರಲ್ಲಿಲ್ಲ ಸ್ವಲ್ಪ ಹೊತ್ತಿನ ನಂತರ ಯಾರೋ ಮನೆಯ ಬಾಗಿಲು ತೆಗೆದು ಇವರನ್ನು ನೋಡಿ ಯಾರಪ್ಪ ಅದು ಎಂದರು ಸುಬ್ಬಣ್ಣ ಹಠತ್ತಾಗಿ ನಾನು

---

3) ಸುಬ್ಬಣ್ಣ : ಪು. 47

ಪರಸ್ಥಳ ಎಂದನು. ಮೈಸೂರು ಪರಸ್ಥಳವಲ್ಲದೆ ಇನ್ನೇನು ? ಬೆಳೆದ ಕಡೆ ನಾವೇನು ಬೇರು ಬಿಟ್ಟಿರುತ್ತೇವೆಯೇ ?ಜನರಲ್ಲಿ ಬಾಳಿ ಅವರ ಮನ್ನಣೆಯನ್ನು ಪಡೆದ ನಮ್ಮ ಜೀವನದ ಬೇರೆ ಬೇರೆ ಜೀವನಕ್ಕೆ ಸೇರಿರುವ ಹಾಗೆ ಎಲ್ಲಿ ಮಾಡಿದರೆ ಅಲ್ಲಿ ಸ್ಥಳ ತಳಿದ ಜನ ಇಲ್ಲದ ಮೇಲೆ ಹುಡ್ಡಿದ ಯಾರು ಪರ ಸ್ಥಳವೇ ಎಂದು ಹೇಳಿ ಕೆರೆಗೆ ಹೋಗಿ ಸ್ನಾನ ಮಾಡಿ ತಂದೆ ತಾಯಿಗೆ ದರ್ಪಣವನ್ನು ಕೊಟ್ಟು, ಇದೇ ನಿಮ್ಮ ಮಗನಾದುದಕ್ಕೆ ನಿಮಗೆ ಮಾಡಿದ ಶುಶ್ರೂಷೆ ಉತ್ತರ ಕ್ರಿಯೆ ಎಂದು ಕೊಂಡು ತೊರೆಯಪುರಕ್ಕೆ ಪ್ರಯಾಣ ಮಾಡಿದರು.

ತೊರೆಯಪುರದಲ್ಲಿ ಒಬ್ಬ ಹುಡುಗನ ಭೇಟಿಯಾಯಿತು. ಅವನೇ ವೆಂಕಟರಮಣ. ನಿಮ್ಮ ಪಿಟೀಲನ್ನು ನನಗೆ ಮಾರಿಬಿಡಿ ಎಂದಾಗ ಸುಬ್ಬಣ್ಣನವರು ನಾನು ಬಾರಿಸುವುದು ಇಲ್ಲ, ಮಾರುವುದು ಇಲ್ಲ ಎಂದರು. ಆಗ ಹುಡುಗ ಬಾರಿಸಲು ಬರದಿದ್ದರೆ ಬಾರಿಸುವವರಿಗಾದರೂ ಕೊಡಬೇಕು. ಕಸುಬುದಾರನಲ್ಲದಿದ್ದರೆ ಪಿಟೀಲು ಇಟ್ಟುಕೊಂಡು ಏನು ಮಾಡೇದು ಎಂದು ಆತ ಪಿಟೀಲು ಬಾರಿಸಿದಾಗ, ಸುಬ್ಬಣ್ಣನಿಗೆ ಕಲಾಉಪಾಸಕನ ಆವೇಶ ಬಂತು. ಪಿಟೀಲನ್ನು ಹಿಂದಕ್ಕೆ ಪಡೆದು ಬೈರವಿಯನ್ನು ಬಾರಿಸಿದರು.

ಸುಬ್ಬಣ್ಣನವರಿಗೆ ತನ್ನ ಮೇಲೆ ಬೇಸರ ಉಂಟಾಯಿತು. ಅವನಿಗೆ ಅವನ ಮೇಲೆ ಅಸಮಧಾನ ಉಂಟಾಗಿತ್ತು. ಎಲ್ಲವನ್ನೂ ಬಿಟ್ಟರೂ ತಾನು ಸಂಗೀತದ ಜಂಭವನ್ನು ಇನ್ನೂ ಬಿಡಲಿಲ್ಲ ಯಾವನೋ ಒಬ್ಬ ಹುಡುಗ ಬಂದು ಹಾಸ್ಯದ ಮಾತನ್ನಾಡಿದ್ದಕ್ಕೆ ತಾನು ಅದನ್ನು ಸಹಿಸಲಾರದೆ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವುದಕ್ಕೆ ಆರಂಭ ಮಾಡಿದನಲ್ಲ ಇದೇನು ಅವಿವೇಕ ಎಂದು ಅಸಮಧಾನ.

ಸುಬ್ಬಣ್ಣ ಸಂಗೀತ ಚಪಲವನ್ನು ಬಿಡಬೇಕೆಂದು ನಿರ್ಧರಿಸಿ ನೀರಕೊಳಕ್ಕಿಳಿದು ದೇವರೆ ಎಲ್ಲವನ್ನೂ ಬಿಟ್ಟೆ ಇದನ್ನು ಬಿಡುತ್ತೇನೆ ನನಗೆ ಶಾಂತಿಯನ್ನು ಕೊಡು ಎಂದು ಪಿಟೀಲನ್ನು ದೂರವಾಗಿ ನೀರಿನೊಳಕ್ಕೆ ತೇಲಿಬಿಟ್ಟರು ಇಲ್ಲಿಗೆ ಋಣ ಮುಗಿಯಿತೆಂದು ಸೋಪಾನದ ಮೇಲೆ ಕುಳಿತು ತಡೆಯಲಾರದೆ ಅತ್ತು ಬಿಟ್ಟರು "ನನ್ನ ಹೆಂಡತಿ ಹೋದಾಗಲೂ, ಮಕ್ಕಳು ಹೋದಾಗಲು ಕೂಡ ನಾನು ಅಷ್ಟು ಅಳಲಿಲ್ಲ ನೋಡಿ ಹಾಗೆ ಅತ್ತುಬಿಟ್ಟೆ. ನನ್ನ ಪ್ರಾಣ ತೆಗೆದು ಕಳಚಿ ಎಸೆದ ಹಾಗೆ ಆಯಿತು. ಆ ಪಿಟೀಲು ಎಸಿದಾಗ"4 ಅಂದರು.

---

4) ಸುಬ್ಬಣ್ಣ : ಪು. 59

'ಸುಬ್ಬಣ್ಣ' ನಿಗೆ ಪಿಟೀಲು ವೆಂಕಟರಮಣನಿಂದ ಮತ್ತೆ ದೊರೆತಾಗ ಸಂತೋಷವಾಯಿತು. ಹುಡುಗ ' ಸ್ವಾಮಿ ನಟುವರು ನಾವು, ನಿಮಗೆ ಇಷ್ಟವಿದ್ದಾಗ ತಿರುಗಿ ಬರುತ್ತೇನೆ ಅದಕ್ಕೆ ಮುಂಚೆ ಏನಾದರೂ ಬೇಕಾದರೆ ನಮ್ಮ ಮನೆಗೆ ಬಂದರೂ ಸರಿಯೆ. ಬರುವವರ ಕೈಯಲ್ಲಿ ಯಾರ ಕೈಯಲ್ಲಾದರೂ ಹೇಳಿಕಳುಹಿಸಿದರೂ ತರಿಸಿ ಕೊಡುತ್ತೇನೆ' ಎಂದ ಸುಬ್ಬಣ್ಣನಿಗೆ ನೀಲಸಾನಿಯ ಜ್ಞಾಪಕದಿಂದ ಅವನ ಮೇಲೆ ಸ್ವಲ್ಪ ಹೆಚ್ಚು ಅಂದರೆ ಅವಳು ನಟುವಳು ಈ ಹುಡುಗನೂ ನಟುವ ಇಂಥ ಸಂಬಂಧಗಳಿಂದ ಹೃದಯದಲ್ಲಿ ಸ್ನೇಹ ಮೊಳೆಯಿತು. ಸುಬ್ಬಣ್ಣನವರಿಗೆ ಈ ಹುಡುಗನ ಉತ್ಸಾಹ ದೂರದ ಮೋಡದಲ್ಲಿರುವ ಗುಡುಗಿನ ಧ್ವನಿಯಂತೆ ತಮ್ಮ ಚಿಕ್ಕಂದಿನ ಉತ್ಸಾಹವನ್ನು ನೆನಪಿಗೆ ತಂದಿತು.

ವೆಂಕಟರಮಣನ ಅಕ್ಕನಿಗೆ ಸುಬ್ಬಣ್ಣನನ್ನು ಕಂಡರೆ ಬಹಳ ತನಿಕರ. ಆಕೆಗೆ ಯಾರನ್ನು ಕಂಡರೂ ಕನಿಕರವೇ, ಅವರು ಜನರ ಕಷ್ಟವನ್ನು ನೋಡಲಾರರು. ಆಕೆಗೆ ಗಂಡನಲ್ಲಿ ಅತಿಶಯವಾದ ಪ್ರೇಮ, ಭಕ್ತಿ ಮಕ್ಕಳೆಂದರೆ ಹೇಳಲಾರದ ಅಕ್ಕರೆ. ಬಂದವರು ಹೋದವರಲ್ಲಿ ಎಷ್ಟೋ ವಿಶ್ವಾಸ. ಇವರು ಗಂಡನನ್ನು ಮಕ್ಕಳನ್ನು ನೋಡಿಕೊಳ್ಳುವ ರೀತಿಯನ್ನು ನೋಡಿ ಸುಬ್ಬಣ್ಣನವರಿಗೆ ಅವರಲ್ಲಿ ಬಹಳ ಮರ್ಯಾದೆ ಹುಟ್ಟಿತು. ಅವರು ಬಹಳ ದಿನದ ಮೇಲೆ ಹೇಳಬೇಕಾದರೆ ಎಂಥ ಹೆಂಗಸು ಸ್ವಾಮಿ ಆಕೆ ! ನಾನು ಒಬ್ಬರನ್ನು ಅಂಥವರನ್ನು ನೋಡಿದ್ದೆ ಈಗ. ಇನೊಬ್ಬರನ್ನು ನೋಡಿದ ಹಾಗಾಯಿತು" ಎಂದರು ಒಬ್ಬ ಯಾರು? ನನ್ನ ಸಂಸಾರ ಮಡಿದರು ಬಿಡಿ ಎಮದೋ ಒಂದು ಕಾಲದಲ್ಲಿ' ಎಂದು ಹೇಳುವಾಗ ಸುಬ್ಬಣ್ಣ ಮುಖವನ್ನು ಬೇರೆಡೆ ತಿರುಗಿಸಿಕೊಂಡರು. ಲಲಿತೆಗೆ ಪಾಠ ಹೇಳಿಕೊಡುವುದರಲ್ಲಿ ಸಂತೋಷ ಹೀಗೆ ಸಂಸಾರ ಸುಖ ಒಂದೊಂದು ಸುಬ್ಬಣ್ಣನನ್ನು ರಾಟೆಯ ಓಟದಲ್ಲಿ ಸೇರಿಕೊಂಡಿತು. ಇದಕ್ಕೆ ಸಿಕ್ಕಬಾರದು ಸಿಕ್ಕಬಾರದು ಎಂದುಕೊಳ್ಳುತ್ತಾ ಸೇರಿಯೂ ಸೇರದ ಹಾಗೆ ಇರಬೇಕೆಂದು ತುಂಬಾ ಪ್ರಯತ್ನಪಡುತ್ತಾ ಕಳೆಯುತ್ತಿದ್ದರು.

ಸುಬ್ಬಣ್ಣ ಚರಿತ್ರೆಯನ್ನು ಹೇಳುವಾಗ ಎಲ್ಲೋ ಸಾಕ್ಷವಾಗಿ ಸ್ವಲ್ಪವಾಗಿ ಅವರು ಮೊದಲಿನಿಂದ ಕೊನೆಯವರೆಗೆ ಹೇಳಿದರು "ತುಂಬಿ ಹರಿಯುವ ನದೀಲಿ ನೀರು ಕೆಂಪು ; ನೀರು ತಿಳಿಯಾಗಬೇಕದರೆ ಹೊಳೆ ಸಣ್ಣದಾಗಬೇಕು" ಎಂದರು " ಸ್ವಾಮಿ ಬಿಟ್ಟು ಪಡುವ ಸುಖ ಸುಖವಲ್ಲ. ಕಟ್ಟಿಕೊಂಡು ಅಮೇಲೆ ಬಿಡಬಹುದು. ಆದರೆ ಸುಖ ಸಂಸಾರ ಮಾಡದೆಯೇ ಇದ್ದಿದ್ದರೆ ನಿಮಗೆ ಸಂಸ್ಕಾರ ಹೇಗಾಗುತ್ತಿತ್ತ ? ಅವರು "ಇಲ್ಲಿಗೆ ಬಂದು ಈ ಸಂಸ್ಕಾರ ಏಕೆ ಆಗಬೇಕು ? ಎಂದರು.

ಸುಬ್ಬಣ್ಣನ ಶಿಷ್ಯಯಾದ ಲಲಿತ ಮನೆಯವರು ಬೇರೆ ಊರಿಗೆ ಹೋಗುವಾಗ ಸುಬ್ಬಣ್ಣ ಗಾಡಿಯ ಹಿಂದೆ ಓಡಿಬಂದರು ಪ್ರಾಣಭಯದಿಂದ ಓಡುವವರು ಹಾಗೆ ಓಡಲಾರರು. ಅಯ್ಯೋ ಈ ಸಂಸಾರ ಬಂಧನ ನನಗೆ ಬೇಡವೆಂದು ಹೊರಟು ಹೋಗಿದ್ದೆ ನನ್ನಿಂದಾಗಲಿಲ್ಲ ಬಂದೇಬಿಟ್ಟೆ ಲಲಿತಮ್ಮನನ್ನು ಹತ್ತಿರ ಕರೆದು ಆಶೀರ್ವಾದ ಮಾಡಿ ಆ ಮೇಲೆ ಮಾವನವರಿಗೆ ನಮಸ್ಕಾರ ಮಾಡಿ ಕೈ ಮುಗಿದು ಬೇರೆ ಮಾತನಾಡದೆ ಧಡಧಡನೆ ಬಂದ ಹಾಗೆಯೇ ಅವಸರವಾಗಿ ಹೊರಟು ಹೋದರು.

ಸಂಗೀತದಲ್ಲಿ ಒಂದೊಂದು ಮಟ್ಟಕ್ಕೂ ಏಳೇಳು ಸ್ವರನೇ ಏತಕ್ಕೆ ಸುಬ್ಬಣ್ಣನವರೇ ಎಂದರೆ ಅವರು "ನಾವು ಏಳು ಅಂತ ಇಟ್ಟುಕೊಂಡರೆ ಏಳು; ನೋಡಲದಲಿಕ್ಕೆ ಹೋದರೆ ಇಲ್ಲಿ ನೂರು ಕೋಟಿ ಸ್ವರ ಇಲ್ಲ ಒಂದು ಸ್ವರ" ಎಂದರು.

ಬಾಳಿನಲ್ಲಿ ಸುಬ್ಬಣ್ಣನಿಗೆ ಮೊದಲು ಚಿಂತೆ, ಆಮೇಲೆ ಬೇಸರ ಅತಿ ಘೋರ ಬೇಸರ " ಬ್ರಹ್ಮಾಂಡದ ದೈನ್ಯ ರಸ ತಟಾಕದ ಪಕ್ಕದಲ್ಲಿ ನಿಂತು ಸಣ್ಣ ರಂಧ್ರವನ್ನು ಕೊರೆದ ಹುಡುಗನಂತೆ" ಸುಬ್ಬಣ್ಣ. ಇಲ್ಲಿ ಸುಬ್ಬಣ್ಣ ಕೊನೆಗೆ ಭಗವಂತನಲ್ಲಿ ಅನನ್ಯ ಶರಾಣಾಗತಿಯನ್ನು ಹೊಂದಿದು ಮುಖ್ಯವಲ್ಲ ಅದಕ್ಕೆ ಒಯ್ದು ಅವನ ಬದುಕಿನ ರೀತಿಯೇ ಮುಖ್ಯ. ಆ ಮಟ್ಟಿಗೆ ಅವನ ಪಿಟೀಲು ಅವನ ಮೋಕ್ಷಕ್ಕೆ ಸಾಧಾನವಾಗಿಲ್ಲವೆಂದು ಹೇಳಬಹುದು.

ಎಂಭತ್ತಾರು ಪುಟಗಳ ಈ ಪುಟ ಕೃತಿಯಲ್ಲಿ ಮಾಸ್ತಿಯವರ ಜೀವನದ ಸಾರವೆಲ್ಲ ತುಂಬಿದೆ. ಅವರ ಈ ಮುಂದಿನ ವಿಸ್ತಾರವಾದ ಸಾಹಿತ್ಯವೆಲ್ಲಾ ಈ ತತ್ವ ತಾತ್ಪರ್ಯದ್ದೇ ವಾಕ್ಯಾನ ಮತ್ತು ವ್ಯಾಕರಣ ಗಂಡು ಹೆಣ್ಣಿನೊಂದಿಗೆ ಹೆಣ್ಣು ಹೆಣ್ಣಿನೊಂದಿಗೆ ಮಾನವ ಮಾನವನೊಂದಿಗೆ ಮಾನವ ಆದರ್ಶದೊಂದಿಗೆ ಇಟ್ಟುಕೊಳ್ಳಬೇಕಾದ ಸಂದರ್ಭಗಳ ಸಮಸ್ಯೆಗೆ ಬಗೆಹರಿಕೆಯೆ ತತ್ವಜ್ಞಾನ ಇಲ್ಲವೇ ದರ್ಶನ. ಅದೆಲ್ಲವೂ ಇಲ್ಲಿ ಬಾಲಕೃಷ್ಣನ ಬಾಯಲ್ಲಿ ಯಶೋದೆ ವಿಶ್ವ ರೂಪವನ್ನು ಕಂಡತೆ ಚಿಮ್ಮಟೆಗೆ ಮಣ್ಣಿನಿಂದ ನಾವು ಕಂಡುಕೊಳ್ಳುತ್ತೇವೆ ಎಂದು ಗೌರೀಶ್ ಕಾಯ್ಕಿಣಿ ಅಭಿಪ್ರಾಯ ಪಡುತ್ತಾರೆ.

ಒಟ್ಟಾರೆ ಇಲ್ಲಿ ಗಮನಿಸಬೇಕಾದ್ದು ಶಾಮಣ್ಣ ? ಸುಬ್ಬಣ್ಣನಾದ ಬಗೆಯದು ದಿ. ನವರತ್ನರಾಯರು 'ಸುಬ್ಬಣ್ಣ'ನ ಮೂಲ ವಸ್ತುವನ್ನು ಲೇಖಕರಿಗೆ ಒದಗಿಸಿದ್ದು ತಮ್ಮ ಪರಿಚಯದ ಒಬ್ಬ ವೃದ್ಧ ಗಾಯಕನ ಕಡೆಯ ದಿನಗಳನ್ನು ಅವರು ತಮ್ಮ ಸ್ನೇಹಿತರಿಗೆ ಬಣ್ಣಿಸಿ ಹೇಳಿದ ವ್ಯಕ್ತಿಯೇ ಈ ಕಥೆಯ ನಾಯಕ ನವರತ್ನರು ಆ ವ್ಯಕ್ತಿಯ ಕೊನೆಯ ದಿನಗಳನ್ನು ನಿರೂಪಿಸಿದ್ದು ಅವರು ಗುರುತುಹಾಕಿ ಕೊಟ್ಟ ಜೀವನದ ಸಂಪೂರ್ಣ ಚಿತ್ರ ಒಂದನ್ನೂ ಕಲ್ಪಿಸುವ ಪ್ರಯತ್ನದಲ್ಲಿ ಈ ಕಥೆ ನಿರ್ಮಾಣಗೊಂಡಿದೆ.

ಸಂಧ್ಯಾರಾಗ

ಅ.ನ.ಕೃ ಅವರ 'ಸಂಧ್ಯಾರಾಗ' ಸಂಗೀತ ಕಲಾವಿದನನ್ನು ಕುರಿತಾದ ಕಾದಂಬರಿಯಾಗಿದೆ. ಈ ಕಾದಂಬರಿಯ ವಸ್ತು ಕಲಾವಿದನಾದರೂ ರಾಮಚಂದ್ರ ಮತ್ತು ಲಕ್ಷ್ಮಣ ಈ ಇಬ್ಬರು ಅಣ್ಣ ತಮ್ಮಂದಿರ ಜೀವನದ ವೈದೃಶ್ಯ ಈ ಕಾದಂಬರಿಯ ರಚನಾತ್ಮಕ ತತ್ವ ಅಣ್ಣ ರಾಮಚಂದ್ರ ಚೆನ್ನಾಗಿ ಅಭ್ಯಾಸ ಮಾಡಿ ವಕೀಲ ವೃತ್ತಿಯನ್ನು ಆಯ್ದುಕೊಂಡ ನ್ಯಾಯದೀಶರ ಸ್ಥಾನವನ್ನು ಅಲಂಕರಿಸುತ್ತಾನೆ. ಆದರೆ ಆತನಲ್ಲಿ ಸ್ವಾರ್ಥ, ಕ್ರೂರತನ, ಹಣದಾಸೆ ತುಂಬಿರುತ್ತದೆ. ರಾಮಚಂದ್ರ ತಂದೆ-ತಾಯಿ ಪ್ರಯತ್ನ ಪೂರಕವಾಗಿ ಸಾಧಿಸಿದ್ದ ಕೌಟುಂಬಿಕ ಸಾಮರಸ್ಯವನ್ನು ತನ್ನ ಸ್ವಾರ್ಥಕ್ಕಾಗಿ ಹಾಳು ಮಾಡುತ್ತಾನೆ. ಅವನ ಮಲ ತಮ್ಮ ಲಕ್ಷ್ಮಣ ಹುಟ್ಟು ಕಲಾವಿದ. ತಂದೆ-ತಾಯಿಗಳ ಸಾವು ಮತ್ತು ತನ್ನ ಹೆಂಡತಿಯನ್ನೇ ಬಲಿ ತೆಗೆದುಕೊಂಡ ಅಣ್ಣನ ಅಮಾನುಷ ನಡತೆ ಲಕ್ಷ್ಮಣನಲ್ಲಿ ವೈರಾಗ್ಯವನ್ನು ಹುಟ್ಟಿಸುತ್ತವೆ. ಆತ ಮನೆ ಬಿಟ್ಟು ಏಕಾಏಕಾಯಾಗಿ ತಿರುಗುತ್ತಾನೆ ಸುದೈವದಿಂದ ಆತನಿಗೆ ಗುರು ಒಬ್ಬ ದೊರೆತು ಅವನ ಜೀವನಕ್ಕೆ ಒಂದು ದಿಕ್ಕು ಸಿಗುತ್ತದೆ. ಸಂಗೀತದಲ್ಲಿ ಅವನು ಗಳಿಸುವ ಸಿದ್ಧಿಯಿಂದಾಗಿ ಅವನಿಗೆ ಧನ ಮತ್ತು ಕೀರ್ತಿ ಎರಡು ಲಭಿಸುತ್ತದೆ ಆದರೆ ಇವು ಅವನ ಅಂತರಂಗವನ್ನು ಮುಟ್ಟುವುದಿಲ್ಲ. ಸಂಗೀತ ಮತ್ತು ತನ್ನ ಪ್ರೀತಿಯ ಹೆಂಡತಿಯ ನೆನಪು ಅವನಿಗೆ ರಕ್ಷೆ ಅವನಿಗೆ ನೀಡುತ್ತವೆ. ಪೂರ್ವಿ ರಾಗದ ಸಂಪೂರ್ಣ ಸಾಕ್ಷತ್ಕಾರದಲ್ಲಿ, ಹೆಂಡತಿಯ ನಾಮಜಪದಲ್ಲಿ ಲಕ್ಷ್ಮಣನ ಜೀವನದ ಅಂತ್ಯದೊಡನೆ ಕಾದಂಬರಿ ಕೊನೆಗೊಳ್ಳುತ್ತದೆ.

ಗಾಯಕ ಲಕ್ಷ್ಮಣ ಈ ಕಾದಂಬರಿಯ ಒಬ್ಬ ಪ್ರಮುಖ ವ್ಯಕ್ತಿಯು ಹಾಗೂ ಈ ಕಾದಂಬರಿಯ ನಾಯಕನು ಹೌದು. ಅಷ್ಟೇ ಅಲ್ಲ ನಮ್ಮನ್ನು ತನ್ನ ಕಡೆಗೆ ಆಕರ್ಷಿಸುವ ಶ್ರೀನಿವಾಸರಾಯರು,

ಮೀನಾಕ್ಷಮ, ಶಾಮಣ್ಣನವರು, ಲಕ್ಷ್ಮಣನ ಅಣ್ಣ ರಾಮಚಂದ್ರರಾಯ ಮೊದಲಾದರು ಇದ್ದಾರೆ. ಕಾದಂಬರಿ ಮೊದಲು ರಾಯರ ಸುತ್ತಮುತ್ತ ಹೆಣೆದುಕೊಳ್ಳುತ್ತದೆ. ಉತ್ತರಾರ್ಧದಲ್ಲಿ ಕೂಡ ರಾಮಚಂದ್ರ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆದಿದ್ದಾನೆ ಆದರೂ ಲಕ್ಷ್ಮಣ ಕಾದಂಬರಿಯ ಬೆನೆಲುಬಾಗಿದ್ದಾನೆ.

ಶ್ರೀನಿವಾಸರಾಯರ ಮನೆತನದ ಮೂಲ ಹೊಸಹಳ್ಳಿ, ಪರಂಪರಾಗುತ ಮೌಲ್ಯಗಳ ಸ್ವೀಕಾರದಿಂದ ವ್ಯಕ್ತಿ ದೊರಕಿಸಿದ ಧೈರ್ಯ, ಸ್ವಾಸ್ಥ್ಯಗಳ ಸಂಕೇತವಾಗಿದೆ. ಶ್ರೀನಿವಾಸರಾಯರು ಮತ್ತು ಮೀನಾಕ್ಷಮ್ಮನವರು ಆದರ್ಶ ದಾಂಪತ್ಯವನ್ನು ನಡೆಸುತ್ತಾರೆ. ಆದರೆ ಮೀನಾಕ್ಷಮ್ಮನ ಬಂಜೆತನ ಅವಳಿದ್ದ ಸಮಾಜದಲ್ಲಿ ಒಂದು ಶಾಪವಾದ್ದರಿಂದ ಅವಳು ತನ್ನ ಗಂಡನನ್ನು ಮರು ಮದುವೆಗೆ ಒತ್ತಾಯಿಸುತ್ತಾಳೆ. ಶ್ರೀನಿವಾಸರಾಯರ ಇಬ್ಬರ ಹೆಂಡಿರಲ್ಲಿಯ ಸಾಮರಸ್ಯ ಬಹುಶಃ ಆ ಸಾಂಸ್ಕೃತಿಕ ಸಂದರ್ಭದ ಹೊರಗಿನವರಿಗೆ ಅರ್ಥವಾಗುವುದು ಕಠಿಣ. ಆದರೆ ಅವರು ಅನೋನ್ಯವಗಿ ಜೀವಿಸುತ್ತಾರೆ. ಮುಂದೆ ಇಬ್ಬರಿಗೂ ಮಕ್ಕಳಾದರು ಅಂದಿನ ಪರಿಸ್ಥಿತಿಯಲ್ಲಿ ಬದಲಾಗುವುದಿಲ್ಲ. ಚಿಕ್ಕ ಹೆಂಡತಿ ಸಾವಿತ್ರಮ್ಮನಿಗೆ ಇಬ್ಬರು ಗಂಡು ಮಕ್ಕಳು,ರಾಮಚಂದ್ರ ಮತ್ತು ಗೋಪಾಲ. ಮೀನಾಕ್ಷಮ್ಮನಿಗೆ ಒಂದು ಗಂಡು ಮತ್ತು ಒಂದು ಹೆಣ್ಣು, ಲಕ್ಷ್ಮಣ ಮತ್ತು ಶಾಂತ.ಇಂತ ಕೌಟುಂಬಿಕ ಜೀವನವನ್ನು ರಾಮಚಂದ್ರನ ಸ್ವಾರ್ಥ ಹಾಳುಮಾಡುತ್ತದೆ. ರಾಮಚಂದ್ರ ತನ್ನ ಮನೆಯಿಂದ ಎಲ್ಲಾ ಲಾಭ ಪಡೆಯುತ್ತಾನೆ.ಆದರೆ ಮನೆಗಾಗಿ ಏನನ್ನು ಮಾಡಲು ಸಿದ್ದನಿಲ್ಲ.

ರಾಮಚಂದ್ರ ಚಿಕ್ಕಂದಿನಲ್ಲಿಯೇ ಹಠಮಾರಿ ಸ್ವಭಾವದವನು.ಅದಕ್ಕೆ ತಕ್ಕಂತೆ ಕ್ಲಾಸಿನಲ್ಲಿ ಜಾಣ ವಿದ್ಯಾರ್ಥಿಯೆಂಬ ಬಿರುದು ಅವನನ್ನು ಹೆಮ್ಮೆಯ ಶಿಖರಕ್ಕೆ ಒಯ್ದಿತ್ತು. ಲಕ್ಷ್ಮಣ ಸದಾ ಏಕಾಂತ ಪ್ರಿಯನೂ, ಸಂಗೀತದಲ್ಲಿ ಆಸಕ್ತನೂ ಆಗಿದ್ದು ಅಭ್ಯಾಸದಲ್ಲಿ ಹಿಂದದ್ದ ಹೀಗಾಗಿ ರಾಮಚಂದ್ರ ತಮ್ಮನಿಗೆ ಜರಿಕೆಯ ಮಾತನಾಡುವುದು ಸಹಜವಾಯಿತು.

ಶಾಮಣ್ಣನವರ ಬಳಿ ಇದ್ದ ತಂಬೂರಿಯನ್ನು ನೋಡಿದರೆ ಸಾಕು . ಲಕ್ಷ್ಮಣನ ಮೈ ಝುಂ ಎನ್ನುತಿತ್ತು. ಅದನ್ನು ಶೃತಿಮಾಡಿ ಮಿಡಿಯಿತೆಂದರೆ ಲಕ್ಷ್ಮಣನ ನರಗಳನ್ನು ಮಿಡಿದಂತಾಗುತಿತ್ತು. ಉದ್ವೇಗದಿಂದ ನಾಡಿಯು ಹೊಡೆದುಕೊಳ್ಳಲಾರಂಭವಾಗುತ್ತಿತ್ತು. ಶಾಮಣ್ಣನವರನ್ನು ಅವರ ತಂಬೂರಿಯನ್ನು ಒಂದು ಸಲ ರಾಮಚಂದ್ರ ಅಪಹಾಸ್ಯ ಮಾಡಿದ್ದು ರಾದ್ಧಾಂತಕ್ಕೆ ಇಟ್ಟುಕೊಂಡಿತ್ತು.

ಶಾಮಣ್ಣನವರನ್ನು ತಂಬೂರಿ ದಾಸಯ್ಯ ಎಂದದ್ದು ತಪ್ಪಾಯಿತೆಂದು ರಾಮಚಂದ್ರ ಹೇಳುವ ತನಕ ಲಕ್ಷ್ಮಣ ಬಿಡಲಿಲ್ಲ. ಇಂತಹ ಸಣ್ಣ ಪುಟ್ಟ ಘಟನೆಗಳು ರಾಮಚಂದ್ರ ಲಕ್ಷ್ಮಣನನ್ನು ಸ್ವಲ್ಪ ದೂರ ದೂರ ಮಾಡುತ್ತಿದ್ದವು.

ಶಾಮಣ್ಣನವರೂ ಹೊಸಹಳ್ಳಿಯವರಲ್ಲಿ ಕೃಷ್ಣರಾಜಪೇಟೆ ಅವರ ಸ್ಥಳ ಉರಿನಲ್ಲಿ ಪ್ಲೇಗು ಬಂದಾಗ ಶಾಮಣ್ಣನವರ ಮನೆ ತೊಳೆದು ಹೋಯಿತು. ಅವರ ಹೆಂಡತಿ ಮಗ ಇಬ್ಬರೂ ಪ್ಲೇಗ್ ಮಾರಿಯ ಬಾಯಿಗೆ ಬಲಿಯಾದರು .

ಅಂದಿನಿಂದ ಒಂದು ಬಗೆಯ ವಿರಕ್ತಿ ಹುಟ್ಟಿ ಶಾಮಣ್ಣನವರು ಊರು ಬಿಟ್ಟು ಅಲೆಯಲಾರಂಭಿಸಿದರು. ಅವರಿಗೆ ಭಾರತ ಓದುವ ಹವ್ಯಾಸ ಮೊದಲಿನಿಂದಲೂ ಇತ್ತು. ಈಗ ಒದಗಿದ ವಿಪತ್ತನ್ನು ಮರೆಯಲು ಭಾರತ ಪಠನವನ್ನೇ ಹೆಚ್ಚು ಊರ್ಜಿತ ಪಡಿಸುವುದಕ್ಕಾರಂಭಿಸಿದರು. ಹೀಗೆ ಶಾಮಣ್ಣನವರ ಕೀರ್ತಿ ಎಲ್ಲಾ ಕಡೆಗೂ ಪಸರಿಸಿತು. ತಮ್ಮ ಸಂಚಾರದಲ್ಲಿ ಒಂದು ಸಲ ಶಾಮಣ್ಣನವರು ಹೊಸಹಳ್ಳಿಗೆ ಬಮದಾಗ ರಾಯರು ಅವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡರು.

ಒಂದು ದಿನ ಲಕ್ಷ್ಮಣ ಭಜನೆ ಮಾಡುತ್ತರಬೇಕಾದರೆ ಒಬ್ಬ ಹೊಸಬನ ಆಗಮನವಾಗುತ್ತದೆ ಆತ ಬಂದು ಲಕ್ಷ್ಮಣನ ಹಾಡುತ್ತಿರಬೇಕಾದರೆ " ಸ್ವಲ್ಪ ತಡೀ ಮಗ ಆ ತಂಬೂರಿ ಇಲಿಗೆ ಕೊಡು" ಎಂದೂ ತಂಬೂರಿಯನ್ನು ತೆಗೆದುಕೊಂಡು ಶ್ರುತಿ ಮಾಡಿ ಊ – ಹಾಡು ಲಕ್ಷ್ಮಣ ಎಂದೆ ಹಾಡು ಮುಗಿಸುವ ಹೊತ್ತಿಗೆ ಹೊಸವಬನ ಎರಡು ಪಾದಗಳನ್ನು ಹಿಡಿದು ನಮಸ್ಕರಿಸಿದರನು. ಹೊಸಬ ಪ್ರೀತಿಯಿಂದ ಲಕ್ಷ್ಮಣನನ್ನು ಅಪ್ಪಿ,

"ಮಗಾ ಚೆಂದಾಕಿ ಶಾರದಮ್ನೋರ ಸೇವೆ ಮಾಡು ನಿನ್ನ ವಾಣೀಲಿ ತಾಯಿ ಬೀಜಾಕ್ಷರ ಬರದವ್ಳೆ. ನಾನು ಸಂಗೀತ ಲಿಯೋಕೆ ಉಟ್ಟಿಲ್ಲ ಅಪ್ಪಯ್ಯಾ – ಕಲ್ಸೋಕೆ – ನನ್ನಂತಾ ಮಂಗಗಳು ಮನುಸರ್ನ ಮಾಡೋಕೆ ಉಟ್ಟಿರೋ ಗುರು. ನೀನು ಎಂದಾದರೂ ದೊಡ್ಡೋನಾದಾಗ ಮುಳಬಾಗಿಲ ಚೆನ್ನಪ್ಪ ಏಳಿದ ಮೂರು ಇದೊಂತ ಜ್ಞಾಪಿಸ್ಕೋ" ಎಂದು ಹೇಳಿ ಧಡಧಡನೆ ಹೊರಟು ಹೋದ . ಮತ್ತೆ ಯಾರಿಗೂ ಅವನ ದರ್ಶನವಾಗಲೀ , ಪತ್ತೆಯಾಗಲೀ ಸಿಕ್ಕಲಿಲ್ಲ . ಚೆನ್ನಪ್ಪನ ರೂಪ ಧ್ವನಿ ಹಾಡುಗಳು ಹೆಸರು ಅವನ ಕಿವಿಯಲ್ಲಿ ನರ ನರಗಳಲ್ಲಿ ಚಿತ್ತದಲ್ಲಿ ಝೇಕರಿಸುತ್ತಿದ್ದವು ." ತಾಯಿ ಬೀಜಾಕ್ಷರ

ಬರೆದವೈ ನೀನು ಕಲಿಯೋಕೆ ಉಟ್ಟಿಲ್ಲ , ಕಲ್ಸೋಕೆ ". ಪ್ರತಿಯೊಂದು ಮಾತೂ ಅವನ ಮನಸ್ಸಿನಲ್ಲಿ ಅಚ್ಚೊತ್ತಿದ್ದವು. ಚನ್ನಪ್ಪನ ಪೂರ್ವಿ ಕಲ್ಯಾಣಿಯ ಹುಚ್ಚೇ ಹಿಡಿಸಿಬಿಟ್ಟಿತು . " ನಾನು ಅವರ ಹಾಗೆ ಪೂರ್ವಿ ಕಲ್ಯಾಣಿಯನ್ನು ಹಾಡಬಲ್ಲನಾದರೆ" ಎಂದುಕೊಳ್ಳುವನು.

ಶ್ರೀನಿವಾಸರಾಯರ ತಾಯಿ ತೀರಿಕೊಂಡ ಕಾರಣದಿಂದ ರಾಯರು ಮನೆ ಬಿಡಬೇಕಾಗಿ ಬಂದಿತು. ಇದರಿಂದ ಅವರು ಹೊಸಹಳ್ಳಿಯನ್ನು ಬಿಟ್ಟು ಬೆಂಗಳೂರಿಗೆ ಹೋಗಬೇಕಾಯಿತು.

ಲಕ್ಷ್ಮಣನಿಗೆ ಹೊಸಹಳ್ಳಿಯನ್ನು ಬಿಟ್ಟು ಬರುವಾಗ ಮನಸ್ಸು ಭಾರವಾಗಿತ್ತು. ಆದರೆ ಒಂದು ಸಮಾಧಾನವೂ ಸೇರಿತ್ತು. ಬೆಂಗಳೂರು ದೊಡ್ಡ ವಿದ್ವಾಂಸರ ಊರು ತಾನು ಸಂಗೀತ ಕಲಿಯಲು ಅವಕಾಶ ಸಿಕ್ಕುತ್ತದೆಂಬ ಆಸೆ. ಲಕ್ಷ್ಮಣ ರಾಯರಿಗೆ ನಾನು ಶಾಲೆಗೆ ಹೋಗುವುದಿಲ್ಲ ಸಂಗೀತ ಕಲಿಯುವ ಆಸೆಯಿದೆಯೆಂದು ನೇರವಾಗಿ ಹೇಳಿಬಿಟ್ಟನು. ರಾಯರಿಗೆ ಆತಂಕ ಹೆಚ್ಚಾಗಿ " ನಮ್ಮ ವಂಶದಲ್ಲಿ ಯಾರೂ ಸಂಗೀತಗಾರರಾಗಲಿಲ್ಲವಲ್ಲ , ಎನು ಮಾಡುವುದು ಎಂದು ಆಲೋಚಿಸಿ ಶಾಮಣ್ಣನವರಿಂದ ಹೇಳಿಸಿದರು ದಾಸಯ್ಯನಾಗಬೇಕೆಂದರೆ ಯಾರು ಎನು ಮಾಡುವುದಕ್ಕಾಗುತ್ತದೆ ಅವನ ಪೂರ್ವಾಜಿತ ಕರ್ಮ , ನೀನು ಒಂದು ಮಾತು ಹೇಳಿ ನೋಡು ಎಂದು ಹೇಳಿಸಿದಾಗ ಲಕ್ಷ್ಮಣ " ನಾನು ಹೊಟ್ಟೆ ತುಂಬಿಸಿಕೊಳ್ಳೋದಕ್ಕೆ ಸಂಗೀತ ಕಲಿಯಲ್ಲ ಎಂದು ಹೇಳಿಬಿಟ್ಟ" ಅವನ ಪ್ರವೃತಿ ಹೇಗಿದೆಯೋ ಹಾಗೆ ಮಾಡುವುದು ಒಳ್ಳೆಯದು ದಣಿಚಿತ್ತ ಎಂದು ರಾಯರು ಒಪ್ಪಿದರು.

ಗೋಪಿ ಬರೆದ ಕಥೆಯನ್ನು ಕೇಳಿ ಲಕ್ಷ್ಮಣ ಕಾಗದ ಮಸಿ ನಿನಗೆ ಸಾಧನ ನನಗೆ ಸರಿಗಮಪದನಿಸ ಸಾಧನ ಎಂದು ಜೀವನವೆಲ್ಲ ಅಷ್ಟೆ ನೋಡು ಒಂದು 'ಅ' ಕಾರದಲ್ಲಿ ಮುಗಿದು ಹೋಗುತ್ತೆ ಅದನ್ನು ಓಂಕಾರವೆನ್ನುತ್ತಾರೆ. ಸಾಮಾನ್ಯರು ಅಕ್ಷರ ಮಾಲೆಯ ಮೊದಲನೆಯ ಅಕ್ಷರವೆನ್ನುತ್ತಾರೆ. ಅದಷ್ಟು ನಮಗೆಲ್ಲ ಅರ್ಥವಾದರೆ ಸಾಲದೆ ? ನಾನು ಪಂಡಿತನಲ್ಲ , ಜ್ಞಾನಿಯಲ್ಲ , ಹೆಚ್ಚು ಕಲಿತವನೂ ಅಲ್ಲ ನನ್ನಿಂದ ಯಾವ ಪ್ರಯೋಜನವೂ ಇಲ್ಲ ನಿನಗೆ , ನನಗುಂಟು ನಿನ್ನ ಬರವಣಿಗೆ ಕೇಳಿದರೆ ಹೃದಯ ಹಗುರವಾಗುತ್ತದೆ. ಎಲ್ಲರೂ ಸಣ್ಣಪುಟ್ಟ ವಿಚಾರಗಳನ್ನೇ ಸದಾ ಚಿಂತಿಸುತ್ತಿರುವಾಗ ಯಾರಾದರೂ ದೊಡ್ಡ ವಿಚಾರಗಳನ್ನು ಎತ್ತಿದರೆ ಕತ್ತಲೆಯಲ್ಲಿ ಮಿಂಚು ಹುಳ ಸುಳಿದಂತಾಗುತ್ತದೆ ಎಂದು ಹೇಳಿದ.

ಮೀನಾಕ್ಷಮನವರು ಸೊಸೆಯರಿಬ್ಬರನ್ನು ಕರೆದುಕೊಂಡು ಹಳ್ಳಿಗೆ ಹೋಗಿ ಹಳ್ಳಿಯ ವಿಚಾರಗಳನ್ನು ಮತ್ತು ಅವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬ ಪಾಠವನ್ನು ಕಲಿಸಿದರು. ಹಳ್ಳಿಯಲ್ಲಿ ಲಕ್ಷ್ಮಣನ ಕಛೇರಿ ಆರಂಭವಾಯಿತು ಲಕ್ಷ್ಮಣ ಒಂದೆರೆದು ದೇವರ ನಾಮಗಳನ್ನು ಹಾಡಿ ಮಂಗಳವನ್ನು ಹಾಡಿಬಿಟ್ಟ. ಎಲ್ಲರೂ ಹೊಗಳಿದರು ಈ ಎಲ್ಲಾ ಹೊಗಳಿಕೆಯ ಮಾತುಗಳನ್ನು ಕೇಳಿ ಲಕ್ಷ್ಮಣನಿಗೆ ಬೇಸರ ಬಂದಿತ್ತು. ಅವನ ಧ್ಯಾನವೆಲ್ಲ ಚೆನ್ನಪ್ಪನ ಮೇಲೆ ನೆಟ್ಟಿತ್ತು.

'ಇಂದು ಅವರು ಕೇಳಿದ್ದರೆ ' ಮನಸ್ಸು ಕಾತರಪಡುತ್ತಿತ್ತು. ಹಿಂದಿನ ನೆನಪು ಅದೇ ಭಜನೆಯ ಮನೆ ಮಾತು ಹಾಡಿದುದು ಚೆನ್ನಪ್ಪನವರು ಹಾಡಿದುದು ಅವರು ಹೇಳಿದ ಮಾತುಗಳು ಕಿವಿಗೆ ಕಟ್ಟಿದಂತಿದ್ದವು. ಜನರ ಸ್ತುತಿಯನ್ನೆಲ್ಲಾ ಗುರುವಿಗೆ ಮನಸ್ಸಿನಲ್ಲಿಯೇ ಅರ್ಪಿಸಿಬಿಟ್ಟಿದರು. ಎಲ್ಲರ ಹೊಗಳಿಕೆಯನ್ನು ಅವನೇ ಮೆಚ್ಚಲಿಲ್ಲ " ಇಲ್ಲ ಇದು ಸಂಗೀತವಲ್ಲ ಸರಿಗಮಪದನಿಸಗಳ ಹೋರಾಟ ಸುಖವಾದ ಶಾರೀರದ ಸಮ್ಮೋಹನಾಸ್ತ್ರ ಒಂದು ದಿವಸ ನಿಜವಾದ ಸಂಗೀತವನ್ನು ಹಾಡಬೇಕು ಎಂದುಕೊಂಡ ಗೋಪಾಲ ಕಥೆಯನ್ನು ಲಕ್ಷ್ಮಣ ಅಂದು ನೆನಪಿಸಿಕೊಂಡ ಜನತೆಯ ಆಸೆ ಮುಗಿಯುವಲ್ಲಿ ಕಲಾವಿದನ ಆಸೆ ಆರಂಭವಾಗುತ್ತದೆ "ಜನತೆಗೆ ಯಾವುದು ಹಿತವಾಗುತ್ತದೆಯೋ ಅದು ಕಲಾವಿದನಿಗೆ ಅಹಿತಕರವಾಗುತ್ತದೆ ಜನತೆಗೆಲ್ಲಿ ತೃಪ್ತಿ ದೊರಕುತ್ತದೆಯೋ ಕಲಾವಿದನಿಗಲ್ಲಿ ಅತೃಪ್ತಿ ಮೊಳೆಯುತ್ತದೆ"5 ಎನ್ನುವ ಮಾತುಗಳು ಕಥೆಯಲ್ಲಿ ತನ್ನನ್ನೇ ಉದ್ದೇಶವಾಗಿ ಬರೆದನೋ ಎಂದು ಯೋಚಿಸತೊಡಗಿದ.

ಲಕ್ಷ್ಮಣನ ಲೆಕ್ಕಾಚಾರವೇ ಬೇರೆ ಸಮಾಜದವರು ಪ್ರತಿ ವರ್ಷವೂ ಕಛೇರಿಗೆ ಕರಿಯುತ್ತಲೇ ಇದ್ದರು. ತಾನು ದಕ್ಷಿಣಕ್ಕೆ ಹೋಗಿ ಅಲ್ಲಿ ಜಯಭೇರಿ ಹೊಡೆದು ಬಂದ ಹೊರತು ಸಮಾಜದಲ್ಲಿ ಕಛೇರಿ ಮಾಡುವುದಿಲ್ಲ ಕಛೇರಿ ಮಾಡುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟ ಅನಂತಚಾರ್ಯರ ಹತ್ತಿರ ಕಲಿತದ್ದು ಮುಗಿದಿದೆ ದಕ್ಷಿಣಕ್ಕೆ ಹೋಗಿ ನಾಯನಾವಳ್ಳಿಗಳ ಹತ್ತಿರ ಒಂದೆರಡು ವರ್ಷ ಇದ್ದು ಬರ ಬೇಕೂಂತ ಅವನ ಆಸೆ. ತಂದೆಯ ಸ್ಥಿತಿ ನೋಡಿ ಅವನ ಬಾಯಿ ಕಟ್ಟಿ ಹೋಗಿದೆ; ಒಳಗೆ ಕೊರಗುತ್ತಾ ಇದ್ದಾನೆ.

---

5) ಸಂಧ್ಯಾರಾಗ : ಪುಟ : 77

ಲಕ್ಷ್ಮಣನ ತಾಯಿ ಮೀನಾಕ್ಷಮ್ಮ ಮತ್ತು ರಾಯರು ತೀರಿಹೋದ ಮೇಲೆ ಮನೆಯಲ್ಲಿ ರಾಮಚಂದ್ರನ ದಬ್ಬಾಳಿಕೆ ಹೆಚ್ಚೆಯಿತ್ತು. ಈ ಸಂದರ್ಭದಲ್ಲಿ ರಾಮಣ್ಣ ನವರು ಮನೆ ಬಿಟ್ಟು ಹೋಗಲು ನಿರ್ಧಾರಿಸಿದರು. ಲಕ್ಷ್ಮಣ ರಾಮಚಂದ್ರನ ದಬ್ಬಾಳಿಕೆಯನ್ನು ನೋಡಿ ಈ ರಾಮ ರಾಜ್ಯದಲ್ಲಿ ಒಬ್ಬನೇ ಇರುವುದು ಹೇಗೆಂದು ಯೋಚಿಸುತ್ತಿರುವಾಗ ರಾಮಣ್ಣನವರು ಯೋಚಿಸಬೇಡ ಲಕ್ಷ್ಮಣ ಸತ್ಯ ಧರ್ಮ ನೀನು ಬಿಟ್ಟಿಲ್ಲ ಸತ್ಯ ಧರ್ಮಗಳೇ ನಿನ್ನ ಕಾಪಾಡುತ್ತದೆ. ಒಂದಲ್ಲ ಒಂದು ದಿವಸ ನಿಮ್ಮಣ್ಣನು ನಿನ್ನ ಪ್ರತಿಭೆಯ ಪ್ರಭಾವ ಕಾಣುತ್ತಾನೆ. ನಿನ್ನ ದಾರಿ ಬೇರೆ ಅವನ ದಾರಿ ಬೇರೆ ಎರಡು ಸೇರುವ ಸಂಭವವಿಲ್ಲ. ನೀನು ಮೇಲಕ್ಕೆ ಹೋಗುವುದಕ್ಕೆ ಆಸೆ ಪಡುತ್ತೀ. ಅವನು ಮುಂದೆ ಹೋಗುವುದಕ್ಕೆ ಆಸೆ ಪಡುತ್ತಾನೆ ಎಂದರು

ಅಣ್ಣ ರಾಮಚಂದ್ರನ ಅಮಾನುಷ ನಡೆತೆಯಿಂದ ಹೆಂಡತಿಯನ್ನು ಕಳೆದುಕೊಂಡ ಲಕ್ಷ್ಮಣ ಮನೆ ಬಿಟ್ಟು ಹುಚ್ಚನಂತೆ ತಿರುಗುತ್ತಾನೆ. ಲಕ್ಷ್ಮಣನಿದ್ದ ಸ್ಥಿತಿಯಲ್ಲಿ ಯಾರು ಅವನನ್ನು ಗುರುತಿಸುವಂತಿರಲ್ಲಿಲ್ಲಾ ಗುಣಿಬಿದ್ದ ಕಣ್ಣುಗಳು ಅರ್ಧ ನರೆತ ತಲೆ ಒಣಗಿ ಎಲುಬಿನ ಗೂಡಿನಂತ್ತಿದ್ದ ಮೈ ಕೊಳಕಿನ ಮುದ್ದೆಯಾಗಿದ ಬಟ್ಟೆ ಇದೇ ಲಕ್ಷ್ಮಣನೆಂದು ಯಾರು ನಂಬುವಂತಿರಲ್ಲಿಲ್ಲ ರೈಲು ಸಿಕ್ಕಿದಲ್ಲಿ ಹತ್ತುವನ್ನು, ಮನಸ್ಸು ಬಂದಾಗ ಇಳಿದುಬಿಡುವನ್ನು. ಎಲ್ಲಿಗೆ ಹೋಗಬೇಕೆಂಬ ನಿಶ್ಚಯವಿಲ್ಲ, ಗುರಿಯಿಲ್ಲ, ಇಂದಿದ್ದ ಊರು ನಾಳೆಯಿಲ್ಲ, ನಾಳೆಯಿದದ್ದು ನಾಳಿದಿಲ್ಲ, ನಿಂತಲ್ಲಿ ನಿಲ್ಲುತ್ತಿರಲ್ಲಿ, ಕುಳಿತಲ್ಲಿ ಕೂರುತ್ತಿರಲಿಲ್ಲ ಯಾರಾದರೂ ತನ್ನನ್ನು ನೋಡಿದರೆ ಒಂದೇ ಸಮನೇ ಅವರಿಂದ ಓಡುವನು. ಯಾರಾದರೂ ಕೃಪೆಯಿಟ್ಟು ನೀಡಿದಂದು ಆಹಾರ ನೀಡದಂದು ನಿರಹಾರ ನೋಡಿದವರೆಲ್ಲಾ "ಹುಚ್ಚ ಹುಚ್ಚ" ಎಂದು ಹಾಸ್ಯ ಮಾಡುತ್ತಿದ್ದರು ತಾನೇ ತನ್ನ ರೂಪವನ್ನು ಹೋಟೆಲಿನ ಬಾಗಿಲಲ್ಲಿ ಕಟ್ಟಿದ ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ " ಹುಚ್ಚ ಹುಚ್ಚ" ಎಂದು ನಕ್ಕು ಬಿಟ್ಟಿದ್ದನು. ಒಂದೊಂದು ಸಲ ತಾನು ಕನ್ನಡಿಯಲ್ಲಿ ನೋಡಿದ ವ್ಯಕ್ತಿ ಬೇರೆ ತಾನು ಬೇರೆ ಎಂದುಕೊಳ್ಳುವನು.

"ನಾನೇ ಹುಚ್ಚ ಕನ್ನಡಿಯಲ್ಲಿರುವವನು ಜಾಣ" ಎಂದು ನಿರ್ಧರಿಸಿಕೊಂಡನು. ಹುಚ್ಚಲೆ ದಾಟವು ಲಕ್ಷ್ಮಣನನ್ನು ಮದರಾಸಿಗೆ ಕರೆದುಕೊಂಡು ಬಂದಿತ್ತು. ತಿರುವಳ್ಳಿಕೇಣಿಯಲ್ಲಿ ಬರುತ್ತಿರುವಾಗ ಒಂದು ಜನ ಸಂದಣಿಯನ್ನು ಕಂಡನು ಕುತೂಹಲದಿಂದ ತಾನೂ ಬಂದು ನಿಂತನು. ಮದುವೆಯ ಮನೆ ಒಳಗೆ ಸಂಗೀತ ಕಛೇರಿ ನಡೆಯುತ್ತಿತ್ತು. ಜಾಗ ಬಿಡಿಸಿಕೊಂಡು ಲಕ್ಷ್ಮಣನೂ ಸಂಗೀತವನ್ನು

ಕೇಳುತ್ತಾ ನಿಂತ ಭಾಗವತರು ತೋಡಿಯ ಆಲಾಪನೆಗೆ ತೊಡಗಿದ್ದರು. ಲಕ್ಷ್ಮಣನ ಎದೆ ದಡದಡನೆ ಹೊಡೆದುಕೊಳ್ಳುತ್ತಿತ್ತು. ತಲೆಯಲ್ಲಿ ತುಂಬಿದ ಮಂಕು ಸ್ವಲ್ಪ ಸ್ವಲ್ಪ ಹರಿಯತೊಡಗಿತು. ಆಲಾಪನೆ ಮುಗಿಯಿತು. ಲಕ್ಷ್ಮಣ ಸ್ಮೃತಿ ತಪ್ಪಿ ಬಿದ್ದು ಬಿಟ್ಟ ಲಕ್ಷ್ಮಣನನ್ನು ಆಸ್ಪತ್ರೆಗೆ ಸಾಗಿಸಿದರು. ಲಕ್ಷ್ಮಣನಿಗೆ ಎಲ್ಲವೂ ಜ್ಞಾಪಕಕ್ಕೆ ಬರಲಾರಂಭಿಸಿತು. ತನ್ನ ಬಾಳು ತನ್ನ ಆಸೆ ತನ್ನ ಸ್ಥಿತಿ ಎಲ್ಲವನ್ನೂ ನೆನೆದು ಗೋಳೋ ಎಂದು ಅತ್ತನು. ಜಯಾಳರೂಪ ಎದುರಿಗೆ ಬಂದು ನಿಂತಿತು. ಅ ರೂಪ ಈ ರೀತಿ ಲಕ್ಷ್ಮಣನನ್ನು ಎಚ್ಚರಿಸಿದಂತೆ ಬಾಸವಾಯಿತು.

"ಗುರು ಋಣವನ್ನು ತೀರಿಸಲಿಲ್ಲ ಚೆನ್ನಪ್ಪನವರಿಗೆ ಏನು ಹೇಳುವಿರಿ ? ಅನಂತಚಾರ್‍ಯರಿಗೆ ಏನು ಹೇಳುವಿರಿ ?

"ತೀರಿಸುತ್ತೇನೆ"

"ಖಂಡಿತವೇ"?

"ಖಂಡಿತ"6

ಜಯಾಳ ರೂಪ ಮತ್ತೆ ಮತೆ ಎದರು ನಿಂತಿತು. ಸಂಜೆ ಡಾಕ್ಟರ್‌ರನ್ನು ಉದ್ದೇಶಿಸಿ "ದಿಕ್ಕಿಲ್ಲದೆ ಬಂದೆ, ಇಲ್ಲಿ ನನ್ನ ಭಾಗ್ಯದ ಬಾಗಿಲು ತೆರೆಯಿತು. ಆತ್ಮೀಯನಾದ ಬಂದು ದೊರಕಿದ ಎಂದುಕೊಂಡನು ತಕ್ಷಣವೇ ತನ್ನ ಅಣ್ಣನ ಜ್ಞಾಪಕ ಬಂದಿತು ಈ ಡಾಕ್ಟರ ಹೆಂಡತಿ ನನ್ನ ಅತಿಗೆಯಾಗ ಬಾರದಾಗಿತ್ತೇ ? ಆಗ ನನ್ನ ಜಯ ಉಳಿಯುತ್ತಿದ್ದಳೇನೋ ? ಎಂದುಕೊಂಡು ದುಃಖಪಟ್ಟನು.

ಡಾಕ್ಟರ್ ಸಹಾಯದಿಂದ ಭಾಗವತರ ಬಳಿಗೆ ಹೋದ ನೀನು ಬಂದದ್ದು ನನ್ನ ಭಾಗ್ಯಪ್ಪ. ನಿನ್ನ ವಿದ್ಯೆ ದೈವಿಕವಾದದ್ದು ಸಂಗೀತಶಾಸ್ತ್ರ ವಿದ್ಯೆಯನ್ನು ಹೇಳಿಕೊಡುತ್ತದೆ. ಅದು ನಿಜವಾದ ವಿದ್ಯೆಯಲ್ಲ ವಿದ್ಯೆ ಹೃದಯದಿಂದ ಬರಬೇಕು ಹೃದಯದಿಂದ ಸೇರಬೇಕು. ನಿನ್ನಲ್ಲಿದೆ ಅದಲು ನಿನ್ನಂತಹವನಿಗೆ ವಿದ್ಯಾದಾನ ಮಾಡಿದರೆ ನನ್ನ ಜನ್ಮ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಸಂಧ್ಯಾರಾಗ ಪುಟ : 139

ಲಕ್ಷ್ಮಣನ ಬಾಯಲ್ಲಿ ಮಾತೇ ಹೊರಡದಾಯಿತು. ಕೃಪೆಯಿಂದ ಗುರುಗಳನ್ನು ಗುರುಪತ್ನಿಯನ್ನು ವಂದಿಸಿದನು.

ಸಂಜೆ ಭಾಗವತರ ಕಛೇರಿ ಹೆಂಡತಿ ಮಗ, ಶಿಷ್ಯ ಇಷ್ಟೆ ಜನ ಶ್ರಾವಕರು ಮೊದಲು ಕೀರ್ತನೆಗಲನ್ನು ಹಾಡಿ ಪೂರ್ವಿ ಹಾಡಲು ಮೊದಲು ಮಾಡಿದರು. ಅಮೋಘವಾದ ರಾಗವಿಸ್ತಾರ ಅಪೂರ್ವವಾದ ಸಂಚಾರ ಸಂಧ್ಯಾರಾಗದ ಗಹನ ಗಂಭೀರತೆಯ ಹಾಡಿಕೆಯಲ್ಲಿ ಎದ್ದು ಕಾಣುತ್ತಿತ್ತು. ಪೂರ್ವಿರಾಗವನ್ನು ಮುಗಿಸಿ,

"ಲಕ್ಷ್ಮಣ ಇದು ಪೂರ್ವಿ ಅಂದರೆ ಸಂಧ್ಯಾರಾಗ ಪೂರ್ವಿಯಲ್ಲಿ ನನಗೆ ನಿಜವಾಗಿಯೂ ಈ ರಾಗವನ್ನು ಹಾಡುವುದಕ್ಕೆ ಬರುವುದಿಲ್ಲ. ಭೂಮಿಯನ್ನು ಭೇದಿಸಿಕೊಂಡು ಬುಗ್ಗೆ ಹೊರಡುವಂತೆ ಹೃದಯವನ್ನು ಭೇದಿಸಿಕೊಂಡು ರಾಗ ಬರಬೇಕು ನನ್ನ ಪೂವಿ ಹೃದಯದಿಂದ ಬರುವುದಿಲ್ಲ ತಲೆಯಿಂದ ಬರುತ್ತದೆ ನಿನಗೆ ಪೂರ್ವಿಯ ದತ್ತು ಕೊಟ್ಟಿದ್ದೇನೆ. ನಾನು ಆಸೆ ಪಟ್ಟುಕೊಂಡಿದ್ದ ಹಾಗೆ ಎಂದಾದರೂ ನೀನು ಹಾಡಿಬಿಡು ಅಂದು ನಾನು ಪಾವನನಾಗುತ್ತೇನೆ ಅಂದು ನಾನು ಋಣ ಮುಕ್ತ ನಾಗುತ್ತೇನೆ, ನಿನ್ನಿಂದ ನಾನು ನಿರೀಕ್ಷಿಸುವ ಗುರುದಕ್ಷಿಣೆ ಅದೇ ಕಣಪ್ಪಾ" ಎಂದರು. ಲಕ್ಷ್ಮನನ ಮನಸ್ಸು ಬಿನ್ನವಾಯಿತು ಹೃದಯ ಭಾರವಾಯಿತು ಗುರುಗಳು ಹೇಳಿದರು, " ನಿನ್ನ ವಿದ್ಯೆ ದೈವಿಕವಾದುದು ಅದನ್ನು ಸತ್ಪಾತ್ರದಲ್ಲಿ ಧಾರೆಯರೆ ನಿನ್ನ ಬೆಳಕಿನ ಹೃದಯಗಳು ಬೆಳಗುತ್ತವೆ ಬೆಳಗಿಸು ಲೋಕವನ್ನು ಅಂಧಕಾರ ಕೊಪದಿಂದ ನಿವೃತ್ತ ಮಾಡು" ದೊಡ್ಡ ಮಾತಾಯಿತು ತಮ್ಮ ದೀವಟಿಗ ಹೊರಡುವ ದೀವಟಿಗ ನಾನು ಅಷ್ಟೆ ಎಂದನು.

ಲಕ್ಷಣ ತನ್ನ ಊರಿಗೆ ಬರಲೆಂದು ರೈಲು ಹತ್ತಿದನು ಮನಸ್ಸಿನಲ್ಲಿ ಭಾವನೆಗಲ ತರಂಗವೇ ಎದ್ದು ಬಿಟ್ಟಿತು ಅದೇ ಕಾವೇರಿ, ಹಚ್ಚ ಹಸುರಿನ ಗದ್ದೆಗಳು ಮುಗಿಲಮಟ್ಟಕ್ಕೆ ಬೆಳದಿದ್ದ ತೆಂಗಿನ ಮರಗಳು, ಎಲ್ಲೆಲ್ಲಿಯೂ ತುಂಬಿದೆ ಪ್ರಕೃತಿಯ ನೋಟ, ಪ್ರಕೃತಿಯ ಗೆಲುವು ನಗೆ. ಹಿಗ್ಗು ಆದರೆ ಲಕ್ಷ್ಮಣನ ಮನಸ್ಸಿನಲ್ಲಿ ಅನುಭವಿಸಲಾಗದಷ್ಟು ನೋವು ಹಳೆಯ ನೆನಹುಗಳೆಲ್ಲವೂ ಒಂದೊಂದಾಗಿ ಹೊಸ ಕಳೆಗೂಡಿ ಬರಲಾರಂಭಿಸಿದವು ಮತ್ತೆ ಬೆಂಗಳೂರಿಗೆ ಹೋಗಬೇಕಲ್ಲ ಎಂದುಕೊಂಡನು ಬೆಂಗಳೂರಿನ ನೆನಪೆ ಅವನ ದೇಹವನ್ನು ನಡುಗಿಸಿಬಿಡುತ್ತಿತ್ತು. ಒಂದು ಬಗೆಯ ಭೀತಿಯ ಹೃದಯದಲ್ಲಿ ದಾರುಣವಾದ ಕಳವಳವನ್ನು ಉಂಟು ಮಾಡುತ್ತಿತ್ತು. ದಣಿದು ಸೋತ ಮನಸ್ಸು ತಂಗಾಳಿಯ

ನೇವರಿಕೆಯಿಂದ ನಿದ್ರಿತವಾಗುತ್ತಿತ್ತು. ಪ್ರಿಯ ವಸ್ತುವಿನ ನೆನಪೆ ಆಶಾಂತಿಯನ್ನು ದೂರ ಮಾಡುತ್ತಿದ್ದ ಶಾಂತಿ ಮಂದಾನಿಲವಾಗಿತ್ತು.

"ಜಯ ನಾನು ಕಲಿತು ಬಂದಿರುವ ಅಲ್ಪ ವಿಧ್ಯೆಯಲ್ಲ ನಿನ್ನದಮ್ಮ ನೀನು ಎಚ್ಚರಿಸದಿದ್ದರೆ ನಾನು ದಿಕ್ಕೆಟ್ಟು ಬೀದಿಯ ಬಿಕಾರಿಯಂತೆ ಅಲಿಯುತ್ತಿದ್ದೆ ನೀನು ಚಿರಂಜೀವಿಯಾಗಿರುವೆ ಆದರೆ.................ಆದರೆ.................ಎಲ್ಲಿರುವೆ" ದುಃಖವು ಉಕ್ಕಿಬಂತು ಮುಖವನ್ನು ಮುಚ್ಚಿಕೊಂಡನು.

ಒಂದು ದಿನ ಲಕ್ಷ್ಮಣನ ಕಛೇರಿಯು ಆರಂಭವಾಯಿತು, ಎಲ್ಲಾ ಸ್ವರಗಳಿಂದ ಕೂಡಿದ ಪೂರ್ಣರಾಗವನ್ನು ಬೇಕೆಂತಲೇ ಆಯ್ದುಕೊಂಡನು "ಮಡಿಕೆ ಮಾಡುವರೆ ಮಣ್ಣೇ ಮೊದಲು" ಎಂಬ ಬಸವಣ್ಣನವರ ವಚನವನ್ನು ಹಾಡಿದನು, ಮುಂದೆ ಪುರಂದರದಾಸರ ಹೊಲೆಯ ಹೊರಗಿಹನೆ ಊರೊಳಗಿಲ್ಲನೇ ಎಂಬ ಕೀರ್ತಿಯನ್ನು ಮುಖಾರಿಯಲ್ಲಿ ಹಾಡಿ ಕನಕದಾಸ 'ತಲ್ಲಣಿಸದಿರು ಕಂಡ್ಯಾ ಎಲೆ ಮನವೇ ಎಂಬ ಕೀರ್ತನೆಯನ್ನು ಹಾಡಿದನು.

ಕಲ್ಯಾಣಿಯನ್ನು ತೆಗೆದುಕೊಂಡು ವಿಸ್ತಾರವಾಗಿ ರಾಗವನ್ನು ಹಾಡಿ ಪುರಂದರ ದಾಸರ 'ತನುವು ನೀರೊಳಗದ್ದಿ ಫಲವೇನು' ಎಂಬ ಕೀರ್ತನೆಯನ್ನು ಹಾಡಿದನು " ಎನ್ನ ಕಾಯುವ ದಂಡಿಗೆಯ ಮಾಡಯ್ಯ! ಎನ್ನ ಶಿರವ ಸೋರೆಯ ಮಾಡಯ್ಯ ಎನ್ನ ನರವ ತಂತಿಯ ಮಾಡಯ್ಯ! ಎನ್ನ ಬೆರಳ ಕಡ್ಡಿಯ ಮಾಡಯ್ಯ ಬತ್ತಿಸರಾಗವ ಹಾಡಯ್ಯ! ಎನ್ನ ಉರದಲೊತ್ತಿ ನಿನ್ನ ಜಯಗಾನವ ಬಾರಿಸು ಕೂಡಲ ಸಂಗಮದೇವ! ಎಂಬ ವಚನವಂತೂ ಮನೋಧರ್ಮವನ್ನು ಸೂಚಿಸುತ್ತಿತ್ತು . ಅವನ ಚಿತ್ತ ಭಿತ್ತಿಯ ಮೇಲೆ ಜಯ ಮಾಡಿಬಿಟ್ಟಳು, ಒಂದೆಡೆ ಅವನ ಜೀವನದ ತ್ರಿಮೂರ್ತಿಗಳಂತಿದ್ದ ಗುರುಗಳು ನಿಂತು ಹರಸುತ್ತಿದ್ದಂತೆ ಭಾಸವಾಯಿತು ಜಯ ಅವನಿಗೆ ದರ್ಶನವನ್ನಿತ್ತಿದ್ದುದು ಅಂದೇ ಆನಂದ ಭೈರವಿಯು ಹಾಡುತ್ತಿತ್ತು ಒಮ್ಮೆಲೆ ಲಕ್ಷ್ಮಣನ ಹೃದಯದಲ್ಲಿ ಯಾವುದೇ ಅಪೂರ್ವ ಶಕ್ತಿಯು ಪ್ರವೇಶಿಸದಂತಾಯಿತು ಆನಂದ ಭೈರವಿಯು ಮುಗಿಯುವುದೇ ತಡ ನೇರವಾಗಿ ಪೂರ್ವಿರಾಗವನ್ನೆತ್ತಿಕೊಂಡನು.

ರಾಗ ಎರಡನೇಯ ಕಾಲದಿಂದ ಮೂರನೆಯ ಕಾಲಕ್ಕೆ ಹೋಯಿತು ಲಕ್ಷ್ಮಣನ ಕಣ್ಣುಗಳಲ್ಲಿ ಧಾರೆ ನಿಂತಿತ್ತು, ರಾಗೋಚಿತವಾದ ವೇಗವು ಅವನ ಹಾಡಿಕೆಯಲ್ಲಿ ಕಾಣ ಬರುತ್ತಿದ್ದರೂ ಮನಸ್ಸು

ಶಾಂತವಾಗಿತ್ತು ರಾಗ ಮುಗಿಯುವ ಹೊತ್ತಿಗೆ ತಂಬೂರಿಯ ತಾರಕ ಷಡ್ಜದ ತಂತಿ ಹಾರಿತು ಆದರೆ ಠೇಂಕಾರವು ಸಭಾಸದಸ್ಯರನ್ನು ಎಚ್ಚರ ಗೊಳಿಸಿತು ತಂಬೂರಿಯು ಲಕ್ಷ್ಮಣನ ಕೈಯಿಂದ ಜಾರಿ ನೆಲಕ್ಕುರಿಳಿತು, ಲಕ್ಷ್ಮಣನು ಅದರ ಜತೆಯಲ್ಲಿಯೇ ನಲಕ್ಕುರಿಳಿದನು.

"ಜಯಾ"..................................

ಎಂಬ ಎರಡೆ ಅಕ್ಷರವೂ ಎಲ್ಲರ ಕಿವಿಯನ್ನು ಮುಟ್ಟಿತು ಅದೇ ಮಂಗಳ ಕಛೇರಿಯು ಕೊನೆಗೊಂಡಿತು. ಗಾಯಕನು ಸಂಧ್ಯಾರಾಗದಲ್ಲಿ ತನ್ನ ಆತ್ಮ ಪ್ರಣತಿಯನ್ನು ತೇಲಿ ಬಿಟ್ಟಿದ್ದನು. ಮುಂದೆ ಬರಲಿದ್ದ ಗಂಢಾಂಧಕಾರಕ್ಕೆ ಅ ಪ್ರಣತಿಯ ತೇಜಸ್ಸೆ ಬೆಳಕು. ತನ್ನ ಜೀವನ ಸಂಧ್ಯಾರಾಗವನ್ನು ಹೇಳಿ ಮುಗಿಸಿದನು. ಮರುಕ್ಷಣವೇ ಉದಯರಾಗದ ಕರೆ–

ಸಂಧ್ಯಾರಾಗ ಎಲ್ಲರ ಕಿವಿಗೂ ಬಿದ್ದಿತ್ತು. ಆದರೆ ಉದಯರಾಗ ಕೇಳಿ ಬಂದದ್ದು ಲಕ್ಷ್ಮಣನಿಗೊಬ್ಬನಿಗೇ!

ಅಧ್ಯಾಯ-5

ಕಾದಂಬರಿಗಳಲ್ಲಿನ ಸನ್ನಿವೇಶ ಮತ್ತು ಪಾತ್ರಚಿತ್ರಣ

ಸುಬ್ಬಣ್ಣ ಕಾದಂಬರಿಯ ಸನ್ನಿವೇಶ:-

ಒಂದು ಕಾದಂಬರಿಯಲ್ಲಿ ಪಾತ್ರಗಳು ಎಷ್ಟು ಮುಖ್ಯವೋ ಹಾಗೆಯೇ ಅಲ್ಲಿನ ಸನ್ನಿವೇಶಗಳೂ ಮುಖ್ಯ ಮಾಸ್ತಿಯವರ ಸುಬ್ಬಣ್ಣ ಕಾದಂಬರಿಯಲ್ಲಿ ಕಂಡುಬರುವ ಒಂದೊಂದು ಸನ್ನಿವೇಶಗಳೂ ಅವನ ಬಾಳಿನ ಆಯಕಟ್ಟಿನ ಘಟ್ಟದ್ದು ಎಂದು ಹೇಳಬಹುದಾಗಿದೆ. ಕಾದಂಬರಿಯಲ್ಲಿ ಹಲವಾರು ಸನ್ನಿವೇಶಗಳು ಮುಖ್ಯಘಟನೆಗಳು ಕಂಡುಬರುತ್ತವೆ. ಇವುಗಳೆಲ್ಲ ಕಾದಂಬರಿಗೆ ಆಕರ್ಷಣೆಯನ್ನು ತಂದಿದೆ. ಇವುಗಳಲ್ಲಿ ಕೆಲವು ಮುಖ್ಯವಾದ ಸನ್ನಿವೇಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕಾದಂಬರಿಯ ಮೊದಲಲ್ಲೆ ಕಂಡುಬರುವ ಒಂದು ಸನ್ನಿವೇಶ ಸುಬ್ಬಣ್ಣನನ್ನು ಸಂಗೀತಗಾರನಾಗಲು ಸ್ಫೂರ್ತಿಯಾಯಿತೆಂದು ಹೇಳಬಹುದು. ಆ ಸನ್ನಿವೇಶವೆಂದರೆ ಸುಬ್ಬಣ್ಣ ತಂದೆಯೊಡನೆ ಮಹಾರಾಜರ ಬಳಿ ಹೋಗಿದ್ದಾಗ ಅಲ್ಲಿ ಹಾಡುತ್ತಾನೆ. ಆಗ ರಾಜರು ಇವನ ಹಾಡನ್ನು ಕೇಳಿ ಮೆಚ್ಚಿಕೊಂಡು "ನೀನು ಚೆನ್ನಾಗಿ ಹಾಡುವುದನ್ನು ಕಲಿತುಕೊ ನಿನಗೆ ಖಿಲ್ಲಿತ್ತು ಕೊಡುತ್ತೇನೆ" 1 ಎಂದರು ಅಂದಿನಿಂದ ಒಂದು ಗೀಳು ಹಿಡಿಯಿತು.

ಸುಬ್ಬಣ್ಣ ಸಂಗೀತ ಅಭ್ಯಾಸ ಮಾಡುತ್ತಿದ್ದದು ಒಬ್ಬ ವೇಶ್ಯೆಯ ಮನೆಯಲ್ಲಿ, ಏಕೆಂದರೆ ಸಂಗೀತ ಅಭ್ಯಾಸ ಮಾಡಲು ಮನೆಯಲ್ಲಿ ಅನುಕೂಲವಿರಲಿಲ್ಲ ಕಾರಣ ಮನೆಯಲ್ಲಿ ಹೆಂಗಸರ ಕೂಗಾಟ, ಆದ್ದರಿಂದಲೇ ನೀಲಸಾನಿ ಎಂಬ ವೇಶ್ಯೆಯ ಮನೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಸುಬ್ಬಣ್ಣ- ನೀಲಸಾನಿಯರ ಸಂಬಂದ ಅನ್ಯೋನ್ಯ ಋಣಾನುಬಂಧ. ಈ ಕಾದಂಬರಿಯಲ್ಲಿಯೇ ಅತ್ಯಂತ ಮನೋಹರವಾದ ಕೋಮಲ ರಮಣೀಯ ಸಂಗತಿ-ನೀಲಾ ಸುಬ್ಬಣ್ಣನನ್ನು ದೇವರೆಂದೇ ಭಾವಿಸಿದಳು. ತೀರಾ ಹತ್ತಿರ ಸುಳಿದಾಡುತ್ತಿದ್ದರೂ ದೂರದಲ್ಲಿಯೇ ನಿಂತು ಕೊಂಡು ಅವನನ್ನು ಆರಾಧಿಸುತ್ತಿದ್ದಳು. ಅವನು ಕೇಳಿದಾಗ ಕೇಳಿದ್ದಕ್ಕಿಂತ ಹೆಚ್ಚಿನ ಹಣವನ್ನು ಯಾಕೆಂದು

---

1. ಸುಬ್ಬಣ್ಣ ಕಾಂದಬರಿ ಪುಟ -4

ಮರುಮಾತನಾಡದೆ ಆನಂದದಿಂದ ಕೃತಜ್ಞತೆಯಿಂದ ಕೊಟ್ಟವಳು. ಆತ ಕಲಕತ್ತೆಯಿಂದ ಆ ಹಣವನ್ನು ತಿರುಗಿ ಕಳುಹಿಸಿದಾಗಲೂ ಅದನ್ನು ದೇವರ ಪೆಟ್ಟಿಗೆಯಲ್ಲಿ ಇಟ್ಟು ಪೂಜಿಸುದಳು. ಕಾದಂಬರಿಕಾರರು ಈ ಸನ್ನಿವೇಶವನ್ನು ಉತ್ತಮವಾಗಿ ಅಂದರೆ ಅಭಾಷಕ್ಕೆ ಆಸ್ಪದವಾಗದ ರೀತಿಯಲ್ಲಿ ಚಿತ್ರಿಸಿದ್ದು ಒಬ್ಬ ವೇಶ್ಯೆಗೆ ಒಂದು ಒಳ್ಳೆಯ ಸ್ಥಾನವನ್ನು ತಂದುಕೊಟ್ಟಿದ್ದಾರೆ. ಇದರಿಂದ ಅವರು ವೃತ್ತಿಯಲ್ಲಿ ವೇಶ್ಯಯಾರದರು ಅವರಲ್ಲೂ ಮಾನವೀಯತೆ ಅನುಕಂಪಗಳು ಇರುತ್ತವೆ. ಎಂಬುದನ್ನ ಸಂಪ್ರದಾಯದಿಂದಲೇ ಬಂದಂತಹ ಕಾದಂಬರಿಕಾರರು ಈ ಪಾತ್ರವನ್ನು ಒಳ್ಳೆಯ ದೃಷ್ಟಿಯಲ್ಲೇ ನೋಡಿರುವುದು ಕಂಡುಬರುತ್ತದೆ.

ಇನ್ನೂ ಎರಡನೆಯಾದಗಿ ಸುಬ್ಬಣ್ಣ ಲಲಿತ ಹಠಮಾಡಿದಳೆಂದು ಕಾರಣದಿಂದ ಆಕೆಗೆ ಹೊಡೆದಾಗ ನಂತರ ತಾನೇ ನೋವಾಯಿತೇ ಎಂದು ಕೇಳುವ ಸಂದರ್ಭವು ಕಾದಂಬರಿಯ ಮತ್ತೊಂದು ಪ್ರಮುಖವಾದ ಸನ್ನಿವೇಶ. ಯಾಕೆಂದರೆ ಇದುವರೆವಿಗೂ ಅವರಿಬ್ಬರಿಗೂ ಯಾವ ಸಂಬಂಧವೂ ಇಲ್ಲದಂತಿದ್ದರು. ಆದರೆ ಇದಾದ ನಂತರ ಇಬ್ಬರೂ ಒಂದಾದರು. ಇದನ್ನು ಕಾದಂಬರಿಕಾರರು ಒಂದು ರೂಪಕದ ಮೂಲಕವೆ ಹೇಳುತ್ತಾರೆ. ಲಲಿತಾ ಕೊಟ್ಟ ಮುತ್ತಿನಿಂದ ಕಣ್ಣುತೆರೆದ ಸುಬ್ಬಣ್ಣನನ್ನು "ಪರ್ವತರಾಜಕನ್ಯೆಯ ತಪಸ್ವಿಗೆ ಮೆಚ್ಚಿದ ಪರಶಿವನಂತೆ ಯಾವ ಮಾತನ್ನೂ ಆಡದೆ ಯಾವ ಯೋಚನೆಯನ್ನೂ ಮಾಡದೆ ಅವಳನ್ನು ಎರಡೂ ಕೈಗಳಿಂದಲೂ ಹಿಡಿದು ಹತ್ತಿರಕ್ಕೆ ಕರೆದುಕೊಂಡು ಶಾನೆ ನೋವಾಯಿತೆ?" 2.ಎಂದು ಹೇಳುವಾಗ ಇದು ಬದುಕು ಭಾವನೆಯನ್ನು ಮೀರಿದ ಪ್ರಣಯ ಆಕಾರವನ ತಿಳಿಯುವುದು ಇಂತಹ ಮಾತುಗಳಲ್ಲಿ ಲಲಿತಾತನ್ನ ಗಂಡನಿಗೆ ಗೃಹಿಣಿಯಾದಳು. ಆ ವರೆಗೆ ಗೃಹಿಣಿಯಾಗಿರಲಿಲ್ಲಿವೇ ಎಂದು ಯಾರಾದರೂ ಕೇಳಬಹುದು. ಅದಕ್ಕೆ ಇಲ್ಲವೆಂದೇ ಹೇಳಬೇಕು. ಹೆಂಗಸಿಗೆ ಗಂಡನ ಹೃದಯದಲ್ಲಿ ಎಂದು ಸ್ಥಿರವಾದ ಸ್ಥಾನ ಸಿಗುವುದೋ ಅಂದೇ ಅವಳು ಗೃಹಿಣಿಯಾಗುವಳು. ಯಜಮಾನಿ ಮನೆಯಲ್ಲಿ ತನ್ನ ಮಗಳಾದ ಲಕ್ಷ್ಮಿ ಗರ್ಭಿಣಿಯಾಗಿ ಮನೆಗೆ ಬಂದಾಗ ಮನೆಯಲ್ಲಿ ಅಸಮಾಧಾನ ಹೆಚ್ಚಾಯಿತು. ಯಜಮಾನಿ ಸೊಸೆಗೆ ಒಂದು ರೀತಿ ಮಗಳಿಗೆ ಒಂದು ರೀತಿ ಮಾಡುತ್ತಿದ್ದರು. ಮಗಳ ಮಕ್ಕಳಿಗೆ ಮೊಸರು,

---

2. ಸುಬ್ಬಣ್ಣ– ಕಾದಂಬರಿ ಪುಟ –17

ಮಗನ ಮಕ್ಕಳಿಗೆ ಮಜ್ಜಿಗೆ ನೀರಾದ ಮಜ್ಜಿಗೆ, ಇದನ್ನೆಲ್ಲಾ ಸುಬ್ಬಣ್ಣ ನೋಡುತ್ತಿದ್ದನು. ಆದರೂ ಸುಬ್ಬಣ್ಣ ಮಾತನಾಡುವ ಮನುಷ್ಯನಲ್ಲ ಹೀಗೆ ಬರಬರುತ್ತಾ ಮಗನಿಗೆ ತಾಯಿಯ ವಿಷಯದಲ್ಲಿ ಅಸಮಧಾನ ಹೆಚ್ಚಿತು. ತಾಯಿ ತನ್ನ ಹೆಂಡತಿಯನ್ನು ಸರಿಯಾಗಿ ನೋಡುತ್ತಿಲ್ಲವೆಂದೂ, ತಾನು ತನ್ನ ಹೆಂಡತಿಗೆ ಸರಿಯಾದ ಸಂಸಾರವನ್ನು ಕಟ್ಟಿಕೊಟ್ಟ ಹಾಗೆ ಆಗಲಿಲ್ಲವೆಂದೂ, ಅವನು ಬಹಳ ಸಲ ಎಣಿಸಿಕೊಂಡ ಸನ್ನಿವೇಶ ಕಾದಂಬರಿಯ ಮುಂದಿನ ಬೆಳವಣಿಗೆಗೆ ಮತ್ತು ಸುಬ್ಬಣ್ಣ ಮನೆ ಬಿಟ್ಟು ಹೋಗಲು ಕಾರಣವಾಯಿತು.

ಯಜಮಾನಿ ತನ್ನ ಸೊಸೆ ಮನೆ ಬಿಟ್ಟು ಹೋದಾಗ, ಎಲ್ಲ ನನ್ನ ಕರ್ಮ. ಆ ಸೊಸೆನಾ ಇಟ್ಟುಕೊಂಡು ಸಂಸಾರ ಮಾಡೋ ಪುಣ್ಯ ಇಲ್ಲ ಅಷ್ಟೆ ಅನ್ನುತ್ತಾ ಇದ್ದೆನಲ್ಲ! ಒಂದು ದಿನ ಒಂದು ಮಾತು ಬದಲು ಹೇಳಿದ್ದಿಲ್ಲ ನನ್ನ ಕಂದ ಎಲ್ಲಿ ಇದ್ದಾಳೋ? ಎಂದು ಬರುವಳೋ ಎಂಬ ಕಣ್ಣೀರು ಸುರಿಸಿದರು. ಸೊಸೆಯನ್ನು ಒಂದು ಸಲ ನೋಡಿಯೇನೆ ಎಂದು ಬಹಳ ಆಸೆ ಪಟ್ಟರು. ಈ ಸನ್ನಿವೇಶವನ್ನು ಕಾದಂಬರಿಕಾರರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಯಾಕೆಂದರೆ ಇಷ್ಟು ಕಷ್ಟ ಕೊಡುವ ಅತ್ತೆ ಅವಳು ಮನೆ ಬಿಟ್ಟು ಹೋದದ್ದು ಒಳ್ಳೆಯದಾಯಿತು ಎಂದು ಮನಸ್ಸಿನಲ್ಲಿ ಕೆಟ್ಟ ಅಭಿಪ್ರಾಯವನ್ನು ಯೋಚಿಸುವಂತಿರಬೇಕು. ಆದರೆ ಆಶ್ಚರ್ಯವೆಂಬುವಂತೆ ಇಲ್ಲಿ ಹಾಗಾಗುವುದಿಲ್ಲ ಬದಲಾಗಿ ಒಳ್ಳೇಯ ಅಭಿಪ್ರಾಯ ಮೂಡುವಂತೆ ಮಾಡಿರುವಲ್ಲಿ ಕಾದಂಬರಿಕಾರರ ಕೈ ಚಳಕವೆಂದೇ ಹೇಳಬಹುದು ಏಕೆಂದರೆ ಈ ಒಂದು ಸನ್ನಿವೇಶವನ್ನು ಬಹಳ ಸೂಕ್ಷ್ಮವಾಗಿ ನಿರ್ವಹಿಸಿದ್ದಾರೆ. ಈ ಒಂದು ಸನ್ನಿವೇಶ ಕಾದಂಬರಿಯಲ್ಲಿ ಒಂದು ಆಕರ್ಷಣೆಯ ಸನ್ನಿವೇಶವಾಗಿ ಮೂಡಿಬಂದಿದೆ ಕೆಟ್ಟವರಲ್ಲು ಒಳ್ಳೇಯ ಗುಣಗಳು ಇರುತ್ತವೆ ಎಂಬುದಕ್ಕೆ ಇಲ್ಲಿ ಬರುವ ಸುಬ್ಬಣ್ಣನ ತಾಯಿಯ ಈ ಮಾತುಗಳು ಉದಾಹರಣೆಗಯಾಗಿದೆ. ಹಾಗೇ ಸ್ತ್ರೀಬಿಗೆ ಗೌರವವಿರುವಂತಹವರು ಕಾದಂಬರಿಯಕಾರರು ಎಂದು ತಿಳಿಯುತ್ತದೆ.

ಕಲ್ಕತ್ತೆಯಲ್ಲಿ ಆತ 30 ವರ್ಷ ಬಾಳಿದುದು, ಕೌಟುಂಬಿಕ ದುರಂತಗಳಿಗೊಳಗಾಗಿ ವಿರಕ್ತನಾಗಿ ಹೊರಟಿದ್ದು, ಬರುವ ತನಕವೂ ಕೌಟುಂಬಿಕ ವಿಪ್ಲವದ ಕಥೆಯೇ ಹೊರತು ಕಲಾವಿದನ ತಪಸ್ಸಿನ ಕಥೆಯಲ್ಲ, ಸುಬ್ಬಣ್ಣ ಕಥೆಯಲ್ಲಿ ಉದ್ದಕ್ಕೂ ಮನೆಯಲ್ಲಿ ತಂದೆ ತಾಯಿ, ಹೆಂಡತಿ ಮಕ್ಕಳಿಗಾಗಿ

ಆತ ಬದುಕಿದ್ದನೇ ಹೊರತು ಸಂಗೀತಕ್ಕಾಗಿ ಬದುಕಲಿಲ್ಲ. ಹೆಚ್ಚೆಂದರೆ ಸಂಗೀತದಿಂದ ಬದುಕಿದನು. ಪ್ರಾವೀಣ್ಯದ ಮಟ್ಟಿಗೆ ಪಿಟೀಲು ಅವನ ದೇಹದ್ದೇ ಒಂದು ಅಂಗವಾಗಿತ್ತು. ಹಾಗೆ ಸಂಗೀತ ಅವನ ಬಾಳಿನ ಹಾಸುಹೊಕ್ಕಾದಂತೆ ಇಲ್ಲ! ತಂದೆಗೆ ರುಚಿಸಲಿಲ್ಲವೆಂದು ಅದೊಂದು ನೀಚಾನ್ನವೆಂದು ಆತ ವೇಶ್ಯೆಯರಿಗೆ ಸಂಗೀತ ಹೇಳಲು ಒಪ್ಪಲಿಲ್ಲ. ಹೆಂಡತಿಗೆ ಸುಖವಿಲ್ಲ. ಮಗನಿಗೆ ಮೊಸರಿಲ್ಲವೆಂದು ಆತ ಮನೆಬಿಟ್ಟು ದೇಶಾಂತರಕ್ಕೆ ಸಕುಟುಂಬ ಸಮೇತ ಹೋಗಿಬಿಟ್ಟ, ಪ್ರಾಪಂಚಿಕ ವ್ಯಥೆಯೇ ಅವನಿಗೆ ತಾಯಿಯಿಂದ ದೂರವಾಗಲು ಪ್ರೇರೇಪಿಸುತ್ತದೆ. ಅವನಿಗೆ ಸಂಗೀತ ಒಂದು ಯೋಗವಲ್ಲ ಬರೆ ವಿನಿಯೋಗ ಕಲಕತ್ತೆಯಲ್ಲಿ ಕೆಲವು ಪಾಠ ಹೇಳಿ ಕಛೇರಿಗಳನ್ನು ನಡೆಯಿಸಿ, ಮಡದಿ ಮಕ್ಕಳಿಗಾಗಿ ಸುಖವಾಗಿ ಮನೆ ಮಾಡಿಕೊಂಡು ಇರುವುದಕ್ಕೆ ಆತ ತನ್ನ ವಿದ್ಯೆಯನ್ನು "ಆರ್ಥಿಕವಾಗಿ" ಉಪಯೋಗಿಸಿಕೊಳ್ಳುತ್ತಾನೆ.

"ತನ್ನ ಪ್ರಾಣ ತಲ್ಲಣಿಸುತ್ತಿದೆ ಈ ರಾತ್ರಿಯಲ್ಲಿ, ಇನ್ನೂ ಇದಕ್ಕೆ ಉಪಶಮನ ಮಾಡಿಕೊಳ್ಳಬೇಕು" ಎಂದಾಗಲೂ ಉಪಶಮನ ಎನ್ನುವುದು ದೇವಸ್ಥಾನದಲ್ಲಿ ಕುಳಿತು ದೇವರ ಧ್ಯಾನ ಮಾಡುತ್ತಾ ಇಲ್ಲಿಯ ಯೋಚನೆಗಳನ್ನು ಮರೆಯುವುದಕ್ಕೆ ಶಕ್ತಿಕೊಡೆಂದು ಪ್ರಾರ್ಥಿಸುವುದು". ಆ ಶಕ್ತಿ ದೇವರು ಅವನಿಗೆ ಧಾರಾಳವಾಗಿ ಕೊಟ್ಟಿದ್ದುಂಟು, ಸಂಗೀತದ ಸಿದ್ದಿಯಲ್ಲಿ ರಾತ್ರಿಯಲ್ಲಿ ತನ್ನ ತಲ್ಲಣವನ್ನು ಸುಬ್ಬಣ್ಣ ಪಿಟೀಲು ವಾದನದಲ್ಲಿ ತಣಿಸಿಕೊಳ್ಳುವುದಿಲ್ಲವೆಂಬುದು ಇಲ್ಲಿ ಮಹತ್ವದ್ದು. ಕೊನಗೆ ನಾದಯೋಗಕ್ಕಾಗಿ ಸರ್ವಸ್ವಕ್ಕೆ ನೀರು ಬಿಡುವುದರ ಬದಲು ಆತ ಸಂಸಾರದ ಬಗೆಗೆ ಉಂಟಾದ ಅತಿ ವಿರಕ್ತಿಯ ಉಲ್ಬಣದಿಂದ ನಿರಹಂಕಾರಿಯಾಗಬೇಕೆಂಬ ಹಂಬಲದಿಂದ ಜಂಬವಾದರು ಏಕೆ? ಎಂಬ ಹಠದಿಂದ ಪಿಟೀಲನ್ನು ನೀರಿಗೆ ಬಿಡುತ್ತಾನೆ ಆತ ಸಂಗೀತದಿಂದ ಯೋಗಿ ಆದುದಲ್ಲವೆಂಬುದಕ್ಕೆ ಈ ಸಾಂಕೇತಿಕ ಕ್ರಿಯೆಯೇ ಸಾಕ್ಷಿ.

ಈ ಮಹಾತ್ಯಾಗ ತುಂಬ ಹೃದಯಸ್ಪರ್ಶಿ, ಲಲಿತೆ ತನ್ನ ಕೆನ್ನೆಗೆ ಹೊಡೆದ ಸುಬ್ಬಣ್ಣನ ಕೈಯನ್ನು ಮುತ್ತಿಟ್ಟ ಸನ್ನಿವೇಶದಷ್ಟೆ ಹೃದಯಂಗಮ. ಆದರೆ ಈ ವಾದ್ಯ ಸನ್ಯಾಸನಾದ ಯೋಗಿಯ ಲಕ್ಷಣವೇ? ಈ ಬಗೆಯ ತ್ಯಾಗದಿಂದ ಹಿಂದೆಂದೂ ಅಳದಷ್ಟು ಬಲವಾಗಿ ಅತ್ತುಬಿಟ್ಟ.

ಸುಬ್ಬಣ್ಣ ಪಿಟೀಲನ್ನು ತೇಲಿಬಿಟ್ಟ ಮರುದಿನ ಮುಂಜಾನೆ ದೈವ ಸಂಕೇತವೆಂಬಂತೆ ಈ ಪಿಟೀಲು ಅವನ ತಲೆಯ ಬಳಿಗೆ ಬಂದು ಕೂತಿರುತ್ತದೆ.ಶಿಷ್ಯನಾಗಲು ಬಂದು ಅವನ ಬೆನ್ನಿಗೆ ಬಿದ್ದ ವೆಂಕಟರಮಣ ಅದನ್ನು ಎತ್ತಿತಂದು ಅಲ್ಲಿ ಇಟ್ಟಿರುತ್ತಾನೆ. ಕಾದಂಬರಿಕಾರರು ತಮ್ಮ ಕಲಾತ್ಮಕತೆಗೆ ಒಪ್ಪುವಂತೆ ಹೆಚ್ಚು ಕೌಶಲದಿಂದ ಕೋಮಲತೆಯಿಂದ ಈ ಸನ್ನಿವೇಶವನ್ನು ಚಿತ್ರಿಸಿದ್ದಾರೆ. ಈ ಹೃದಯ ಸ್ಪರ್ಶಿಯಾದ ಮಾರ್ಪಾಟು ಕಾದಂಬರಿಕಾರರ ಅದ್ಭುತ ಭಾವಕ್ಕೆ ಕನ್ನಡಿ ಹಿಡಿದಂತೆ ಮೂಡಿ ಬಂದಿದೆ.

ಸುಬ್ಬಣ್ಣ ಸಂಗೀತ ಸಾಧನೆಯಲ್ಲಿ ಎಷ್ಟು ಅವ್ಯವಸ್ಥಿತನೋ ಆದರಿಂದ ಪಡೆಯುವ ಸಾಂತ್ವನದ ಬಗೆಗೂ ಆತ ಅಷ್ಟೆ ಉದಾಸೀನ ಮನಸ್ಸು ಕಲಕಿ, ಕದಡಿ ಉದ್ವಿಗ್ನವಾದಾಗ ರೋಸಿ ಹೋದಾಗ ಆತ ಸಂಗೀತದಲ್ಲಿ ಸಾಂತ್ವನ ಕಂಡ ಪ್ರಸಂತ ಕಡಿಮೆ. ಮುಂಬಯಿಯ ಸಹುಕಾರನ ಮನೆಯಲ್ಲಿ, ವೆಂಕಟರಮಣ ಭೇಡಿಸಿದಾಗ ದೇವರ ಸಂಗೀತ ಸೇವೆಯಲ್ಲಿ ಮಕ್ಕಳಿಗೆ ಕಲಿಸುವಾಗ ಒಮ್ಮೆ ಲಹರಿ ಬಂದು ಆತ ದಿವ್ಯವಾಗಿ ಪಿಟೀಲು ಬಾರಿಸಿದ ಪ್ರಸಂಗಗಳು ಬಂದಿವೆ. ಅದೊಂದು ಬಗೆಯ ಆವೇಶ ಪ್ರದರ್ಶನದ ಮೋಹ ಅಥವಾ ಮನಸ್ಸಿನ ಹಿಗ್ಗು ನಿಜವಾಗಿ ಆತನ ಕಲಕತ್ತೆ ಜೀವನ ಮುಗಿದ ಮೇಲೆಯೇ ಅವನ ಸಂಗೀತ ಮಯವೆನ್ನಬಹುದಾದ ಬದುಕು ಆರಂಭವಾಗುತ್ತದೆ.

ವೆಂಕಟರಮಣನಿಗೆ ಸಂಗೀತ ಹೇಳಿಕೊಡುವುದಕ್ಕೆ ಒಪ್ಪಿಗೆ ಸೂಚಿಸುವ ಸನ್ನಿವೇಶವು ಕಾದಂಬರಿಯಲ್ಲಿ ಮುಖ್ಯವಾದುದಾಗಿದೆ. ವೆಂಕಟರಮಣ ಸಂಗೀತ ಪಾಠಕಲಿಸಲು ಕೇಳಿಕೊಂಡಾಗ ಸುಬ್ಬಣ್ಣ ನೀಲಸಾನಿಯನ್ನು ಜ್ಞಾಪಿಸಿಕೊಳ್ಳುತ್ತಾನೆ. ವೆಂಕಟರಮಣ ಆಕೆಯಂತೆ ನಟುವನ್ನು ಅಲ್ಲದೆ ಇಂಥಾ ಸಂಬಂಧಗಳಿಂದ ಹೃದಯದಲ್ಲಿ ಸ್ನೇಹ ಮೊಳೆಯುವುದೆಂದು" 3. ಮಾರ್ಮಿಕವಾದ ಒಂದು ಮಾತನ್ನ ಸೂಕ್ಷ್ಮವಾಗಿ ಕಾದಂಬರಿಕಾರರು ನಿರೂಪಿಸಿದ್ದಾರೆ. ಜೊತೆಗೆ ಉಪಕಾರ ಭಾವನೆಗಿಂತ ನೀಲಾಳ ಋಣ ಈ ರೀತಿ ಪರ್ಯಾಯವಾಗಿ ತೀರಿಸಬೇಕೆಂಬ ಬುದ್ಧಿ ಸುಬ್ಬಣ್ಣನಲ್ಲಿ ಬಲವಾಗುತ್ತದೆ ಒಂದಾದ ಮೇಲೊಂದರಂತೆ ಬಂದ ಶೋಕ ಪರಂಪರೆಯಲ್ಲಿ ನಿಂತ ಸುಬ್ಬಣ್ಣನಿಗೆ ಕತ್ತಲೆಯಲ್ಲಿ ಒಂಟಿಯಾಗಿ ಸಿಕ್ಕಿಕೊಂಡ ಮಕ್ಕಳ ಹೋಲಿಕೆಯನ್ನು ಈ ಸನ್ನೀವೇಶಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾರೆ. ಇದು ಮಾನವನ ಅಸಂಗತ ಜೀವನದಲ್ಲಯ ಅಸಹಾಯಕತೆಗೆ ಅತ್ಯಂತ ಸಮರ್ಪಕವಾದ ನಿದರ್ಶನವಾಗಿದೆ.

ಆತ ಎದುರಿಸಬೇಕಾಗಿ ಬಂದ ದು:ಖಗಳ ರಾಶಿಗೆ ಯಾವ ಸಾಮಂಜಸ್ಯವೂ ಇಲ್ಲ ಅವು ಒದಗಿದೆ ಎಂಬುದೇ ಅವುಗಳ ಸಮರ್ಥನೆ ಅವುಗಳ ಹೊಡೆತಕ್ಕೆ ಜರ್ಜರನಾದ ಸುಬ್ಬಣ್ಣ ಸಂಸಾರದಲ್ಲಿಯೂ ಸಂನ್ಯಾಸಿಯಾಗಿ ಬಾಳಲು ಪಣತೊಟ್ಟ ವಿಶ್ವಜಿತ್ ಯಜ್ಞವನ್ನು ಮುಗಿಸಿ ಕಂಕಣಬಿಚ್ಚಿದ ನಮ್ಮ ಸಂಸ್ಕೃತಿಯಲ್ಲಿ ಹೀಗೆ "ಯದಹಕೀವ ವೀರಜೀತ್, ತದಹಕೀವ ಪ್ರವೃಜೀತ್" ಎಂಬ ವಿರಕ್ತಿಯ ಪರಿವ್ರಾಜಕನ ದಾರಿಯೊಂದೇ ಭವದ ಬೇಸರದಿಂದ ಬಿಡುಗಡೆ ಪಡೆಯಲಿಕ್ಕೆ ಆರತಿ: ಜನ ಸಂದದಿ' ಉಂಟಾದವನು ಇಂದಿನಿಂತೆ ಹಿಪ್ಪೆಯೇ ಎಂದಿನಂತೆ ಹುಚ್ಚನೋ ಆಗಬೇಕಾದ ಬಲವಂತವಿಲ್ಲ ಸುಬ್ಬಣ್ಣ ಸಂಸ್ಕೃತಿಯ ತಾವರೆಯ ಕೊಳದಲ್ಲಿ ಬಿದ್ದು ಈಜಿ ಜಯಿಸಿದವನಾದರು ಪೂರ್ತಿ ಬಿಡುಗಡೆ ಅವನಿಗೆ ಸಾಧ್ಯವಾಗಲಿಲ್ಲ. ಮುಂಬೈ ಸಾಹುಕಾರನ ಮನೆಯಿಂದ ಪಾರಾಗಿ ಬಂದರೂ ತೊರೆಯ ಪುರದಲ್ಲಿ ಸುಬೇದಾರನ ಮಗಳ ಸಂಗೀತ ಪಾಠದ ನಿಮಿತ್ತ ಮತ್ತೆ ತನ್ನನ್ನು ಕೆಲ ಮಟ್ಟಿಗೆ ಸಂಸಾರ ವ್ಯಾವೋಹದಲ್ಲಿ ಸಿಲುಕಿಕೊಂಡಂತೆ ಮೂಡಿ ಬಂದಿರುವ ಸನ್ನಿವೇಶ ಹೃದಯಾಂಗಮವಾಗಿದೆ.

ಹೀಗೆ ಸೇರಿಯೂ ಸೇರದ ಹಾಗೆ ಇರಬೇಕೆಂಬುದೇ ಸುಬ್ಬಣ್ಣನ ಸಾಧನೆಯ ಉದ್ದೇಶ "ಕಟ್ಟಿಕೊಂಡವರಿಗೆ ಬಿಟ್ಟ ದು:ಖ ತಪ್ಪಿಲ್ಲ ಬಿಟ್ಟೇ ಇರುವವನಿಗೆ ದು:ಖವೇ ಇಲ್ಲ. ಇದನ್ನು ಮೊದಲು ಕೇಳಿ ತಿಳಿದಿದ್ದನು ಈಗ ಅನುಭವಿಸಿ ತಿಳಿದನು".

ಒಟ್ಟಾರೇ ಕಾದಂಬರಿಯಲ್ಲಿನ ಹಲವಾರು ಸನ್ನಿವೇಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಕೊನೆಯದಾಗಿ ಕಥೆಯ ಅಂತಿಮ ಭಾಗದಲ್ಲಿ ಸುಬ್ಬಣ್ಣ ಆಧ್ಯಾತ್ಮಿಕತೆಗೆ ಸಂಬಂಧಿಸಿದ ಒಂದು ಪ್ರಸಂಗವಿದೆ ಅದು ದ್ವೈತ-ಅದ್ವೈತಗಳ ಗೊಂದಲಗಳು, ಹರಿಹೆಚ್ಚೋ ಅಥವಾ ಹರಹಚ್ಚೋ ಎಂಬ ಪ್ರಶ್ನೆಗಳನ್ನು ಎತ್ತಿ ಅದಕ್ಕೆ ಪಾತ್ರದ ಮುಖೇನವೇ ಸಮಾಧಾನವನ್ನು ಹೇಳಿಸುತ್ತಾರೆ ಪಾತ್ರವಾದರೋ, ಹರಿಯು ಹೆಚ್ಚೋ ಶಿವನ ಹೆಚ್ಚೋ ಎಂಬ ಪ್ರಶ್ನೆಗೆ ಸಂಗೀತದಿಂದಲೇ ಉತ್ತರಿಸುತ್ತದೆ. ಎರಡು ರಾಗಗಳನ್ನು ಬರಿಸಿ ಬೈರವಿ ಹೆಚ್ಚೋ, ಶಂಕರಾಭರಣ ಹೆಚ್ಚೋ? ಎಂದು ಪ್ರತಿ ಪ್ರಶ್ನೆಯನು ಹಾಕುತ್ತಾರೆ ಸುಬ್ಬಣ್ಣ.

ಪಾತ್ರ ಚಿತ್ರಣ

ಪಾತ್ರಗಳು ಕಾದಂಬರಿಯ ಜೀವಸತ್ವ ಲೇಖಕನ ವಿಚಾರ ಧಾರೆಗಳು ಪಾತ್ರಗಳ ಮೂಲಕ ಅಭಿವ್ಯಕ್ತಿಗೆಗೊಳ್ಳುತ್ತದೆ ಆತನ ಮನೋಧರ್ಮ ಮತ್ತು ಉದ್ದೇಶಗಳನ್ನು ಪಾತ್ರಗಳು ಎತ್ತಿಹಿಡಿಯುತ್ತವೆ.

"ಸುಬ್ಬಣ್ಣ" ಕೇವಲ 86 ಪುಟಗಳುಳ್ಳ ಚಿಕ್ಕ ಕಾದಂಬರಿಯಾದರೂ ಹೆಚ್ಚು ಅರ್ಥ ವ್ಯಾಪ್ತಿಯಿಂದ ಕೂಡಿದೆ ಇಲ್ಲಿ ಬರುವ ಪಾತ್ರಗಳು ಹಲವಾರು ಆದರೆ ಒಂದೊಂದು ಪಾತ್ರಗಳೂ ಮಾನವನ ವ್ಯಕ್ತಿತ್ವದ ಹಲವಾರು ಮಜಲುಗಳನ್ನು ಹೊಂದಿದೆ ಈ ಕಾದಂಬರಿಯಲ್ಲಿ ಕಂಡು ಬರುವ ಮುಖ್ಯ ಪಾತ್ರವೆಂದರೆ "ಸುಬ್ಬಣ್ಣ" ಅಂದ ಮಾತ್ರಕ್ಕೆ ಕಾದಂಬರಿಯಲ್ಲಿ ಈ ಪಾತ್ರವೇ ಸರ್ವಸ್ವವಲ್ಲ ಈ ಪಾತ್ರದ ಹಿಂದೆ ಮುಂದೆ ಹಲವಾರು ಪಾತ್ರಗಳು ಪೂರಕವಾಗಿ ಕಂಡು ಬರುತ್ತವೆ.

ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳು ಹಾಗೂ ಪುರುಷ ಪಾತ್ರಗಳು ಎರಡು ಕಂಡು ಬರುತ್ತವೆ. ಇಲ್ಲಿ ಕಂಡು ಬರುವ ಸ್ತ್ರೀ ಪಾತ್ರಗಳೆಂದರೆ ಯಜಮಾನಿ, ಲಲಿತಮ್ಮ, ಮಿಠಾಯಿ ಅಂಗಡಿಯವಳು, ನೀಲಸಾನಿ ಮುಖ್ಯವಾದವುಗಳಾದರೆ. ಪುರುಷ ಪಾತ್ರಗಳು ನಾರಾಯಣ ಶಾಸ್ತ್ರಿಗಳು, ವೆಂಕಟರಮಣ ಹಾಗೂ ಸುಬ್ಬಣ್ಣ.

ಸುಬ್ಬಣ್ಣ:- ಈ ಕಥೆಯ ನಾಯಕ ಸುಬ್ಬಣ್ಣ. ಇವನ ಸುತ್ತ ಉಳಿದ ಪಾತ್ರಗಳು ಸುತ್ತುತ್ತವೆ. ಸುಬ್ಬಣ್ಣ ತಂದೆಯಂತೆ ಸಂಸ್ಕೃತ ಪಂಡಿತನಾಗದೆ, ಸಂಗೀತವನ್ನು ಕಲಿತು ಅದರಲ್ಲೇ ಸಾಧನೆ ಮಾಡಬೇಕೆಂಬ ಆಸೆ ಹೊತ್ತವನು. ಅದಕ್ಕಾಗಿ ಅಭ್ಯಸಿಸಲು ವೈಶ್ಯೆಯರ ಆಶ್ರಯ ಬಯಸುವುದು ಎಳೆತನದ ಮುಗ್ಧ ಮನೋಭಾವಗಳನ್ನು ಎತ್ತಿ ಹಿಡಿಯುತ್ತದೆ. ಬಲವಂತದ ಮದುವೆಯಾಗಿ, ಹೆಂಡತಿಯೊಡನೆ ವಿರಸ ಬೆಳೆಸಿ, ಆಕೆಯನ್ನು ನಿರ್ಲಕ್ಷಿಸಿ, ವೈಶ್ಯೆ ನೀಲಾ ಸಾನಿಯಲ್ಲಿಯೇ ಹೆಚ್ಚು ಕಾಲ ಕಳೆಯುವ ಸಂದರ್ಭಗಳು ಯೌವ್ವನದ ಅಪಕ್ವತೆಯನ್ನು ತೋರಿಸುತ್ತದೆ. ಬಹಳ ಮುಂಗೋಪದ ಸ್ವಭಾವವಿರುವ ಇವನನ್ನು ಒಲಿಸಿಕೊಳ್ಳುವುದೇ ಲಲಿತೆಯ ಪ್ರಥಮ ಸಾಧನೆ ಇಷ್ಟಾಗಿ ಪಾತ್ರವು ಹಲವಾರು ಹಂತಗಳಲ್ಲಿ ಪಕ್ವವಾಗುತ್ತ ಹೋಗುತ್ತವೆ. ಅವನು ಅನುಭವಿಸುವ ಎಲ್ಲಾ ಕಷ್ಟ ಕೋಟಲೆಗಳ ಸಂಪ್ರದಾಯ ಕರ್ತೃವೇ ಹೇಳುವಂತೆ" ಕಠಿಣವಾದ ಶಿಲೆಯ ಮಧ್ಯೆ ಸೇರಿರುವ ಸ್ವರ್ಣರೇನುಗಳನ್ನು ತೆಗೆಯಬೇಕಾದರೆ ಕಲ್ಲನ್ನು ಪುಡಿಮಾಡಿ ಚಿನ್ನವನ್ನು ಬೇರೆ ಮಾಡುವ ಕೆಲಸ, ತಾನು ಎಷ್ಟೇ

ಸಂಸಾರದ ಮೇಲೆ ಜಯವನ್ನು ಸಾಧಿಸಿದ್ದೇನೆ ಎಂದು ತೋರಿದರೂ, ಸುಬ್ಬಣ್ಣ ಸಾಹುಕಾರರ ಬಂಡಿಯ ಹಿಂದೆ, ತಮ್ಮ ಶಿಷ್ಯೆಯ ಮೇಲಿನ ವ್ಯಾಮೋಹದಿಂದ ಓಡಿ ಬರುವ ಪ್ರಸಂಗ, ಆ ಪಾತ್ರದಲ್ಲಿರುವ ಕೆಲ ಪ್ರಮಾಣದ ಲೌಕಿಕ ಬಂಧನವನ್ನು ತೋರಿಸುತ್ತದೆ. ಕಥೆಯಲ್ಲಿ ಪಾತ್ರ ತಾನು ಬಯಸಿದ ಮುಕ್ತಿಯನ್ನು ಹೊಂದುತ್ತದೆ.

ಸುಬ್ಬಣ್ಣನಿಗೆ ಕಷ್ಟದ ಮೇಲೆ ಕಷ್ಟ ಸಂಕಟದ ಮೇಲೆ ಸಂಕಟ ಎಲ್ಲೋ ಸ್ವಲ್ಪ ಸುಖ ಕೂಡ ಅವನ ಮೇಲೆ ಎರಗಿ ಬಂತು ಒಂದಾದ ಮೇಲೊಂದು ಭ್ರಮೆ ಕಳೆದು ಮನಸ್ಸಿಗೆ ಯಾವ ತೀರ್ಪವೂ ಇಲ್ಲದೆ ಅವನ ಬದುಕು ಸಂಸ್ಕೃತವಾಯಿತು ಈ ಕಥೆಯನ್ನು ಓದುವಾಗ ನಮ್ಮನ್ನು ಸೆರೆ ಹಿಡಿದು ತಡೆಯಲಾರದಷ್ಟು ಭಾವವೋತ್ಕರ್ಷವುಂಟು ಮಾಡಿ ಕಣ್ಣೀರು ಸುರಿಸಿ ನಿರ್ಮಲವಾದ ಆನಂದವನ್ನು ಕೊಡುವುದು ಈ ಆತ್ಮೋಧಾರದ ಚಿತ್ರಣ.

ಒಟ್ಟಾರೆ ಸುಬ್ಬಣ್ಣನಿಗೆ ತಿಳುವಳಿಕೆ ಎಂಬುದು ಸಂಗೀತ ಸಾಧನೆಯಿಂದಲೇ ಬಂದಿತೆಂದರೆ ಅದು ಅವನಿಗೂ, ಸಂಗೀತಕ್ಕೂ, ಕೂಡಿಯೇ ಅಪಚಾರವಾದೀತು. ಅದು ಅವನ ಬದುಕಿನ ಅನುಭವದ ಮಿಶ್ರಪಾಕ ಬಹುರ್ಮುಖಿಯಾದ ಬದುಕಿನಲ್ಲಿ ಅಂತರ್ಮುಖಿಯಾದ ಬಾಳು ಕಲಿತುಕೊಂಡ ಪಾಠ ಅನ್ಯಕೇಂದ್ರಿತ ವಿಶ್ವದಲ್ಲಿ ಆತ್ಮಕೇಂದ್ರದ ವ್ಯಕ್ತಿಯ ಜೀವನ ಶಿಲ್ಪಕ್ಕೆ ಸುಬ್ಬಣ್ಣ ಒಂದು ಮನಕರಗುವ ಸಂಕೇತ.

<u>**ಲಲಿತ:–**</u> ಇಡೀ ಕಥೆಯಲ್ಲಿ ಅತ್ಯಂತ ಆದರ್ಶ ಪ್ರಾಯವಾದ, ಪಾತ್ರ ಹಾಗೂ ವಿಭಿನ್ನವಾದ ಪಾತ್ರ ಲಲಿತೆಯದು, ಈ ಒಂದು ಪಾತ್ರ ಮೆರವೆ ಆದರ್ಶ ಶ್ಲಾಘನೀಯವಾದದ್ದು. ಈ ಕೃತಿ ದೊಡ್ಡ ಕಾದಂಬರಿಯಲ್ಲವಾದ್ದರಿಂದ ಇದರಲ್ಲಿ ಬರುವ ಇತರ ಪಾತ್ರಗಳು ಮೈತುಂಬಿ ಬರಲು ಅವಕಾಶವಿಲ್ಲ ಸುಬ್ಬಣ್ಣನ ಹೆಂಡತಿಯಾದ ಲಲಿತಮ್ಮನನ್ನು ನಾವು ಕಣ್ಣಿನಿಂದ ನೋಡುತ್ತೇವೆ. ಎನ್ನುವುದಕ್ಕಿಂತ ಮನಗಾಣುತ್ತವೆ. ಎಂದರೆ ಸರಿಹೋಗುತ್ತದೆ. ಅವಳಿಗೆ ಸುಬ್ಬಣ್ಣನೇ ದೇವರು ಅವನೇ ಪ್ರಪಂಚ ಅವನು ಎದುರಿಗಿದ್ದರೆ ಅವನು ಸುಖವಾಗಿದ್ದರೆ ಅವಳಿಗಿನ್ನೇನೂ ಬೇಕಾಗಿಲ್ಲ ಅಥವಾ ಇನ್ನೇನಾದರೂ ಬೇಕಾದರೂ ಅದರ ವಿಷಯದಲ್ಲಿ ಅಷ್ಟು ಖಂಡಿತವಾದ ಆಸೆಯಲ್ಲ ಇಂಥ ನಿರ್ಲಿಪ್ತತೆ ಅನೇಕರಿಗೆ ಸಾಧ್ಯ ಪುರಾಣದ ಸಾವಿತ್ರಿ ಸೀತೆಯರು ಈ ರೀತಿಯ ಮಹಿಳೆಯರು ಇವರ ಈ ನಿರ್ಲಿಪ್ತತೆ

ಯಾವ ಋಷಿಯ ತಪಸ್ಸಿಗಿಂತಲೂ ಕಡಿಮೆಯಾದುದಲ್ಲ. ಇವರು ಆದರಿಂದಲೇ ಜೀವನದ ಸಮಸ್ತ ಸಂಸ್ಕಾರಗಳನ್ನು ಸಾಧಿಸಿ ಬಿಡುವರು. ಲಲಿತೆ ಈ ಮೊದಲೇ ಬದುಕಿನಲ್ಲಿ ಒಂದು ದೊಡ್ಡ ಅಂತಸ್ತನ್ನು ಸೇರಿಸಿ ಬಿಟ್ಟಿದ್ದಳು, ತನಗೆ ಕ್ರೂರಿಯಾದ ಅತ್ತೆಯ ಮೇಲೂ ಅವಳಿಗೆ ರೋಷವಿಲ್ಲ. ತಂದೆ ತಾಯಿಯರು ತೀರಿ ಹೋದಂತೆ ಕನಸಾದದ್ದು ತೀರಿಕೊಂಡವರ ಮಗನಿಗಲ್ಲ ಸೊಸೆಗೆ. ಗಂಡನೊಬ್ಬನನ್ನೇ ನಂಬಿ ಬಂದ ಗೃಹಿಣಿ ಬದುಕಿನ ನಂಜುಗಳನ್ನೆಲ್ಲಾ ಉಂಡು, ಗಂಡನ ನೆರಳಾಗಿ ಬದುಕುವ ಅರ್ಪಣಾ ಮನೋಭಾವದ ಮಡದಿ ಲಲಿತೆ ಇದ್ದಕ್ಕಿದ್ದಂತೆ ಮನೆಯಿಂದ ಕಲ್ಕತ್ತೆಗೆ ಗಂಡ ಎಳೆದುಕೊಂಡು ಹೋದದ್ದಕ್ಕಾಗಲಿ ವ್ಯಥೆ ಪಡೆದೆ, ನನ್ನ ಬದುಕು ಇರುವುದು ಗಂಡನಿಗೆಂದು ಬದುಕಿದ ರೀತಿ ಸುಬ್ಬಣ್ಣನನ್ನು ಮಾಗಿಸಿತು. ಏಕಾಕಿಯಾಗಿ ತನ್ನನ್ನು ಹಿಂಬಾಲಿಸಿದ ಮಗನನ್ನು ಕಳೆದುಕೊಂಡಾಗಲೂ, ಮದುವೆಗೆ ಸಿದ್ದಳಾಗುತ್ತಿದ್ದ ಮಗಳು ಹೊಳೆಯಲ್ಲಿ ಮುಳುಗಿದಾಗಲೂ ತನ್ನ ಅಳುವನ್ನೆಲ್ಲಾ ನುಂಗಿ ಗಂಡನೊಂದಿಗೆ ಬಾಳಿದ್ದು, ಮುತ್ತೈದೆಯಾಗಿಯೇ ಸಾಯಬೇಕೆಂದು ವ್ರತಮಾಡಿ ವಿಷಮಶೀತ ಜ್ವರಕ್ಕೆ ತುತ್ತಾದದ್ದು ಇವು ಸುಬ್ಬಣ್ಣನ ವ್ಯಕ್ತಿತ್ವವನ್ನು ಕಡೆದು ನೋವಿನ ಉಳಿಯೇಟುಗಳು, ಮುಗ್ಧವಾಗಿದ್ದ ಕಲಾಸಕ್ತ ಜೀವ ನೋವಿನ ಮೇಲೆ ನೋವನ್ನು ಕಂಡರೂ, ಆ ನೋವುಗಳನ್ನೆಲ್ಲಾ ನುಂಗಿಕೊಡದೇ ತನ್ನನ್ನು ಜೋಪಾನ ಮಾಡಲು ಯತ್ನಿಸಿದ ತ್ಯಾಗದ ಮೂರ್ತಿ ಲಲಿತೆ.

ಒಟ್ಟಾರೆ ಲಲಿತೆಯ ಪಾತ್ರದ ಮೇರುಗಿರಿ ಇರುವುದು ಆಕೆಯ ಗುಣದಲ್ಲಿಯೇ ಹೊರತು ಶಾರೀರಿಕ ಸೊಬಗಿನಲ್ಲಿಲ್ಲ.

ನೀಲಾಸಾನಿ:–

ಇಲ್ಲಿ ಬರುವ ಮುಖ್ಯವಾದ ಪಾತ್ರಗಳಲ್ಲಿ ನೀಲಾಸಾನಿಯ ಪಾತ್ರ ಒಂದಾಗಿದೆ. ಈ ಪಾತ್ರ ಕಥಾನಾಯಕನ ಪಾತ್ರಕ್ಕೆ ಪೂರಕವಾಗಿ ಬರುವಂತದ್ದು. ನೀಲ ಸುಬ್ಬಣ್ಣ ಸಂಬಂಧ ಅನ್ಯೋನ್ಯವಾದ ಋಣಾನುಬಂಧ ಈ ಕಾದಂಬರಿಯಲ್ಲಿ ಅತ್ಯಂತ ರಮಣೀಯವಾದ ಸಂಗತಿ, ನೀಲ ಸುಬ್ಬಣ್ಣನನ್ನು ದೇವರೆಂದೇ ಭಾವಿಸಿದ್ದಳು. ತೀರ ಹತ್ತಿರ ಸುಳಿದಾಡುತಿದ್ದರೂ ದೂರದಲ್ಲಿಯೇ ನಿಂತು ನಡೆದು ಅವನನ್ನು ಆರಾಧಿಸುತಿದ್ದಳು ಅವನು ಕೇಳಿದಾಗ ಹಣ ಕೊಡುವಳು. ಸುಬ್ಬಣ್ಣ ಮನೆಗೆ ಬಂದಾಗ ನಗೆಮೊಗದಿಂದ ಮಾತಾಡಿಸಿ ಮಡಿಯಲ್ಲಿಯೇ ಮಾಡಿದ್ದ ತಿಂಡಿ ತಿನಿಸುಗಳನ್ನು ಅವನಿಗೆ ತಿನ್ನಲು

ತೆಗೆದಿರಿಸಿ ಸರ್ವವಿಧವಾಗಿಯೂ ಅನುಕೂಲಳಾಗಿ ನಡೆಯುತ್ತಿದ್ದಳು ಅವನನ್ನು ಅವಳಿಂದ ನಿರ್ದಿಷ್ಟ ಅಂತರಕ್ಕೆ ಇಟ್ಟದ್ದು ಎರಡು ಒಂದು ಅವಳ ಶಾಲೀನತೆ, ಸೌಜನ್ಯ, ಇನ್ನೊಂದು ಏನೂ ದೋಷ ಪರಿಯದೆ ತಾಯಿ ಎದೆ ಬಳಿ ಮುಖವನ್ನಿಟ್ಟು ಸ್ತನ್ಯಕ್ಕಾಗಿ ಅರಸುವ ಮಗುವಿನಂತೆ ಜೀವನದ ವಿಚಾರವನ್ನು ತಿಳಿಯದೇ ಇಲ್ಲಿ ಏನಿದೆಯೇ ಎಂದು ತಿಳಿಯಲು ಪ್ರಯತ್ನ ಮಾಡುತ್ತಿರುವ ಅವನ ಪೂರ್ವ ಯೌವನದ ಒಂದು ಸರಳತೆ, ಮುಗ್ದತೆ ಸುಬ್ಬಣ್ಣ ನೇ ಕೃಷ್ಣನೆಂದು ಕಂಡುಕೊಂಡ ಗೋಪಿಕಾ ಸ್ತ್ರೀ ಆಕೆ.

ಇತರ ಪಾತ್ರಗಳಲ್ಲಿ ಸುಬ್ಬಣ್ಣನ ತಾಯಿಯ ಹೆಸರನ್ನು ಮುಖ್ಯವಾಗಿ ಹೇಳಬೇಕು ಮಾತು ಕಠಿಣವಾಗಿದ್ದರೂ, ನಡತೆ ಕಠಿಣವಾಗಿದ್ದರೂ, ಅವರು ಮನಸ್ಸಿನಲ್ಲಿ ಕಠಿಣರಾದವರಲ್ಲವೆಂದು ತೋರುತ್ತದೆ. ಎಂದು ಮಾಸ್ತಿಯವರು ಆಕೆಯ ಪರವಾಗಿ ಒಂದು ಮಾತು ಹೇಳಿದ್ದಾರೆ, ಕೊನೆ ಕೊನೆಯಲ್ಲಿ ಆಕೆ ಅಂಥ ಸೊಸೆಯೊಡನೆ ಸಂಸಾರ ಮಾಡುವ ಭಾಗ್ಯ ತನಗಿಲ್ಲವಲ್ಲ ಎಂದು ಪಶ್ಚಾತಾಪದ ಮಾತನ್ನಾಡುತ್ತಾಳೆ, ಆದರು ಅವಳ ಹೃದಯದಲ್ಲಿ ಮಾರ್ದವವೇನಾದರೂ ಇದ್ದಿದ್ದರೆ ಅದನ್ನು ಯಾರಿಗೂ ಕಾಣದಂತೆ ಬಹಳ ಯಶಸ್ವಿಯಾಗಿ ಬಚ್ಚಿಟ್ಟಿದ್ದಾಳೆ ಎನ್ನಬೇಕು. "ಆ ಕಾಲದಲ್ಲಿ ಸಂಸಾರದ ವಾತಾವರಣ ಹೇಗಿತ್ತು, ಎಂಬುದನ್ನು ನೆನೆದರೆ ಆಕೆಯ ನಡತೆಯನ್ನು ಅರ್ಥ ಮಾಡಿಕೊಳ್ಳಬಹುದು; ಅರ್ಥವಾದ ಮೇಲೆ ಸಹಾನುಭೂತಿಯನ್ನು ತೋರಿಸಬಹುದು,"[1] ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ ಇಲ್ಲಿ ಬರುವ ಈ ಸುಬ್ಬಣ್ಣ ನಮ್ಮೆಲ್ಲರಲ್ಲಿವನು, ನಮ್ಮ ಸಂಸಾರದವನು ನಮ್ಮವನು, ಇದು ಕೇವಲ ಸುಬ್ಬಣ್ಣನೊಬ್ಬನ ವಿಚಾರದಲ್ಲಷ್ಟೆ ಅಲ್ಲ ಈ ಕಥೆಯ ಪ್ರತಿಯೊಂದು ಪಾತ್ರದ ವಿಚಾರದಲ್ಲೂ ಸತ್ಯ. ತನ್ನ ಮಗನು ಕೂಡ ತನ್ನಂತೆ ವಿದ್ವಾಂಸನಾಗಬೇಕೆಂಬ ಆಸೆ ಹೊತ್ತ ಆತನ ತಂದೆ, ನಾರಾಯಣ ಶಾಸ್ತ್ರಿಗಳು, ಮಗನ ಮೇಲಿನ ಮೋಹದಿಂದ ಸೊಸೆಯನ್ನು ದೂರವಿರಿಸಿ, ಕೊನೆಗೆ ಮಗ, ಸೊಸೆ, ಮೊಮ್ಮಗ ಮೂವರನ್ನು ಕಳೆದುಕೊಂಡು ವ್ಯಥೆ ಪಡುವ ಆತನ ತಾಯಿ, ಆದರ್ಶನ ಪತ್ನಿಯಾಗಿ, ತನ್ನ ಸಹಿಷ್ಣುತೆಯಿಂದ ಸಾತ್ವಿಕ ಮನೋಭಾವದಿಂದ ತನ್ನ ಪತಿಯನ್ನು ಉದ್ದರಿಸಿದ ಸುಬ್ಬಣ್ಣನ

---

1) ಮಾಸ್ತಿಯವರ ಕಥೆಗಳ ಪುಟ : 74

ಎ.ಎನ್.ಮೂರ್ತಿರಾವ್

ಪತ್ನಿ ಲಲಿತ, ತನ್ನ ಪತ್ನಿ, ಮಕ್ಕಳ ಸಾವಿನ ನಂತರ, ಸಂಸಾರದಿಂದ– ದೂರವಿರ ಬಯಸಿದರೂ, ಮುಂಬಯಿಯ ಸಾಹುಕಾರ, ತೊರವೇಪುರದ ವೈಶ್ಯಯ ಹುಡುಗ, ತಹಶೀಲ್ದಾರರ ಕುಟುಂಬದ ರೂಪದಲ್ಲಿ ಪದೇ ಪದೇ ಎದುರಾಗುವ ಬಂಧನಗಳು, ಪ್ರತಿಯೊಂದು ನಮ್ಮ ದಿನ ನಿತ್ಯದವೇ, ಇವರ ಜೀವನದ ಸಂಗತಿಗಳು, ಘಟನೆಗಳು ಅಭೂತ ಪೂರ್ವವಾದದ್ದಲ್ಲ, ಇದರಲ್ಲಿ ಪವಾಡಗಳಿಲ್ಲ. ಎಲ್ಲರ ಮನೆಯ ಸಂಗತಿಗಳು ಇಲ್ಲಿ ಪಾತ್ರಗಳ ಮೇಲೆ ಬೀರುವ ಪರಿಣಾಮಗಳೇ ಅವುಗಳನ್ನು ವಿಶೇಷವಾಗಿಸುವುದು.

ಸಂಧ್ಯಾರಾಗ

ಸನ್ನಿವೇಶ:-

ಈ ಕಾದಂಬರಿಯು ಒಬ್ಬ ಸಂಗೀತ ಕಲಾವಿದನ ಕುರಿತಾದ ಕಾದಂಬರಿ ಇಲ್ಲಿ ಕಂಡು ಬರುವ ಕೆಲವು ಸನ್ನಿವೇಶಗಳನ್ನು ನಾವು ನೋಡಬಹುದಾಗಿದೆ. ಕಾದಂಬರಿಯ ನಾಯಕ ಲಕ್ಷ್ಮಣ ರಾಮ-ಲಕ್ಷ್ಮಣ ಈ ಇಬ್ಬರು ಅಣ್ಣ ತಮ್ಮಂದಿರ ಜೀವನದ ವೈದೃಶ್ಯವೇ ಕಾದಂಬರಿಯ ರಚನಾತ್ಮಕ ತತ್ವ ಲಕ್ಷ್ಮಣ ಓದಿನಲ್ಲಿ ಹಿಂದು ಆದರೆ ಸಂಗೀತದಲ್ಲಿ ಮುಂದು.

ರಾಮಚಂದ್ರ ಎಷ್ಟು ಸಂಗಪ್ರಿಯನೋ, ಲಕ್ಷ್ಮಣ ಅಷ್ಟೇ ಏಕಾಂತ ಪ್ರಿಯನಾಗಿದ್ದ. ಲಕ್ಷ್ಮಣ ತನ್ನಷ್ಟಕ್ಕೆ ತಾನೇ ಹಾಡಿಕೊಂಡು ಊರ ಹೊರಗಿನ ಬಂಡೆಯ ಮೇಲೆ ಕುಳಿತು ಸಂಜೆಯಾಗಸದ ಬಣ್ಣ ಬಣ್ಣಗಳನ್ನು ನೋಡುತ್ತಾ ಮೈ ಮರೆಯುವನು.

ಶಾಲೆಯಲ್ಲಿ ಲಕ್ಷ್ಮಣನಿಗೆ ಸ್ನೇಹಿತರು ದೊರೆಯಲೇ ಇಲ್ಲ ಅವನ ಸ್ನೇಹಿತರೆಂದರೆ ಶಾಮಣ್ಣನವರು. ಶಾಮಣ್ಣನವರು ಒಂದು ತಂಬೂರಿತಯನ್ನು ಲಕ್ಷ್ಮಣನಿಗೆದಾನ ಮಾಡಿದರು. ಆ ತಂಬೂರಿಯನ್ನು ನೋಡಿದರೆ ಸಾಕು ಲಕ್ಷ್ಮಣನ ಮನಸ್ಸು, ಮೈ ಝುಂ ಎನ್ನುತ್ತಿತ್ತು. ಅದನ್ನು ಶಾಮಣ್ಣನವರು ಶೃತಿ ಮಾಡಿ ಮಿಡಿಯಿತೆಂದರೆ ಲಕ್ಷ್ಮಣನ ನರಗಳನ್ನು ಮಿಡಿದಂತಾಗುತ್ತಿತ್ತು. ಅಷ್ಟರಮಮಟ್ಟಿಗೆ ಸಂಗೀತದಲ್ಲಿ ಬೆರೆತುಹೋಗಿದ್ದ.

ಲಕ್ಷ್ಮಣ ಒಮ್ಮೆ ಚನ್ನಪ್ಪನ ಮಾತುಕೇಳಿ ಅವನ ಮಾತು, ಧ್ವನಿ, ಹಾಡುಗಳು ಅವನ ಕಿವಿಯಲ್ಲಿ, ನರನರಗಳಲ್ಲಿ ಚಿತ್ತ ದಲ್ಲಿ ಝೇಂಕರಿಸುತ್ತಿದ್ದವು. ಮಗಾ, ಚೆಂದಾಕಿ ಶಾರದವನ್ನೋರ ಸೇವೆ ಮಾಡು. ನಿನ್ನ ವಾಣೀಲಿ ತಾಯಿ ಬೀಜಾಕ್ಷರ ಬರದವ್ಳೆ.. ನನು ಸಂಗೀತ ಕಲಿಯೋಕೆ ಒಂದು ಜೀವಾನ ತೇದಿದ್ದೀನಿ. ಅದರ ಓನಾಮ ಕೂಡ ನಂಗೆ ಗೊತ್ತಾಗಿಲ್ಲ. ನೀನು ಕಲಿಯೋಕೆ ಉಟ್ಟಿಲ್ಲ ಅಪ್ಪಯ್ಯಾ-ಕಲ್ಸೋಕೆ-ನನ್ನಂತಾ ಮಂಗಗಳು ಮನುಸರ್ನ ಮಾಡೋಕೆ ಉಟ್ಟಿರೋ ಗುರು. ನೀನು ಎಂದಾದರೂ ದೊಡ್ಡೋನಾದಾಗ ಮುಳುಬಾಗಿಲ ಚೆನ್ನಪ್ಪ ಹೇಳಿದ ಮಾತು ಇದೊಂತ ಜ್ಞಾಪಿಸ್ಕೋ ಎಂದು ಹೇಳಿದ ಪ್ರತಿಯೊಂದು ಮಾತು ಮತ್ತೇ ಮತ್ತೆ ಲಕ್ಷ್ಮಣನ ಮನಸ್ಸಿನಲ್ಲಿ ಅಚ್ಚೊತ್ತಿದ್ದವು ಚೆನ್ನಪ್ಪನ ಪೂರ್ವಿಕಲ್ಯಾಣಿಯನ್ನು

ಹುಚ್ಚೇ ಹಿಡಿದುಬಿಟ್ಟಿತು. ನಾನು ಅವರ ಹಾಗೆ ಪೂರ್ವಿಕಲ್ಯಾಣಿಯನ್ನು ಹಾಡಬಲ್ಲೆನಾದರೆ ಎಂದುಕೊಂಡ. ಈ ಸನ್ನಿವೇಶ ಲಕ್ಷ್ಮಣನ ಸಾಧನೆಗೆ ಸ್ಫೂರ್ತಿ ಎಂದು ಹೇಳಬಹುದಾಗಿದೆ.

ರಾಯರಂತಹ ಒಡೆಯರು ಮೀನಾಕ್ಷಮ್ಮನಂಥ ಒಡತಿಯರು ಇರುವ ಸಮಾಜದಲ್ಲಿ ಸಮತಾವದ , ರಸನಾಸಭೆಗಳು ತಲೆಯೆತ್ತುವ ಸಂಭವವೇ ಇಲ್ಲ. ರಾಯರ ಕುಟುಂಬವು ಹೊಸಹಳ್ಳಿಯನ್ನು ಬಿಟ್ಟು ಹೋಗುತ್ತಿರುವಾಗ "ಹಳ್ಳಿಯ ರೈತರು ಬಂದು ಗೋಳಿಟ್ಟಿತ್ತು. ಮೀನಾಕ್ಷಮ್ಮನವರಂತೂ ಯಾರಿಗೆ ಎಷ್ಟೇ ಹೇಳಿದರು ತೀರದು, ಊರಿನ ಹೆಣ್ಣು ಮಕ್ಕಳು ಇಂದು ತಮ್ಮ ಲಕ್ಷ್ಮಿ ಹೊರಟು ಹೋಗುತ್ತಾಳೆಂದು ಭಾವಿಸಿದರು, ರಾಯರು ಆಳುಗಳನ್ನು ವಿಶ್ವಾಸದಿಂದ ಕಾಪಾಡಿಕೊಂಡು ಬಂದಿದ್ದರು. ಮೀನಾಕ್ಷಮ್ಮನವರಿಗೆ ಹೊಲೆಯ ರೈತರು ಮಕ್ಕಳು ಮರಿ ಅಡ್ಡ ನಮಸ್ಕಾರ ಹಾಕಿ "ಬಾಯಿತುಂಬ ಅರಸು ನಮ್ಮವ್ವ ! ಎಂದರು.ಬೇಗ ನಮ್ಮೂರಿಗೆ ಬಂದುಬಿಡು ಮೀನವ್ವ, ನಿನ್ನ ಬಡ ಮಕ್ಕಳ್ನ ತಬ್ಲಿ ಮಾಡಿ ಓಗ್ಬಿಡ್ಬೇಡ" ಎಂದು ಹೇಳುವ ಮಾತುಗಳನ್ನು ಕೇಳಿದರೆ ಸಹೃದಯರ ಕಣ್ಣುಗಳಿಂದ ನೀರು ಸುರಿಯದಿರದು ಒಡೆಯ ಒಕ್ಕಲರ ಸಂಬಂಧ ಒಂದೆರಡು ದೃಶ್ಯಗಳನ್ನು ನಾವು ಈ ಕಾದಂಬರಿಯಲ್ಲಿ ಕಾಣುತ್ತೇವೆ,

ಮೀನಾಕ್ಷಮ್ಮ ಸೊಸೆಯರಿಬ್ಬರನ್ನೂ ಹಳ್ಳಿಗೆ ಕರೆದುಕೊಂಡು ಹೋದಾಗ ಅಲ್ಲಿ ನಡೆಯುವ ಘಟನೆ ಮುಖ್ಯ, ಪದ್ಮ ಹಳ್ಳಿಯ ಊಟವನ್ನು ಹೀಯಾಳಿಸಿದಾಗ ಮೀನಾಕ್ಷಮ್ಮ ರಾಗಿ,ಅಕ್ಕಿ, ಗೋದಿ ಇವು ಮನುಷ್ಯರ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲಮ್ಮಾ ವಜ್ರದ ಓಲೆ, ಕೆಂಪಿನ ಓಲೆಗಳೂ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲ, ಮನಸ್ಸು ಚೆನ್ನಾಗಿರಬೇಕು ಅಂತಃಕರಣವಿರಬೇಕು. ಎಂದು ಹೇಳುವ ಸನ್ನಿವೇಶವು ಮನುಷ್ಯನ ವ್ಯಕ್ತಿತ್ವವನ್ನು ಧ್ವನಿಸುತ್ತದೆ.

ರಾಮಚಂದ್ರನ ಕೈಗೆ ಅಧಿಕಾರ ಬಂದದ್ದು ಮಿಣಚಂಭಟ್ಟನ ಪ್ರಾಣಕ್ಕೆ ಬಂತು ಎನ್ನುವಂತೆ ಆಗುತ್ತಾ ಬಂತು ಹಾಲು ತೆಗೆದುಕೊಳ್ಳುವುದು ಕಡಿಮೆಯಾಯಿತು, ಪ್ರತಿದಿನವು ರಾತ್ರಿ ಲಕ್ಷ್ಮಣನಿಗೂ ವೆಂಕಟೇಶನಿಗೂ ಹಾಲು ಕೊಡುವ ಪದ್ಧತಿ ಇತ್ತು, ಅದು ನಿಂತು ಹೋಯಿತು ತರಕಾರಿ ಒಪ್ಪೊತ್ತೇ ಸಾಕೆಂದು ಯಜಮಾನರು ಆಜ್ಞೆ ಮಾಡಿಬಿಟ್ಟರು, ರಾತ್ರಿ 10 ಗಂಟೆಯಾಗುತ್ತಲೆ ಮೇನ್ ಸ್ವಿಚ್ ಆರಿಸಿ ಬಿಡುವುದು ಆರಂಭವಾಯಿತು. ರಾತ್ರಿ ಲಹರಿ ಬಂದಾಗ ಲಕ್ಷ್ಮಣ ಅಭ್ಯಾಸ ಮಾಡಿಕೊಳ್ಳುವ ಪದ್ದತಿಯಿತ್ತು, ಗೋಪಾಲ ಸಾಮಾನ್ಯವಾಗಿ ಬರವಣಿಗೆಯನ್ನೆಲ್ಲಾ ರಾತ್ರಿಯೇ ಮಾಡುತ್ತಿದ್ದನು, ಇವರಿಬ್ಬರು

ಕಂದೀಲುಗಳನ್ನು ತಂದಿಟ್ಟು ಕೊಂಡು ತಮ್ಮ ಅಭ್ಯಾಸಗಳನ್ನು ಮುಂದೆ ಸಾಗಿಸಬೇಕಾಯಿತು,ಈ ಸನ್ನಿವೇಶವು ರಾಮಚಂದ್ರನ ಯಜಮಾನನ ದರ್ಪದ ಅಧಿಕಾರ ಬಂದರೆ ಹೇಗೆ ವರ್ತಿಸುತ್ತಾನೆ ಎಂಬುದಕ್ಕೆ ರಾಮಚಂದ್ರ ಉದಾಹರಣೆಯಾಗಿ ನಿಂತಿದ್ದಾನೆ.

ರಾಮಚಂದ್ರನಿಗೆ ದೊಡ್ಡ ಕೆಲಸವಾದ ಮೇಲೆ ಜಯ ಮತ್ತು ಲಕ್ಷ್ಮಣನಿಗೆ ತುಂಬ ಕಷ್ಟವಾಯಿತು ಹೆಂಡತಿಯ ದುಡಿಮೆಯನ್ನು ಕಂಡು ಲಕ್ಷ್ಮಣ ಬಃಳ ಮರುಗಿದನು, ಏನೂ ಮಾತಾಡುವ ಹಾಗಿರಲಿಲ್ಲ , ಜಯ ಜಾರಿಬಿದ್ದು ಪ್ರಾಣವನ್ನು ಕಳೆದುಕೊಂಡಾಗ ಲಕ್ಷ್ಮಣ ಸ್ಥಿತಿಯನ್ನು ಹೇಳತೀರದು ಕುಳಿತಲ್ಲಿ ಕೂರ ನಿಂತಲ್ಲಿ ನಿಲ್ಲ ಒಂದು ರೀತಿ ಹುಚ್ಚನಂತಾಗಿಬಿಟ್ಟ, ಆ ಭಾವನ ಪರವಶೆಯಲ್ಲಿಯೇ ಆತ ಮನೆಬಿಟ್ಟು ಹೋಗುತ್ತಾನೆ, ರಾಮಚಂದ್ರ "ಸದ್ಯ ಶನಿ ತೊಲಗಿತು" ಎಂದು ಕೊಳ್ಳುತ್ತಾನೆ. ಈ ಒಂದು ಸನ್ನಿವೇಶವು ಕಾದಂಬರಿಯಲ್ಲಿ ಮಖ್ಯವಾದದ್ದಾಗಿದೆ ಏಕೆಂದರೆ ಕಥೆಯು ತಿರುವನ್ನ ಪಡೆದುಕೊಳ್ಳುವುದಕ್ಕೆ ಈ ಒಂದು ಘಟನೆ ಪೂರಕವಾಗಿದೆ.

ರಾಮಚಂದ್ರನಿಗೆ ಕೆಲಸವಾದ ಮೇಲೆ ಪದ್ಮನಲ್ಲಿ ಅನೇಕ ಬದಲಾವಣೆಗಳು ತಲೆದೋರಲಾರಂಭಿಸಿದವು ಒಬ್ಬ ಮೇಡಮ್ಮನವರನ್ನು ಗೊತ್ತು ಮಾಡಿ ಹೆಂಡತಿಗೆ ಇಂಗ್ಲೀಷ್ ಕಲಿಸಲಾರಂಭಿಸಿದ, ಅವಳ ತಲೆಯ ಬೈತಲೆ ಪಕ್ಕಕ್ಕೆ ಜಾರಿತು ಕಾಲಿಗೆ ಹಿಮ್ಮಡಿ ಎತ್ತರದ ಮೇಜುಗಳು ಬಂದಿದ್ದವು ಅವುಗಳನ್ನು ಹಾಕಿಕೊಂಡು ನಡೆಯಲಾರದೆ ಒಂದೆರಡು ಸಲ ಕಾಲು ಉರುಳಿದ್ದುಂಟು ಈ ಸನ್ನಿವೇಶದಲ್ಲಿ ಕಾದಂಬರಿಕಾರರು ಸಂಪ್ರದಾಯದ ಮೇಲೆ ಆದ ಆಧುನಿಕ ಜೀವನದ ಪ್ರಭಾವವನ್ನು ಹೇಳಿದ್ದಾರೆ.

ಲಕ್ಷ್ಮಣ ರೈಲು ಸಿಕ್ಕಿದಲ್ಲಿ ಹತ್ತುವನು. ಮನಸ್ಸು ಬಂದಾಗ ಇಳಿಯುವನು. ಎಲ್ಲಿಗೆ ಹೊಗಬೇಕೇಂದು ನಿಶ್ಚಯವಿಲ್ಲ. ತಂಬೂರಿಯನ್ನು ಶ್ರುತಿಮಾಡಿ ನಾಲ್ಕು ಮೀಟುಹಾಕಿದ ಕಣ್ಣಿನಲ್ಲಿ ಧಾರೆಯಾಗಿ ನೀರು ಸುರಿಯಲಾರಂಭಿಸಿತು. ತಂಬೂರಿಯ ತಂತಿಗಳನ್ನು ಒಂದೊಂದಾಗಿ ಕಿತ್ತು ಅಲ್ಲಿಂದ ಹೊರಟುಹೋದ. ಇಂದಿದ್ದ ಊರು ನಾಳೆಯಿಲ್ಲ ನಾಳೆಯಿದ್ದದ್ದು ನಾಳಿದ್ದಿಲ್ಲ ನಿಂತಲ್ಲಿನಿಲ್ಲ ಕೂತಲ್ಲಿ ಕೂರ ತನ್ನನ್ನೆ ತಾನು ಹುಚ್ಚನೆಂದು ಕರೆದುಕೊಳ್ಳುತ್ತಿದ್ದ. ಈ ಹುಚ್ಚಲೆದಾಟವು ಒಬ್ಬ ಡಾಕ್ಟರ್ ಬಳಿಯೇ ಸೇರಿಸಿತು. ಡಾಕ್ಟರ್ ಕೂಡ ಸಂಗೀತದಲ್ಲಿ ಆಸಕ್ತಿಯುಳ್ಳವನಾಗಿ

ಲಕ್ಷ್ಮಣನ ಸಂಗೀತ ಸಾಧನೆಗೆ ಸಹಾಯ ಮಾಡುತ್ತಾನೆ. ಇವರು ಮಾಡಿದ ಉಪಕಾರವನ್ನು ನೋಡಿ ಲಕ್ಷ್ಮಣ ತನ್ನ ಅಣ್ಣ–ಅತ್ತಿಗೆಯ ನೆನಪು ಮಾಡಿಕೊಳ್ಳುತ್ತಾನೆ. ಲಕ್ಷ್ಮಣನನು ಡಾಕ್ಟರ್ ಸಹಾಯದಿಂದ ತಂಜಾವೂರಿನ ಕೃಷ್ಣಯ್ಯರ ಬಳಿಯಲ್ಲಿ ಬಂದು ದಕ್ಷಿಣಾದಿ ಸಂಗೀತವನ್ನು ಕಲಿಯುತ್ತಾನೆ. ಅನಂತರ ಭಾಗವತರಲ್ಲಿ ಲಕ್ಷ್ಮಣನಿಂದ ಅವನು ಕಲಿತ ಹಾಡನ್ನು ಕೇಳಿ "ಲಕ್ಷ್ಮಣ, ನೀನು ನನ್ನ ಶಿಷ್ಯನಾಗಿ ಬಂದದ್ದು ನನ್ನ ಭಾಗ್ಯ" ಎನ್ನುತ್ತಾರೆ. ನಿನಗೆ ಪೂರ್ವಿ ದತ್ತಿ ಕೊಟ್ಟಿದ್ದೇನೆ. ನಾನು ಆಸೆಪಟ್ಟಕೊಂಡಿದ ಹಾಗೆ ಎಂದಾದರು ನೀನು ಹಾಡಿಬಿಡು. ಅಂದು ನಾನು ಋಣವಿಮುಕ್ತನಾಗುತ್ತೇನೆ ನಿನ್ನಿಂದ ನಾನು ನಿರೀಕ್ಷಿಸುವ ಗುರುದಕ್ಷಿಣೆ ಅದೇ ಕಣಪ್ಪ" ಎಂದು ಹೇಳುವ ಈ ಸನ್ನೀವೇಶವು ರೋಚಕವಾದುದ್ದಾಗಿದೆ.

ಗುರುಗಳ ಬಳಿ ವಿದ್ಯ ಕಲಿತು ಲಕ್ಷ್ಮಣ ತಿರುಗಿ ಬೆಂಗಳೂರಿಗೆ ಬಂದಾಗ ವೆಂಕಟೇಶ ಮತ್ತು ಗೋಪಾಲ ಹಾಗೂ ಊರಿನವರಿಗೆಲ್ಲ ಸೇರಿ ಸಂಗೀತ ಕಛೇರಿಯನ್ನು ಏರ್ಪಡಿಸುತ್ತಾರೆ

ಲಕ್ಷ್ಮಣ ಸಂಗೀತ ಹಾಡಲು ಆರಂಭಿಸಿ.................ಆನಂದ ಬೈರವಿಯು ಮುಗಿಯುವುದೇ ತಡ ನೇರವಾಗಿ ಪೂರ್ವಿಯ ರಾಗವನ್ನೆತ್ತಿಕೊಂಡನು................ರಾಗ ಮೊದಲನೆಯ ಕಾಲದಿಂದ ಎರಡನೆಯ ಕಾಲವನ್ನು ಮುಟ್ಟಿತ್ತು. ಲಕ್ಷ್ಮಣ ಕಣ್ಣುಗಳಲ್ಲಿ ಧಾರೆ ಧಾರೆಯಾಗಿ ಅಶ್ರುಪ್ರವಾಹ.

ರಾಗ ಎರಡನೆಯ ಕಾಲದಿಂದ ಮೂರನೆಯ ಕಾಲಕ್ಕೆ ಹೋಯಿತು. ಲಕ್ಷ್ಮಣನ ಕಣ್ಣೀರು ಧಾರೆ ನಿಂತಿತ್ತು. ರಾಗೊಚಿತವಾದ ವೇಗವು ಅವನ ಹಾಡಿಕೆಯಲ್ಲಿ ಕಾಣ ಬರುತ್ತಿದ್ದರೂ ಮನಸ್ಸು ಶಾಂತವಾಗಿತ್ತು. ರಾಗ ಮುಗಿಯುವ ಹೊತ್ತಿಗೆ ತಂಬೂರಿಯ ತಾರಕ ಷಡ್ಜದ ತಂತಿ ಹರಿಯಿತು. ಅದರ ಠೇಂಕಾರವು ಸಭಾ ಸದರನ್ನು ಎಚ್ಚರಗೊಳಿಸಿತು. ತಂಬೂರಿ ಲಕ್ಷ್ಮಣನ ಕೈಯಿಂದ ಜಾರಿ ನೆಲಕ್ಕುರುಳಿತು. ಲಕ್ಷ್ಮಣನೂ ಆದರೆ ಜೊತೆಯಲ್ಲಿಯೇ ನೆಲಕ್ಕುರಳಿದನು.

"ಜಯಾ"................................

ಎಂಬ ಎರಡೇ ಅಕ್ಷರ ಎಲ್ಲರ ಕಿವಿಯನ್ನು ಮುಟ್ಟಿತು. ಅಂದೇ ಕಛೇರಿ ಕೊನೆಗೊಂಡಿತ್ತು. ನಾಯಕನು ಸಂಧ್ಯಾರಾಗದಲ್ಲಿ ತನ್ನ ಪ್ರಣತಿಯನ್ನು ತೇಲಿಬಿಟ್ಟಿದ್ದನು..........................ತನ್ನ ಜೀವನದ ಸಂಧ್ಯಾರಾಗವನ್ನು ಹೇಳಿ ಮುಗಿಸಿದನು.

ಇದು ಸಂಗೀತಗಾರ ಲಕ್ಷ್ಮಣನ ಜೀವನದ ಕೊನೆಯ ರುದ್ರ ಮನೋಹರ ಘಳಿಗೆ ಕಲಾವಿದನ ಹೃದಯವು ಎಷ್ಟು ಮೃದು, ಮನಸ್ಸು ಎಷ್ಟು ತೀವ್ರಗ್ರಾಹಿ ಮತ್ತು ಅವನ ಆವೇಶಗಳು ಎಂಥ ಸ್ಫೋಟಕ ಶಕ್ತಿಯುಳ್ಳವುಗಳು ಎಂಬುದನ್ನು ಮಾರ್ಮಿಕವಾಗಿ ಸಂಧ್ಯಾರಾಗದಲ್ಲಿ ಚಿತ್ರಿಸಿದ್ದಾರೆ.

ಪಾತ್ರಚಿತ್ರಣ :-

ಕಲಾವಿದರ ಬಾಳನ್ನು ಚಿತ್ರಿಸುವ ಕಾದಂಬರಿಗಳಲ್ಲಿ "ಸಂಧ್ಯಾರಾಗ ಚೊಕ್ಕ ಚಿನ್ನದಂಥ ಕೃತಿ. ಕೃಷ್ಣರಾಯರ ಕಾದಂಬರಿಗಳಲ್ಲಿ ಇದು ಅವರ ಅತ್ಯುತ್ತಮ ಕೃತಿಯೆಂದು ಬಹುಜನ ವಿಮರ್ಶಕರ ಅಭಿಪ್ರಾಯ "ಸಂಧ್ಯಾರಾಗ' ದಲ್ಲಿ ಚಿತ್ರಿತವಾದ ಪುರುಷ ಪಾತ್ರಗಳು, ಹುಟ್ಟು ಕಲಾವಿದ ಲಕ್ಷ್ಮಣ, ಶ್ರೀನಿವಾಸರಾಯರು, ಭಾರತದ ರಾಮಣ್ಣನವರು ಶ್ರೀನಿವಾಸರಾಯರ ಆಪ್ತಮಿತ್ರರಾದ ಭೀಮರಾಯ, ಸುಂದರರಾಯ, ಮತ್ತು ಗೋಪಾಲಿ ಮುಳಬಾಗಿಲ ಚನ್ನಪ್ಪ, ಮಹಾಭಾಗವಂತರು, ಕೃಷ್ಣ ಅಯ್ಯರ್ ಮೊದಲಾದವರು.

ಲಕ್ಷ್ಮಣ:- ಕಾದಂಬರಿಯ ನಾಯಕ ಲಕ್ಷ್ಮಣನ ಬಾಲ್ಯದ ಜೀವನ ಪೋಷಣೆಗೆ ಕಾದಂಬರಿಯ 9 ಅಧ್ಯಾಯಗಳು ಮೀಸಲಾಗಿದೆ. ಲಕ್ಷ್ಮಣನ ಸಂಗೀತ ಶಿಕ್ಷಣಕ್ಕೆ ಆವರಣ ಸೂಕ್ತವಾಗಿ ಒಂದು ಕತೆಯ ಬೆಳವಣಿಗೆಯನ್ನು ಸವೇಗವಾಗಿ ಮುಂದುವರಿಸಲು ಅನುಕೂಲವಾಗಿವೆ ಲಕ್ಷ್ಮಣ ನಮ್ಮ ಮುಂದೆಯೇ ಬಾಲ್ಯವನ್ನು ಕಳೆಯುತ್ತಾನೆ. ಲಕ್ಷ್ಮಣಿಗೆ ಸಿಕ್ಕ ವಾತಾವರಣ ಅವನ ಸಂಗೀತ ಕಲೆಯನ್ನು ಸಂವರ್ಧಿಸಲು ಅನುಕೂಲವಾಗುತ್ತದೆ. ಮಮತೆಯ ತಾಯಿ ಮೀನಾಕ್ಷಮ್ಮನ ಉತ್ತೇಜನ ತಂದೆ ಶ್ರೀನಿವಾಸರಾಯರ ಪ್ರತಿಕೂಲವಿಲ್ಲದ ನೆರವು ಭಾರದ ಶಾಮಣ್ಣನವರಿಂದ ಆರಂಭದಿಂದಲೇ ಸಂಗೀತ ಕಲೆಯ ಅಂಕುರಾಪರಣ ನಂತರ ಮುಳಬಾಗಿಲ ಚೆನ್ನಪ್ಪನವರಿಂದ ಪ್ರಥಮತ: ಪೂರ್ವಿಕಲ್ಯಾಣಿ

ರಾಗ ಆಲಿಸಿದ್ದು, ಅದರಂತೆ ತಾನೂ ಹಾಡಬೇಕೆಂದು ಸಂಕಲ್ಪಿಸಿ ಬೆಂಗಳೂರಿಗೆ ಬಂದಾಗ ಸಂಗೀತ ವಿದ್ವಾನ್ ಅನಂತಾಚಾರ್ಯರಿಂದ ಸಂಗೀತ ಶಿಕ್ಷಣದ ಬುನಾದಿ ಸಂಗೀತದ ಹಸಿವು ಹಿಂಗದೆ ಮಹಾಭಾಗವಂತರು ಪೂರ್ವಿಕೃಷ್ಣ ಅಯ್ಯರ್ ರವರಿಂದ ಕ್ರಮವತ್ತಾದ ಸಂಗೀತ ಪಾಠ ಗುರುಕುಲವಾಸ ಮುಗಿಸುವಾಗ ಗುರುಗಳ ಬಾಯಿಂದಲೇ "ನಿನ್ನ ವಿದ್ಯೆ ದೈವಿಕವಾದದ್ದು. ಅದನ್ನು ಸತ್ಪಾತ್ರದಲ್ಲಿ ಧಾರೆಯರೆ, ನಿನ್ನ ಬೆಳಕಿನಿಂದ ಹಲವು ಹೃದಯಗಳು ಬೆಳಗುತ್ತವೆ ಬೆಳಗಾಸು ಲೋಕವನ್ನು ಅಂಧಕಾರ ಕೂಪದಿಂದ ನಿವೃತ್ತಿ ಮಾಡು" 8 ಎಂದೆನಿಸಿಕೊಂಡು ಮೈಸೂರು ಬೆಂಗಳೂರು ಸಂಗೀತ ಕಛೇರಿಗಳಲ್ಲಿ ತನ್ನ ದೈವಿಕ ಕಲೆಯನ್ನು ಪ್ರದರ್ಶಿಸುವುದು ಎಲ್ಲವೂ ವಿಚಿತ್ರ ಸನ್ನಿವೇಶ, ಹಿನ್ನೆಲೆ, ಸಹಜತೆಗಳಿಂದ ಕೂಡಿ ಓದುಗ ಲಕ್ಷ್ಮಣನ ಕಲಾಜೀವನದ ಕೊನೆಯಲ್ಲಿ ಕಾದಂಬರಿಕಾರರು ತೋರುವ ಮುಕ್ತಾಯದ ಸನ್ನಿವೇಶ ರುದ್ರಭೀಕರವಾದದ್ದು "ಸಂಧ್ಯಾರಾಗ ಕಲೆ ಕಲಾವಿದರ ಅನ್ಯೋನ್ಯ ಐಕ್ಯದಿಂದ ಉದ್ಭವಿಸುವ ದೈವಿಕಗಾನ ಈ ಸಂದರ್ಭದ್ದು ಈ ಸಮಾಜ್ವಲ ಗಳಿಗೆಯಲ್ಲಿ ಕಲಾವಿದ ಕಣ್ಮರೆಯಾಗಿ ಲೋಕಕ್ಕೆ ಕೊಡುಗೆಯಾಗಿ ಉಳಿದದ್ದು ಲಕ್ಷ್ಮಣರಾಯನ "ಪೂರ್ವಿ ಕಲ್ಯಾಣಿರಾಗ" ಇಂಥ ಒಂದು ದಿವ್ಯಗಳಿಗೆಯಲ್ಲಿ ಲೋಕಕಲಾವಿದನ ದಿವ್ಯ ಸಂಗೀತವನ್ನು ಆಲಿಸುತ್ತಿರುವಾಗ ಕಲಾವಿದನ ಅಂತರ್ಗತದಲ್ಲಾಗುವ ಹೋರಾಟ ಅಷ್ಟೆ ದು:ಖತಪ್ತವಾದದ್ದು. ಕನ್ನಡ ಸಾಹಿತ್ಯದಲ್ಲೇ ಲಕ್ಷ್ಮಣರಾಯನ ಪಾತ್ರ ಅಮರವಾದದ್ದು ಅದಕ್ಕೆ ಕಾಲ, ದೇಶ, ಮತಗಳ ಮಡಿ-ಮೈಲಿಗೆಯ ಲೇಪವಿಲ್ಲ. ಅ.ನ.ಕೃಷ್ಣರಾಯರ ಪುರುಷ ಪಾತ್ರ ಸೃಷ್ಟಿಯಲ್ಲಿ ಲಕ್ಷ್ಮಣನ ಪಾತ್ರ ಪ್ರಾತಿನಿಧಿಕವಾದದ್ದು.

ರಾಮಚಂದ್ರ:-

ಈ ಕಾದಂಬರಿಯಲ್ಲಿ ರಾಮುವಿನ ಪಾತ್ರ ಕ್ರೌರ್ಯ ಆರಂಭದಿಂದ ಕೊನೆಯವರೆಗೆ ಏಕಪ್ರಕಾರವಾಗಿ ಬೆಳೆದು ಬಂದು ಆ ಪಾತ್ರ ಬರೇ ಸ್ವಾರ್ಥದ ಮುದ್ದೆಯೆಂಬಂತೆ ಕಾದಂಬರಿಕಾರರು ಚಿತ್ರಿಸುವುದು ಸ್ವಲ್ಪ ಮಟ್ಟಿಗೆ ಅವಾಸ್ತವವೆನಿಸುವುದು. ಯಾಕೆಂದರೆ ಎಂಥ ದುಷ್ಟ ಮನುಷ್ಯನಲ್ಲಿಯೂ ಕೆಲವೊಂದು ಸದ್ಗುಣಗಳಾದರೂ ಇರುವುದು ಸಹಜ ಆದರೆ ರಾಮುವಿನ ಪಾತ್ರದಲ್ಲಿ ಕೊನೆಯ ತನಕವೂ ಹೃದಯ ವಂತಿಕೆಯ ಲವಲೇಶವೂ ಕಾಣುವುದಿಲ್ಲ.

ಭಾರತದ ಶಾಮಣ್ಣನವರ ಪಾತ್ರ ಕಾದಂಬರಿಕಾರರ ಪ್ರತಿನಿಧಿಯಿದ್ದಂತೆ ಚಿತ್ರಿತವಾಗದೆ

ಕಾದಂಬರಿಯ ಉತ್ತರಾರ್ಧದಲ್ಲಿ ಬರುವ ಮಹಾಭಾಗವಂತರು, ಕೃಷ್ಣ ಅಯ್ಯಂಗಾರ್ ರವರು ತಮ್ಮ ಘನತೆ ಗಾಂಭಿರ್ಯ ಮತ್ತು ಸತ್‌ಶೀಲಗಳಿಂದ ಮನಸನ್ನು ಸೆರೆ ಹಿಡಿಯುತ್ತಾರೆ.

ಆ ಮುಖ್ಯ ಪಾತ್ರಗಳಲ್ಲಿ ಕೆಲವೊಂದು ಪಾತ್ರಗಳು ಕೆಲವೊಂದು ಗುಣಗಳ ಪ್ರತಿನಿಧಿಗಳಾಗಿರುವುದರಿಂದ ಅವರ ಬಾಳಿನಲ್ಲಿಯ ಜಟಿಲತೆ ಸಂಕೀರ್ಣತೆಗಳು ಅರಿವಾಗುವುದಿಲ್ಲ. ಅವು ಚಿಕ್ಕಪುಟ್ಟ ಪಾತ್ರಗಳಾಗಿರುವುದರಿಂದ ಅದು ಅಷ್ಟೊಂದು ಕೊರತೆಯಾದಂತೆ ಅನಿಸುವುದಿಲ್ಲ.

ಒಟ್ಟಿನಲ್ಲಿ 'ಸಂಧ್ಯಾರಾಗ' ದಲ್ಲಿನ ಪಾತ್ರ ಸೃಷ್ಟಿಯಲ್ಲಿ ಕಾದಂಬರಿಕಾರರು ಸಂಪೂರ್ಣವಾಗಿ ಯಶಸ್ವಿಯಾಗಿದ್ದಾರೆ.

ಇನ್ನೂ ಸ್ತ್ರೀ ಪಾತ್ರಗಳಾದ ಮೀನಾಕ್ಷಮ್ಮ, ಸಾವಿತ್ರಮ್ಮನ ಪಾತ್ರಗಳು ಭಾರತೀಯ ಸಂಸ್ಕೃತಿಯ ಬಾಳಿನಲ್ಲಿ ದೇವಿಪ್ಯ ಮಾನವಾಗಿ ಬೆಳಗುವಂತೆ ಚಿತ್ರಿಸಿದ್ದಾರೆ. ಈ ಪಾತ್ರಗಳು ಬರಿಯ ಆದರ್ಶತ್ವ ಸೃಷ್ಟಿಯಲ್ಲ ಎನ್ನುವುದು ಗಮನಾರ್ಹ.

ಮೀನಾಕ್ಷಮ್ಮ ಮತ್ತು ಸಾವಿತ್ರಮ್ಮ

ಪಿತೃ ಋಣದ ಹಿಂದೂ ಆದರ್ಶವು ಅಸ್ತಿತ್ವದಲ್ಲಿರುವವರೆಗೆ ಒಬ್ಬ ಗಂಡಸು ಒಂದಕ್ಕಿಂತ ಹೆಚ್ಚು ಹೆಂಡರಿದಿರನ್ನು ಲಗ್ನವಾಗಬಹದು ಧರ್ಮ ಸಮ್ಮತವೆಂದು ಗಳಿಸಲ್ಪಡುವುದುಂಟಿ, ಇದರ ಫಲವಾಗಿ ಕುಟುಂಬದಲ್ಲಿ ಸವತಿ ಮತ್ಸರವು ತಲೆದೋರಿ ದೊಡ್ಡ ದೊಡ್ಡ ಕುಟುಂಬಗಳು ಹಾಳಾಗುವದನ್ನು ನಾವು ಕಾಣುತ್ತೇವೆ. ಮೀನಾಕ್ಷಯಂತಹ ಹಿರಿಯ ಹೆಂಡತಿಯು ತೋರುವ ಔದರ್ಯ, ಮನಸ್ಸಿನ ವೈಶಾಲ್ಯ ಇವು ನಿಜವಾಗಿ ಅನುಕರಣೀಯವಾದವುಗಳು.

> "ಹುಟ್ಟು ಅಕ್ಕ ತಂಗಿಯರು ಕೂಡ ಸಾವಿತ್ರಮ್ಮ, ಮೀನಾಕ್ಷಮ್ಮನ ಹಾಗೆ ಇರಲು ಸಾಧ್ಯವಿಲ್ಲ"2

---

2) ರಸಚೇತನ ಪುಟ : 449

ಗೃಹ ಜೀವನ ಕಲೆಯಲ್ಲಿ ನುರಿತವಳಾದ ಮೀನಾಕ್ಷಮ್ಮನ ಹೆದ್ದಾರಿಯಲ್ಲಿ ಮುನ್ನಡೆದ ಅವಳ ಸೊಸೆ ಜಯಾ ನಮ್ಮ ಮಹಿಳಾ ಸಮಾಜಕ್ಕೆ ಒಂದು ಆದರ್ಶವನ್ನು ಹಾಕಿಕೊಟ್ಟಿದ್ದಾಳೆನ್ನಬಹುದು.

ಜಯಾ :– ಜಯಾ ಲಕ್ಷ್ಮಣನ ಹೆಂಡತಿ ಆಕೆಯೇ ಲಕ್ಷ್ಮಣನ ಸಂಗೀತಕ್ಕೆ ಚಾಲಕಶಕ್ತಿ. ಅವಳ ಪ್ರೀತಿಯ ಆಶ್ರಯದಲ್ಲಿ ಆದ ಸಂಗೀತದಲ್ಲಿ ಹೊಸ ಪ್ರಜ್ಞೆ ಕಳೆಯುತ್ತಾನೆ. ಆದರೆ ಜಯಾಳ ಬದುಕು ಸ್ವಲ್ಪದಿನದ್ದು, ಅವಳು ಬಹಳ ಬೇಗ ಸಾವಿಗೆ ಶರಣಾನಾಗುತ್ತಾಳೆ. ಜಯ ಬಹಳ ಒಳ್ಳೆಯ ಗೃಹಿಣಿ ಜಯನಾಥ ವಾರಗಿತ್ತಿಯರು ಇರುವ ಮನೆತನಗಳು ಆದರ್ಶಯುತವಾಗಿರುತ್ತವೆ. ಜಯಳಿಗೆ ದುಡಿತದ ಶ್ರಮ ಗೊತ್ತಾಗುತ್ತಿರಲಿಲ್ಲ ತನ್ನ ಮನೆ ತಾನು ದುಡಿಯದೆ ಮತ್ತಾರ ದುಡಿಯಬೇಕು ಎನ್ನುವ ಭಾವನೆಯಿಂದ ಎಷ್ಟೇ ಕೆಲಸ ತನ್ನ ಮೇಲೆ ಬಿದ್ದರೂ ಸಂತೋಷದಿಂದ ನಿರ್ವಹಿಸುತ್ತಿದ್ದಳು. ಆದರೆ ಭಾವವನವರ ಬಿರುನುಡಿಗಳು ಅವಳನ್ನು ಹಣ್ಣು ಹಣ್ಣು ಮಾಡಿ ಬಿಡುತ್ತಿದ್ದವು ಆದರೂ ಭಾವನವರ ಮರ್ಜಿಯನ್ನು ಅನುಸರಿಸಿ ಅವರಿಗೆ ತೃಪ್ತಿಯಾಗುವಂತೆ ಅಡುಗೆ ಮಾಡುವಳು ಯಾವ ಎಡರು ತೊಡರುಗಳು ಬಂದರೂ ಅವುಗಳನ್ನು ಲೆಕ್ಕಿಸದೆ ಸಂಸಾರ ರಥವನ್ನು ಸಾಗಿಸಿಕೊಂಡು ಹೋಗುವುದು ಒಂದು ಹಿರಿದಾದ ಕಲೆ. ಇಂತಹ ಕಲಾವಿದರೂ, ಕಲಾವಿದೆಯರೂ ಇಂದು ನಮ್ಮ ಸಮಾಜದಲ್ಲಿ ಬೇಕಾಗಿದ್ದಾರೆ.

ಒಟ್ಟಾರೇ ಅ.ನ.ಕೃ. ಹೆಂಗರುಳೇನೂ ಎಂಬಷ್ಟು ಸ್ತ್ರೀ ಪಾತ್ರಗಳಲ್ಲಿ ತಾದಾರ್ತ ಹೊಂದುತ್ತಾರೆ. ಒಮ್ಮೊಮ್ಮೆ ಹೆಂಗಸರೇ ಬರೆದ ಕಥೆಯಂತೆ ಸ್ತ್ರೀ ಪಾತ್ರದ ಸೂಕ್ಷ್ಮಾತಿ ಸೂಕ್ಷ್ಮ ಚಿತ್ರವನ್ನು ಓದುಗರ ಮುಂದಿಡುತ್ತಾರೆ.

ಒಟ್ಟಾರೆ ಸಂಧ್ಯಾರಾಗ ಹೆಚ್ಚಿನ ಮನ್ನಣೆಯನ್ನು ಪಡೆಯಲು ಬಹುಶ: ಕಾರಣವೆಂದರೆ ಅದರಲ್ಲಿ ಬರುವ ಪಾತ್ರಗಳು ಸಹಜವಾದವುಗಳು ಅವುಗಳಿಗೆ ಸಮಾಜದಲ್ಲಿರುವ ಅಂಧ:ಶ್ರಧೆಗಳಿವೆ ಅವುಗಳಿಗೆ ಸಂಪ್ರದಾಯಗಳ ಮೇಲೆ ನಂಬಿಕೆಯಿದೆ ಅಶ್ಲೀಲ ಸಂಬಂಧದ ಪ್ರಕರಣಗಳು ಇದರಲ್ಲಿ ಇಲ್ಲವೇ ಇಲ್ಲವೆಂದರೂ ಸರಿಯೇ ರಾಮಚಂದ್ರನ "ಸಾಹೇಬ" ದರ್ಪವು ಗೋಪಾಲಿ, ವೆಂಕಟೇಶ್ವರ ಮೂಲಕವೇ ನೀರಾಗುತ್ತಾನೆ. ಸವತಿಯರಾದ ಮೀನಾಕ್ಷಮ್ಮ ಸಾವಿತ್ರಮ್ಮ ನವರ ಅನ್ಯೋನ್ಯತೆ ಹೃದಯ ಸ್ಪರ್ಶಿಯಾದುದು. ಕಲಾವಿದರಿಗೆ ಅವಶ್ಯಬೇಕಾಗುವ ಮದ್ಯಪಾನ, ಸ್ತ್ರೀಲೋಲುಪ್ತಿಗಳು ಈ ಕೃತಿಯಲ್ಲಿ ಅಪ್ಪಿತಪ್ಪಿ ಕೂಡ ತಲೆಹಾಕಿಲ್ಲ.

ಅಧ್ಯಾಯ – 6

ಸಂಧ್ಯಾರಾಗ ಮತ್ತು ಸುಬ್ಬಣ್ಣ ಕಾದಂಬರಿಗಳ ತೌಲನಿಕ ಅಧ್ಯಯನ

ಈಗಾಗಲೇ 'ಸುಬ್ಬಣ್ಣ' ಮತ್ತು ಸಂಧ್ಯಾರಾಗ' ಕಾದಂಬರಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. ಈಗ ಈ ಎರಡೂ ಕಾದಂಬರಿಗಳಿಗಿರುವ ಹೋಲಿಕೆ, ವ್ಯತ್ಯಾಸಗಳನ್ನು ಕುರಿತು ಚರ್ಚಿಸಲಾಗುತ್ತದೆ. ಯಾವುದೇ ಒಂದು ಕೃತಿಯ ಶ್ರೇಷ್ಠತೆ, ವಿಶೇಷತೆಗಳನ್ನು ಅದರಷ್ಟೆ ಮಹತ್ವದ ಮತ್ತೊಂದು ಕೃತಿಯೊಡನೆ ತುಲನೆ ಮಾಡಿ ನೋಡಬೇಕು ಈ ನಿಟ್ಟಿನಲ್ಲಿ ಈ ಎರಡೂ ಕಾದಂಬರಿಗಳನ್ನು ವಸ್ತು, ಪಾತ್ರ, ಸನ್ನಿವೇಶ, ಅಭಿವ್ಯಕ್ತಿಯ ದೃಷ್ಟಿಯಿಂದ ಅಧ್ಯಯನ ಮಾಡಲಾಗುತ್ತದೆ. ಅದರ ವಿವರವಾದ ವಿಶ್ಲೇಷಣೆಯೇ ಈ ಅಧ್ಯಾಯನದ ಮುಖ್ಯ ಉದ್ದೇಶವಾಗಿದೆ.

ಅ) ವಸ್ತುವಿನ ಸ್ವರೂಪ

ಯಾವುದೇ ಕೃತಿಯಲ್ಲಿಯೂ ವಸ್ತು ಪ್ರಮುಖವಾದುದು, ಇದು ಆ ಕೃತಿಯ ಪಾತ್ರಗಳು, ಅಭಿವ್ಯಕ್ತಿ ಶೈಲಿಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ.

"ಸುಬ್ಬಣ್ಣ" ಕಾದಂಬರಿಯಲ್ಲಿರುವುದು ಸಂಗೀತಗಾರನೊಬ್ಬನ ಚಿತ್ರ, ಇಲ್ಲಿ ಸುಬ್ಬಣ್ಣನ ಕಲೆಗೆ ಗಣನೀಯ ಸ್ಥಾನವಿದೆ; ಆದರೂ ಕಥೆಯಲ್ಲಿ ಮುಖ್ಯವಾದದ್ದು ಆತನ ಗಾನಕಲೆ ಮೊದ ಮೊದಲು ಸುಬ್ಬಣ್ಣನಿಗೆ ಸಂಗೀತವೇ ಜೀವನದ ಗುರಿಎಂಬ ಭಾವನೆ ಇದ್ದಿರಬೇಕು ಅವನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದ ಭವಿಷ್ಯವೆಲ್ಲಾ ಸಂಗೀತಕ್ಕೆ ಸಂಬಂಧಪಟ್ಟದ್ದು ಉಳಿದದ್ದು ಅವನಿಗೆ ಅಷ್ಟು ಮುಖ್ಯವಲ್ಲ, ಮದುವೆಯಾದ ಹೆಂಡತಿಯ ವಿಷಯದಲ್ಲೂ ಅವನು "ಇವಳು" ಬೇರೆ ಕುತ್ತಿಗೆ ಸುತ್ತಿದ್ದಾಳೆ ಇದೆಲ್ಲಿಯಶನಿ" ಎಂದು ಕೊಂಡಿದ್ದ. ಸಂಗೀತಕ್ಕಾಗಿ ಅವನು ಇತರ ಸಂಪಾದನೆಯ ಮಾರ್ಗವನ್ನು ತೊರೆದಿದ್ದ, ಇನ್ನೆಲ್ಲಾ ಆಸೆಗಳು ಹೋದ ಮೇಲೂ ಆತನಲ್ಲಿ ತನ್ನ ಸಂಗೀತದ ಹೆಮ್ಮೆ ಸ್ವಲ್ಪ ಉಳಿದಿತ್ತು. ತನ್ನ ಪಿಟೀಲನ್ನು ಹೊಳೆಗೆ ಎಸೆದಾಗ ಅವನಿಗೆ ತನ್ನ ಪ್ರಾಣವನ್ನೆ ಕಳಚಿ ಎಸೆದಂತಾಯಿತು.

ಒಟ್ಟಿನಲ್ಲಿ ಸಂಗೀತದಿಂದ ಸುಬ್ಬಣ್ಣ ಉದ್ಧಾರವಾದ ಎನ್ನುವುದಕ್ಕಿಂತ ಸುಬ್ಬಣ್ಣ ಉದ್ಧಾರವಾದರಿಂದ ಅವನ ಸಂಗೀತ ಉದ್ಧಾರವಾಯಿತು ಎನ್ನಬಹುದು "ಸುಬ್ಬಣ್ಣನ ಹೃದಯ

ಪರಿಪಕ್ವವಾದ್ದರಿಂದ ಅವನ ಕಲೆ ಪರಿಪಕ್ವವಾಯಿತು ಅಂದ ಮೇಲೆ ಈ ಕಥೆಯ ವಸ್ತುವೆಂದರೆ ಸುಬ್ಬಣ್ಣನ ಸಂಗೀತವಲ್ಲ ಸುಬ್ಬಣ್ಣನ ಉದ್ಧಾರ"1 ಎಂದು ಅಭಿಪ್ರಾಯ ಪಟ್ಟಿದ್ದಾರೆ, ಈ ಮಾತು ಸರಿ ಹೊಂದುವಂತದ್ದಾಗಿದೆ.

"ಸಂಧ್ಯಾರಾಗ" ವೂ ಕೂಡ ಒಬ್ಬ ಕಲಾವಿದನನ್ನು ಕುರಿತ ಕಾದಂಬರಿಯಾಗಿದೆ ಈ ಕಾದಂಬರಿಯ ವಸ್ತುವೂ ಕೂಡ ಕಲಾವಿದನದೇ, ಆದರೇ ಈ ಕಾದಂಬರಿ ಬರೀ ಲಕ್ಷ್ಮಣನನ್ನು ಅಂದರೆ ಈ ಕಾದಂಬರಿಯ ನಾಯಕನನ್ನೇ ಕುರಿತು ಹೇಳುವುದಿಲ್ಲ, ಇಲ್ಲಿ ರಾಮಚಂದ್ರ ಮತ್ತು ಲಕ್ಷ್ಮಣ ಎಂಬ ಈ ಇಬ್ಬರು ಅಣ್ಣ ತಮ್ಮಂದಿರ ಜೀವನದ ವೈದೃಶ್ಯ ಈ ಕಾದಂಬರಿಯ ರಚನಾತ್ಮಕ ತತ್ವ ಆದರೆ ಸುಬ್ಬಣ್ಣದಲ್ಲಿ ನಾವು ಈ ರಚನಾತ್ಮಕ ತತ್ವವನ್ನು ಕಾಣಲು ಸಾಧ್ಯವಿಲ್ಲ. ಅಲ್ಲಿ ಸುಬ್ಬಣ್ಣನೇ ಕೇಂದ್ರವಾಗಿರುತ್ತಾನೆ. ಅದು ಕಲಾವಿದ ಸುಬ್ಬಣ್ಣನನ್ನೆ ಕುರಿತು ಹೇಳುವ ಕಾದಂಬರಿಯಾಗಿ ಬೆಳೆಯುತ್ತಾ ಹೋಗುತ್ತದೆ. ಲಕ್ಷ್ಮಣ ಈ ಕಾದಂಬರಿಯ ನಾಯಕ ಹುಟ್ಟು ಕಲಾವಿದ ತಂದೆ ತಾಯಿಗಳ ಸಾವು ಮತ್ತು ತನ್ನ ಹೆಂಡತಿಯನ್ನು ಬಲಿ ತೆಗೆದುಕೊಂಡ ಅಣ್ಣನ ಅಮಾನುಷ ನಡತೆ ಲಕ್ಷ್ಮಣನಲ್ಲಿ ವೈರಾಗ್ಯವನ್ನು ಹುಟ್ಟಿಸುತ್ತದೆ. ಆತ ಮನೆ ಬಿಟ್ಟು ಏಕಾಕಿಯಾಗಿ ತಿರುಗುತ್ತಾನೆ. ಸುದೈವದಿಂದ ಆತನಿಗೆ ಗುರುವೊಬ್ಬ ದೊರೆತು ಅವನ ಜೀವನಕ್ಕೆ ಒಂದು ದಿಕ್ಕು ಸಿಗುತ್ತದೆ. ಸಂಗೀತದಲ್ಲಿ ಅವನು ಗಳಿಸುವ ಸಿದ್ಧಿಯಿಂದಾಗಿ ಅವನಿಗೆ ಧನ ಮತ್ತು ಕೀರ್ತಿ ಎರಡೂ ಲಭಿಸುತ್ತದೆ ಆದರೆ ಇವು ಅವನ ಅಂತರಂಗವನ್ನು ಮುಟ್ಟುವುದಿಲ್ಲ ಭ್ರಷ್ಟಗೊಳಿಸುವುದಿಲ್ಲ. ಸಂಗೀತ ಮತ್ತು ತನ್ನ ಪ್ರೀತಿಯ ಹೆಂಡತಿಯ ನೆನಪು ಅವನಿಗೆ ರಕ್ಷೆಯನ್ನು ನೀಡುತ್ತದೆ ಪೂರ್ವಿರಾಗದ ಸಾಕ್ಷಾತ್ಕಾರದಲ್ಲಿ ಪ್ರಿಯತಮೆಯ ಸಮಂಜಸದಲ್ಲಿ ಲಕ್ಷ್ಮಣನ ಜೀವನ ಅದರೊಡನೆ ಕಾದಂಬರಿ ಕೊನೆಗೊಳ್ಳುತ್ತದೆ ಎರಡು ಕಾದಂಬರಿಗಳನ್ನು ಓದಿ ನೋಡಿದಾಗ ಎರಡರಲ್ಲೂ ಅಂತ್ಯ ಭಿನ್ನವಾಗಿ ಆಗಿರುವುದನ್ನು ಕಾಣಬಹುದಾಗಿದೆ.

'ಸುಬ್ಬಣ್ಣ' ಕಾದಂಬರಿಯು ಗಾತ್ರದಲ್ಲಿ ಚಿಕ್ಕದಾದರೂ "ಮಾಡಿದ್ದುಣ್ಣೋ ಮಹಾರಾಯದಂತೆ" ಒಂದು ಸಂಸ್ಕೃತಿಯ ತಿರುಳನ್ನು ಎತ್ತಿ ಹಿಡಿಯುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. "ಸುಬ್ಬಣ್ಣನ ಕೊನೆಯ ದಿನಗಳ ಮನೋಧರ್ಮ ಒಂದು ಆದರ್ಶ ಮನೋಧರ್ಮ ಎಂದು ನನ್ನ ತಿಳುವಳಿಕೆ" ಎಂಬ ಮಾಸ್ತಿಯವರ ಹೇಳಿಕೆಯಲ್ಲಿ ಕಾದಂಬರಿಯ ಅಂತಃಸ್ವರೂಪದ ಸೂಚನೆಯಿದೆ. ಈ ದೃಷ್ಟಿಯಿಂದ

ಮಾಸ್ತಿಯವರ ಕಥೆಗಳು ಪುಟ :69

ಸುಬ್ಬಣ್ಣನ ಸಾಧನೆ ಅವನಲ್ಲಿ ಮೊದಲಿನಿಂದಲೂ ಇದ್ದದಲ್ಲ. ಈ ದೃಷ್ಟಿಯಿಂದ ಸುಬ್ಬಣ್ಣನ ಆಂತರಿಕ ಬೆಳವಣಿಗೆ ಕಾದಂಬರಿಯ ಮುಖ್ಯ ಆಶಯವಾಗಿದೆ.

ಹಾಗೆ 'ಸಂಧ್ಯಾರಾಗ' ಒಬ್ಬ ಕಲಾವಿದ ತನ್ನ ಪರಿಸರದೊಡನೆ ಹೋರಾಡುವ ಕತೆಯೊಂದು ಓದುವುದು ತಪ್ಪಾದೀತು. ಶಿವರಾಮ ಕಾರಂತರ 'ಮರಳಿಮಣ್ಣಿಗೆಯಂತೆ' ಈ ಕಾದಂಬರಿಯೂ ಸಾವಯವ ಸಮಾಜದಲ್ಲಿ ಬೇರು ಬಿಟ್ಟ ಕೌಟುಂಬಿಕ ಜೀವನ ಆಧುನಿಕ ಜೀವನದ ಒತ್ತಡಗಳಿಗೆ ಸಿಕ್ಕು ಉಧ್ವಸ್ತವಾಗುವ ಪ್ರಕ್ರಿಯೆಯನ್ನು ಕುರಿತ ಕಾದಂಬರಿಯಾಗಿದೆ. ಇದರಿಂದ ತಿಳಿಯುವುದೇನೆಂದರೆ ಲಕ್ಷ್ಮಣ ಸಾಧನೆ ಹುಟ್ಟಿನಿಂದ ಬಂದುದ್ದಾಗಿದ್ದು ಇಲ್ಲಿ "ಕಲಾವಿದನ ಗುರಿ ಸಮ್ಯಗ್ದರ್ಶನವಾಗಿದ್ದು, ಇದು ಮೊದಲು ಅಂಶತ: ಮಾತ್ರ ಅವನಿಗೆ ದೊರಕಿ ಕೊನೆಗೆ ಪೂರ್ಣದರ್ಶನ ಲಭ್ಯವಾಗುತ್ತದೆ." ಎಂದಿದ್ದರೆ ಕಾದಂಬರಿಕಾರರು.

'ಸುಬ್ಬಣ್ಣ' ಬದುಕು ಸುಮಾರು ಏಳೂವರೆ ದಶಕಗಳಷ್ಟು ದೀರ್ಘಾವಧಿಯ ಬದುಕು ಇಲ್ಲಿ ಮೂರು ಘಟ್ಟಗಳಾಗಿ ಮೂಡಿದೆ. ಮೊದಲ 21 ಪುಟಗಳಲ್ಲಿ ಅವನ 25 ವರ್ಷಗಳ ಬದುಕಿದೆ. ಮುಂದಿನ 12 ಪುಟಗಳಲ್ಲಿ 25 ವರ್ಷಗಳ ಬದುಕಿನ ಕತೆಯಿದೆ. ಮುಂದಿನ ಪುಟಗಳಲ್ಲಿ ಅವನ ಕೊನೆಗಾಲದ ಬದುಕಿನ ಚಿತ್ರವಿದೆ. 2 ಪುಟಗಳ ರಾಮರಾಯರ ಕಥೆ ಇಲ್ಲಿ 89 ಪುಟಗಳಾಗಿರುವುದನ್ನು ನೆನಪಿಡಬೇಕು. ಅದಕ್ಕಿಂತ ಮುಖ್ಯವಾದದ್ದು ಇಲ್ಲಿನ ಕಥಾ ಸಂಯೋಜನೆ ಹನ್ನೊಂದು ಅಧ್ಯಾಯಗಳಲ್ಲಿ ಹರಡಿರುವ ಕತೆಯ ಆರಂಭದಲ್ಲಿ ಸುಬ್ಬಣ್ಣನ ಬದುಕಿನ ಸಮಸ್ಯೆಗೆ ಸಂಬಂಧಿಸಿದ ಜಿಜ್ಞಾಸೆ ಬರುತ್ತದೆ ಅದರ ಮುಂದೆ ಆ ಜಿಜ್ಞಾಸೆಯ ವ್ಯಾಖ್ಯಾನ ಎಂಬಂತೆ ಕಥೆ ಬೆಳೆಯುತ್ತದೆ.

'ಸಂಧ್ಯಾರಾಗ' ದ ನಾಯಕ ಲಕ್ಷ್ಮಣನ ಬಾಲ್ಯದ ಜೀವನ ಆವರಣ ಪೋಷಣೆಗೆ ಕಾದಂಬರಿಯ 9 ಅಧ್ಯಾಯಗಳೂ ಮೀಸಲಾಗಿದೆ. ಲಕ್ಷ್ಮಣನ ಸಂಗೀತ ಶಿಕ್ಷಣಕ್ಕೆ ಅವಶ್ಯಕವಾದ ಆವರಣ ಸೂಕ್ತವಾಗಿ ಬಂದು ಕತೆಯ ಬೆಳವಣಿಗೆಯನ್ನು ಸವೇಗವಾಗಿ ಮುಂದುವರಿಸಲು ಅನುಕೂಲವಾಗಿದೆ. ಲಕ್ಷ್ಮಣ ನಮ್ಮ ಮುಂದೆಯೇ ಬಾಲ್ಯವನ್ನು ಕಳೆಯುತ್ತಾನೆ. ಆದರೆ ನಮ್ಮ ಸುಬ್ಬಣ್ಣನ ಜನನ ಬಾಲ್ಯ ಇವುಗಳ ಬಗ್ಗೆ ಏನು ತಿಳಿದು ಬರುವುದಿಲ್ಲ ಸುಬ್ಬಣ್ಣನ ಜನನ ಬಾಲ್ಯ, ಮತ್ತು ಅವನ ಮದುವೆಯ ಮುಂಚಿನ ಜೀವನದ ವಿವರಗಳು ಕಾದಂಬರಿಯಲ್ಲಿಲ್ಲ. ಮೈಸೂರು ಚರಿತ್ರೆಯ ಹಿನ್ನೆಲೆಯಲ್ಲಿ ಕಥೆ

ಪ್ರಾರಂಭವಾಗುವುದರಿಂದ ಅದರ ಆಧಾರದ ಮೇಲೆ ಕೆಲವು ವಿವರಗಳನ್ನು ವರ್ಣಿಸಬಹುದು. ಸುಬ್ಬಣ್ಣನಿಗೆ ಹದಿನೈದು ವರ್ಷಕ್ಕೆ ಮದುವೆಯಾಗಿತ್ತು. ಮತ್ತು ಹೆಂಡತಿ ಮನೆಗೆ ಬಂದುದು ಇನ್ನೆರಡು ವರ್ಷಗಳ ನಂತರ ಎಂಬ ಉಲ್ಲೇಖ ಕಾದಂಬರಿಯಲ್ಲಿರುವುದರಿಂದ ಸುಬ್ಬಣ್ಣನು ಗೃಹಸ್ಥನಾದದ್ದು ಯಾವಾಗ ಎಂಬ ಮಾಹಿತಿ ದೊರೆಯುವುದು. ಆದರೆ ಸುಬ್ಬಣ್ಣನ ಬಾಲ್ಯ ಜೀವನ ಲಕ್ಷ್ಮಣ ಬಾಲ್ಯ ಜೀವನದಂತೆ ನಮ್ಮ ಮುಂದೆ ನಡೆದಂತೆ ಬಾಸವಾಗುವುದಿಲ್ಲ. ಅದಕ್ಕೆ ಬದಲಾಗಿ ಅದೊಂದು ಛಾಯೆಯಾಗಿ ಉಳಿಯುವುದು ಅಂದರೆ ಖಚಿತತೆ ಕಂಡು ಬರುವುದಿಲ್ಲ.

ಸಂಧ್ಯಾರಾಗದಲ್ಲಿ ಲಕ್ಷ್ಮಣನ ವಿಧ್ಯಾಭ್ಯಾಸದ ಬಗ್ಗೆ ನಮಗೆ ಅಂದರೆ ಓದುಗರಿಗೆ ತಿಳಿಯುತ್ತದೆ ಆದರೆ ಸುಬ್ಬಣ್ಣನ ವಿಧ್ಯಾಭ್ಯಾಸದ ಬಗ್ಗೆ ಹೆಚ್ಚು ವಿವರ ಕಥೆಯಲ್ಲಿಲ್ಲ. ಸುಬ್ಬಣ್ಣನ ಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸ ಗುರುಕುಲ ಪದ್ಧತಿಯಂತೆ ನಡೆದಿರಬಹುದು ಅಥವಾ ಮನೆಯಲ್ಲೇ ಪೋಷಕರ ನೇತೃತ್ವದಲ್ಲಿ ನಡೆದಿರಬಹುದು. ನಾರಾಯಣ ಶಾಸ್ತ್ರೀಗಳು ಸುಬ್ಬಣ್ಣನಿಗೆ ಮನೆಯಲ್ಲೇ ಅಕ್ಷರಾಭ್ಯಾಸ ಮಾಡಿಸಿದ್ದರು. ಆದರೆ ಅವನ ಸಂಗೀತ ಪ್ರೇಮದ ಕಾರಣ ಅವನ ವಿಧ್ಯಾಭ್ಯಾಸ ಅಲ್ಲಿಂದ ಮುಂದೆ ಸಾಗಲಿಲ್ಲ ಎಂಬ ವಿಚಾರ ಇದೆ. ಒಟ್ಟಾರೆ ಸುಬ್ಬಣ್ಣನ ಜನನ, ಬಾಲ್ಯ, ಶಿಕ್ಷಣ ಇವುಗಳ ಬಗ್ಗೆ ಸಂಧ್ಯಾರಾಗದ ನಾಯಕನಂತೆ ಮಾಹಿತಿಗಳು ಲಭ್ಯವಿಲ್ಲ.

"ಸುಬ್ಬಣ್ಣ" ಕಾದಂಬರಿಯಲ್ಲಿ ಮಾತನಾಡುವ ಸಂದರ್ಭಗಳೆ ಐದೋ-ಆರೋ ಅದು ಒಂದೊಂದು ಸಂದರ್ಭವೂ ಅವನ ಬಾಳಿನ ಆಯಕಟ್ಟಿನ ಘಟ್ಟದ್ದು ಎನ್ನುವಂತಹದು ಉಳಿದ ಅವನ ಎಲ್ಲ ಚರ್ಯೆ ಚರಿತೆವನ್ನು ಮಾಸ್ತಿಯವರೇ ತಮ್ಮ ಮಾತಿನಲ್ಲಿ ಹೇಳಿ ಮುಗಿಸುತ್ತಾರೆ"3

ಆದರೆ ಸಂಧ್ಯಾರಾಗದಲ್ಲಿ ಕಾದಂಬರಿಕಾರರು ಮಾತಾನಾಡುವುದಕ್ಕಿಂತ ಹೆಚ್ಚಾಗಿ ಅಲ್ಲಿನ ಪಾತ್ರಗಳು ಮಾತನಾಡುತ್ತವೆ. ಹಾಗೆ ಅ.ನ.ಕೃ. ಅವರು ತಮ್ಮ ಕಾದಂಬರಿಯಲ್ಲಿ ಎರಡು ಮಹತ್ವದ ಮುಖಗಳ ಕಡೆಗೆ ಓದುಗರ ಲಕ್ಷ್ಯವನ್ನು ಎಳೆಯ ಬಯಸುತ್ತಾರೆ. ಮೊದಲನೆಯದು ಸಮಸ್ಯೆಗಳ ಬಗ್ಗೆ ತಾವಿಟ್ಟುಕೊಂಡ ದೃಷ್ಟಿಕೋನ, ಎರಡನೆಯದು ಅವರ ಶುದ್ಧ ಭಾರತೀಯತೆ.

---

3. ಸಮಗ್ರ ಸಾಹಿತ್ಯ – ಗೌರೀಶ ಕಾಯ್ಕಣಿ ಪುಟ–8

ಸುಬ್ಬಣ್ಣ ಕಾದಂಬರಿ ಕುರಿತು ಎ.ಎನ್ ಮೂರ್ತಿ ರಾಯರು ಹೇಳುವುದೇನೆಂದರೆ "ಈ ಕಥೆಯ ನಿಜವಾದ ವಸ್ತು ಸಂಗೀತವಲ್ಲ ಸುಬ್ಬಣ್ಣನ ಮೋಕ್ಷ"[4]ಎಂದು ಹೇಳಿದ್ದಾರೆ. ಆದರೆ ಡಿ.ವಿ.ಗುಂಡಪ್ಪನವರು ಇದನ್ನೊಪ್ಪುವುದಿಲ್ಲ. ಮಾಸ್ತಿಯವರಿಗೆ ಬರೆದ ಪತ್ರದಲ್ಲಿ ಡಿ.ವಿ.ಜಿ. ಹೇಳುವುದು ಹೀಗೆ "ಸುಬ್ಬಣ್ಣನ ಮೋಕ್ಷ ಸಾಧನೆಯನ್ನು ಅಥವಾ ಈ ದಿಕ್ಕಿನಲ್ಲಿ ಅವನ ಪ್ರಯತ್ನವನ್ನು ನೀವು ಚಿತ್ರಿಸಿದುದರಲ್ಲಿ ಆಳವಾದ ಸತ್ಯವಿದೆ. ಆದರೆ ಸುಬ್ಬಣ್ಣನ ಶ್ರದ್ಧೆ ಮತ್ತು ದರ್ಶನಗಳಲ್ಲಿ ಇರುವ ನಂಬಿಕೆಯನ್ನು ನಿಮ್ಮೊಡನೆ ಹಂಚಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ" ಬಹುಶ: ಈ ಕಾರಣಕ್ಕಾಗಿಯೇ ಇರಬಹುದು ಕಾದಂಬರಿಯ ನಿರೂಪಕ ಕತೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಓದುಗರ ಸಹಾಯವನ್ನು ಅಪೇಕ್ಷಿಸುತ್ತಾನೆ.

ಒಟ್ಟಾರೆ 'ಸಂಧ್ಯಾರಾಗ' ಮತ್ತು 'ಸುಬ್ಬಣ್ಣ' ಕಾದಂಬರಿಗಳು ಒಂದೇ ವಸ್ತುವನ್ನೊಳಗೊಂಡಿದ್ದರೂ ಹೇಳಿರುವ ರೀತಿ ಭಿನ್ನವಾಗಿದೆ 'ಸುಬ್ಬಣ್ಣ' ಕಾದಂಬರಿಯು ಬದುಕು ಅರ್ಥವನ್ನು ತಿಳಿಸುತ್ತದೆ. ಆದರೆ 'ಸಂಧ್ಯಾರಾಗ' ಒಬ್ಬ ಕಲಾವಿದನ ಸಾಧನೆಯನ್ನು ಹೇಳುತ್ತದೆ.

ಪಾತ್ರದೃಷ್ಟಿಯಿಂದ :-

'ಸುಬ್ಬಣ್ಣ' ಮತ್ತು 'ಸಂಧ್ಯಾರಾಗ' ಕಾದಂಬರಿಗಳಲ್ಲಿ ಕಂಡು ಬರುವ ಪಾತ್ರಗಳ ಸೌಮ್ಯ, ವೈಶಮ್ಯವನ್ನು ಈ ಕೆಳಗೆ ನೋಡಬಹುದಾಗಿದೆ.

'ಸುಬ್ಬಣ್ಣ' ಕಾದಂಬರಿ ಒಬ್ಬ ಕಲಾವಿದನ ಕತೆಯಾದರೂ ಇಲ್ಲಿ ಕಂಡು ಬರುವ ಉಳಿದ ಪಾತ್ರಗಳ ಸಾಂಕೇತಿಕತೆ ಅರ್ಥಪೂರ್ಣವಾದದ್ದು, ಲಲಿತೆಯ ಸಹನೆ, ವಿವೇಕ, ಭಕ್ತಿಗಳು, ಯಜಮಾನಿಯ ಹಠ ಪಕ್ಷಪಾತ, ಕಾಠಿಣ್ಯ, ಶಾಸ್ತ್ರೀಗಳ ತೂಕದ ನಡತೆ, ನೀಲಸಾನಿಯ ಔದಾರ್ಯ, ಪವಿತ್ರ ಪ್ರೇಮಗಳು, ವೆಂಕಟರಮಣನ ತಾರುಣ್ಯದ ಉತ್ಸಾಹ, ಇಂಥ ಅಂಶಗಳು ಘಟನೆಗಳಲ್ಲಿ ಮೈವೆತ್ತು ಕಾದಂಬರಿಯ ಅರ್ಥವ್ಯಾಪ್ತಿಯನ್ನು ಹೆಚ್ಚಿಸುತ್ತದೆ.

ಈ ಕಥೆಯ ನಾಯಕ ಸುಬ್ಬಣ್ಣನಿಗೆ ಕಷ್ಟದ ಮೇಲೆ ಕಷ್ಟ ಸಂಕಟದ ಮೇಲೆ ಸಂಕಟ ಎಲ್ಲೊ ಸ್ವಲ್ಪ ಸುಖ ಕೂಡ ಅವನ ಮೇಲೆ ಎರಗಿ ಬಂದು ಆದರೆ ಅದು ಹೆಚ್ಚು ದಿನ ಉಳಿಯಲಿಲ್ಲ ಒಂದಾದ ಮೇಲೊಂದು ಭ್ರಮೆ ಕಳೆದು ಮನಸ್ಸಿಗೆ ಯಾವ ಲೇಪವೂ ಇಲ್ಲದೆ ಅವನ ಬದುಕು ಸಂಸ್ಕಾರಗೊಂಡಿತು.

4) [illegible] ಕತೆಗಳು – ಎ.ಎನ್. ಮೂರ್ತಿರಾವ್ ಪುಟ-47

"ಸುಬ್ಬಣ್ಣನ ಏಕಾಕಿತನ ಪ್ರಪಂಚದಲ್ಲಿ ವ್ಯಕ್ತಿ ವ್ಯಕ್ತಿಯ ಅದರಲು ಭಾವಜೀವಿ ಅಂತರ್ಮುಖಿ ವ್ಯಕ್ತಿಯ ಮೂಲಭೂತ ಅಸಹಾಯಕತೆ ಆಗತಿಕತೆಯನ್ನು ಪ್ರತಿನಿಧಿಸುತ್ತದೆ". ಎಂದು ಗೌರೀಶ್ ಕಾಯ್ಕಿಣಿ ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಸುಬ್ಬಣ್ಣ ಅನ್ಯಕೇಂದ್ರಿತ ವಿಶ್ವದಲ್ಲಿ ಆತ್ಮಕೇಂದ್ರಿತ ವ್ಯಕ್ತಿಯ ಜೀವನ ಶಿಲ್ಪಕ್ಕೆ ಒಂದು ಮನಕರಗುವ ಸಂಕೇತ. ಸುಬ್ಬಣ್ಣ ಜೀವನವನ್ನು ನೋಡುವ ದೃಷ್ಟಿ ತಾರ್ಕಿಕದಲ್ಲ, ಅದರಲ್ಲಿ ಬಾಳಿನ ರಹಸ್ಯವನ್ನು ಸಂಕೇತಿಸುವ ಉದ್ದೇಶವಿದೆ. ಈ ಕಾದಂಬರಿಯ ಕೇಂದ್ರ ಪಾತ್ರ ಮಾನವೀಯ ಸಾಧ್ಯತೆಗಳ ದೃಷ್ಟಾಂತವಾಗಿ ನಮ್ಮೆದುರಿಗಿದೆ ಸುಬ್ಬಣ್ಣನ ವೈಯಕ್ತಿಕ ಆಯ್ಕೆ ಅವನ ಜೀವನವನ್ನು ಅನಿಶ್ವಿತ ಮಾರ್ಗಕ್ಕೆ ಎಳೆದು ದು:ಖ ಪರಂಪರೆಗೆ ಮತ್ತು ಅನುಭವದ ಮೂಲಕ ಮಾಡುವ ಕ್ರಿಯೆಗೆ ಕಾರಣವಾಗುತ್ತದೆ. ಆದರೂ ಮನುಷ್ಯನ ಸಾಧ್ಯತೆಗಳನ್ನು ತೋರಿಸುವುದರ ಮೂಲಕ ಪ್ರಸ್ತುತತೆಯನ್ನು ಪಡೆಯುತ್ತದೆ.

ಅ.ನ.ಕೃ. ಅವರ ಸಂಧ್ಯಾರಾಗದ ನಾಯಕ ಲಕ್ಷ್ಮಣ ಆದರೆ ಈ ಪಾತ್ರಕ್ಕೆ ಪೂರಕವೆನ್ನುವಂತೆ ಬರುವಂತಹ ಪಾತ್ರಗಳಾದ ಮೀನಾಕ್ಷಮ್ಮ ಜಯಾ, ಸಾವಿತ್ರಮ್ಮ, ಇವರುಗಳ ಉದಾತ್ತ ಗುಣವನ್ನು ಚಿತ್ರಿಸಿದ್ದಾರೆ. ಹಾಗೇಯೇ ಅಹಂಕಾರದ ಮೇಲೆ ಮೀರಿದ ರಾಮಚಂದ್ರನಿಂದ ರಾಯರ ಮನೆತನ ಮರ್ಯಾದೆ ಹೀಗೆ ಮೂರಾಬಟ್ಟೆಯಾಗುತ್ತದೆ. ಎಂಬುದನ್ನು ಅವನ ಅಧಿಕಾರ ದರ್ಪ ರಥದ ಗಾಲಿಗೆ ಸಿಕ್ಕಿ ಎಷ್ಟು ಸಂಸಾರಗಳು ಮಣ್ಣು ಮುಕ್ಕಿದವು. ಎಂಬುದನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಕಾದಂಬರಿಯ ನಾಯಕನಾದ ಲಕ್ಷ್ಮಣನ ಪಾತ್ರದಲ್ಲಿ ಭಾವುಕತೆ ಹೆಚ್ಚಾಗಿ ಕಂಡು ಬರುತ್ತದೆ. ಸುಬ್ಬಣ್ಣ ಭಾವಜೀವಿಯಾದರೆ ಲಕ್ಷ್ಮಣನ್ನು ಸಹ ಭಾವುಕತೆವುಳ್ಳ ಜೀವಿ ಇದರಲ್ಲಿಯೇ ಇವರಿಬ್ಬರಿಗೂ ಹೋಲಿಕೆ ಇರುವುದನ್ನು ಗಮನಿಸಬಹುದು ಹಾಗೆ ಸುಬ್ಬಣ್ಣನ ಕೋಪ ತಾಪಗಳು ಕಂಡು ಬಂದರೆ ಲಕ್ಷ್ಮಣನಿಗೆ ಕೋಪ ತಾಪಗಳು ಇಲ್ಲವೆಂಬಂತೆ ಕಾದಂಬರಿ ನಿರೂಪಿಸುತ್ತದೆ. ಸುಬ್ಬಣ್ಣನ ಕೋಪದ ಸಂದರ್ಭದ ಘಟನೆಗಳು ಕಾದಂಬರಿಯಲ್ಲಿ ಹಲವಾರು ಸಿಗುತ್ತದೆ. ಆದರೆ ಲಕ್ಷ್ಮಣನ ವಿಚಾರದಲ್ಲಿ ಇದು ಕಂಡು ಬರುವುದಿಲ್ಲ. ಲಕ್ಷ್ಮಣ ಏಕಾಂತ ಪ್ರಿಯ ಯಾರೊಡನೆಯು ಹೆಚ್ಚು ಮಾತಾಡುವವನಲ್ಲ ಆದರೆ ಸುಬ್ಬಣ್ಣ ಏಕಾಂತವನ್ನು ಅಷ್ಟು ಇಷ್ಟಪಡುವ ವ್ಯಕ್ತಿಯಲ್ಲ. ಲಕ್ಷ್ಮಣ ಏಕಾಂತತೆಯ ಜೊತೆಗೆ ಯಾವಾಗಲೂ ಸಂಗೀತದಲ್ಲಿ ತನ್ಮಯವಾಗಿರುತ್ತಾನೆ. ಲಕ್ಷ್ಮಣನಲ್ಲಿ ತನ್ನ ಹೆಂಡತಿಯ ಸಾವು ಮತ್ತು

೬) ಗೌರೀಶ ಕಾಯ್ಕಿಣಿ ಸಮಗ್ರ ಸಾಹಿತ್ಯ - ಪುಟ-೧೬

ಅಣ್ಣನ ಅಮಾನುಷ ನಡತೆ ವೈರಾಗ್ಯವನ್ನು ಹುಟ್ಟಿಸುತ್ತದೆ. 'ಸುಬ್ಬಣ್ಣ' ಕಾದಂಬರಿಯ ಸುಬ್ಬಣ್ಣನಿಗೂ ಆತನ ಹೆಂಡತಿ ಸಾವು ಮತ್ತು ಮಕ್ಕಳ ಸಾವು ವೈರಾಗ್ಯವನ್ನು ಹುಟ್ಟಿಸುವುದಕ್ಕೆ ಬದಲಾಗಿ ಈ ಘಟನೆಗಳು ಸುಬ್ಬಣ್ಣನ ನಿಜವಾದ ಸಂಗೀತ ಸಾಧನೆಗೆ ನೆರವಾಗುತ್ತವೆ.

ಲಕ್ಷ್ಮಣ ಏಕಾಕಿಯಾಗಿ ಮನೆಬಿಟ್ಟು ತಿರುಗುತ್ತಾನೆ. ಸುದೈವದಿಂದ ಆತನಿಗೆ ಗುರುವೊಬ್ಬ ದೊರೆತು ಅವನ ಜೀವನಕ್ಕೆ ಒಂದು ದಿಕ್ಕು ಸಿಗುತ್ತದೆ. ಸಂಗೀತದಲ್ಲಿ ಅವನು ಗಳಿಸುವ ಸಿದ್ಧಿ ತಕ್ಕಂತೆ ಅವನಿಗೆ ಧನ, ಕೀರ್ತಿ ಎರಡೂ ಲಭಿಸುತ್ತದೆ. ಆದರೆ ಅವು ಅವನ ಅಂತರಂಗವನ್ನು ಮುಟ್ಟುವುದಿಲ್ಲ. ಭ್ರಷ್ಟಗೊಳಿಸುವುದಿಲ್ಲ. ಈ ಧನ ಮತ್ತು ಕೀರ್ತಿ ಈ ಎರಡು ಸುಬ್ಬಣ್ಣನಿಗೂ ಸಹ ಕಾಲ ಕ್ರಮದಲ್ಲಿ ದೊರೆಯುತ್ತವೆಯಾದರೂ ಅಲ್ಲಿಯು ಸಹ ಇವುಗಳು ಯಾವುದೇ ರೀತಿಯ ಪರಿಣಾಮವನ್ನು ಉಂಟು ಮಾಡುವುದಿಲ್ಲ. ಈ ವಿಷಯದಲ್ಲಿ ಸುಬ್ಬಣ್ಣ ಮತ್ತು ಲಕ್ಷ್ಮಣ ಸೌಮ್ಯತೆಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ 'ಸಂಧ್ಯಾರಾಗ' ಕಾದಂಬರಿಯನ್ನೊದುವಾಗ ಕೊನೆಯ ವರೆಗೂ ನಮ್ಮ ಕಣ್ಮುಂದೆ ಬಂದು ನಿಲ್ಲುವ ವ್ಯಕ್ತಿಯೆಂದರೆ ಆದರ್ಶಕಲಾವಿದ ಲಕ್ಷ್ಮಣ ಹೆಜ್ಜೆ ಹೆಜ್ಜೆಗೂ ಅವನ ಆದರ್ಶ ಓದುಗರಿಗೆ ಎದ್ದು ಕಾಣುತ್ತದೆ. ಕಾದಂಬರಿಯ ಕೊನೆಯವರೆಗೂ ಅವನು ಓದುಗರಿಂದ ಹಿರಿಮೆಯನ್ನು ಪಡೆಯುತ್ತಾನೆ. ಒಂದು ರೀತಿಯಲ್ಲಿ ನೋಡಿದರೆ ಅವನೇ ಕಾದಂಬರಿಯ ಜೀವಾಳ ಈ ಪಾತ್ರದಲ್ಲಿ ಮೂಲಕ ಕಾದಂಬರಿಕಾರರ ಆಶಯ ವ್ಯಕ್ತವಾಗುತ್ತದೆ. ಅದೇ ರೀತಿ ಸುಬ್ಬಣ್ಣ ಕಾದಂಬರಿಯ ನಾಯಕನ ಮೂಲಕ ಮಾಸ್ತಿಯವರು ತಮ್ಮ ಧೋರಣೆ ಮತ್ತು ಆಶಯಗಳನ್ನು ವ್ಯಕ್ತ ಪಡಿಸಿದ್ದಾರೆ.

ಸುಬ್ಬಣ್ಣನ ಸಾಧನೆಗೆ ಪೂರಕವಾಗಿ ಬರುವಂತಹ ಪಾತ್ರವೆಂದರೆ ನೀಲಸಾನಿಯ ಪಾತ್ರ ನೀಲಸಾನಿ ಸುಬ್ಬಣ್ಣನನ್ನು ದೇವರೆಂದೇ ಭಾವಿಸಿದ್ದಳು ದೂರದಲ್ಲಿಯೇ ನಿಂತು ನಡೆದು ಅವನನ್ನು ಆರಾಧಿಸುತ್ತಿದ್ದಳು? ಅವನಿಗೆ ಅವಶ್ಯಕವಾದಗಲೆಲ್ಲ. ಹಣವನ್ನು ಆನಂದದಿಂದ ಕೃತಜ್ಞತೆಯಿಂದ ಕೊಟ್ಟವಳು ಆತ ಕಲ್ಕತ್ತೆಯಿಂದ ಆ ಹಣವನ್ನು ತಿರುಗಿ ಕಳುಹಿಸಿದಾಗ ಅದನ್ನು ದೇವರ ಪೆಟ್ಟಿಗೆಯಲ್ಲಿ ಇಟ್ಟು ಪೂಜಿಸಿದಳು ಇವರಿಬ್ಬರ ಸಂಬಂಧ ಅನ್ಯೋನ್ಯವಾದುದು.

ಆದರೆ ಇಷ್ಟಕ್ಕೆ ಅವರ ಸಂಬಂಧವನ್ನು ಮುಗಿಸಿಲ್ಲ ಮಾಸ್ತಿಯವರು ಮನೆಯಲ್ಲಿ ಸಾಂಪ್ರದಾಯಿಕ

ಕಟ್ಟು ಪಾಡಿನ ಸಂಕೋಚ ಸಂಕೋಲೆಗಳ ನಡುವೆ ಅವನಿಗೆ ಸಿಗದೆ ಹೋದ ಶುಶ್ರುಷೆ ನೀಲಾಸಾನಿಯಲ್ಲಿ ಅವನಿಗೆ ಸಿಗುತ್ತಿತ್ತು ಎಂಬುದನ್ನು ಅವರು ಹೀಗೆ ಸೂಚಿಸಿದ್ದಾರೆ.

ಸುಬ್ಬಣ್ಣನಿಗೆ ಸಂಸಾರದ ಸುಖದ ಮೇಲೆ ಮನಸ್ಸು ಅಷ್ಟಾಗಿ ಹೋಗಿರಲಿಲ್ಲ ಸ್ತ್ರೀಯಿಂದ ಅವನು ನೀಲಸಾನಿಯ ಮನೆಯಲ್ಲಿ ಪಡೆಯುತ್ತಿದ್ದನ್ನು ನೀಲಸಾನಿ ಜೀವನದ ಒಂದು ಭಾಗವಾಗಿದ್ದಳು. ಕಾದಂಬರಿಕಾರರು ಈ ಪಾತ್ರದಲ್ಲಿ ದೈವತ್ವವನ್ನು ಕಾಣಿಸುತ್ತಾರೆ ಕಾದಂಬರಿಕಾರರಿಗೆ ಹೆಣ್ಣಿನ ಬಗ್ಗೆ ಇರುವ ಗೌರವ ಎಂಥದ್ದು ಎಂಬುದಕ್ಕೆ ಈ ಪಾತ್ರ ಸಾಕ್ಷಿಯಾಗಿದೆ ಕಸವನ್ನು ರಸ ಮಾಡಿದಂತೆ ನೀಲಸಾನಿಯ ಪಾತ್ರಕ್ಕೆ ಮಹತ್ತನ್ನು ಕೊಟ್ಟಿದ್ದಾನೆ.

ಈ ಪಾತ್ರವನ್ನು ನೋಡಿದಾಗ ಇದಕ್ಕೆ ಸಮನಾದ ಪಾತ್ರ ಸಂಧ್ಯಾರಾಗದಲ್ಲಿ ಇಲ್ಲ ಈ ಪಾತ್ರ ಭಿನ್ನವಾದ ಪಾತ್ರವಾಗಿದೆ ಇದಕ್ಕೆ ಸಂಧ್ಯಾರಾಗದಲ್ಲಿ ಹೋಲಿಕೆ ಇರುವ ಪಾತ್ರ ಯಾವುದು ಇಲ್ಲವೆಂದರು ಶಾಮಣ್ಣನ ಪಾತ್ರ ಸ್ವಲ್ಪ ನೀಲಸಾನಿಯ ಸ್ವಭಾವ, ಗುಣವನ್ನು ಉಳ್ಳ ಪಾತ್ರವಾಗಿದೆ. ಸುಬ್ಬಣ್ಣನಿಗೆ ನೀಲ ಸಂಗೀತಕ್ಕೆ ನೆರವಾದಂತೆ ಶಾಮಣ್ಣ ನವರು ಲಕ್ಷ್ಮಣ ಸಂಗೀತ ಅಭ್ಯಾಸಕ್ಕೆ ಸಹಾಯಕರಾಗುತ್ತಾರೆ. ಆದರೂ ನೀಲಾಸಾನಿಯ ಪಾತ್ರ ಮಾಸ್ತಿಯವರ ವಿಶಾಲ ಮನಸ್ಸಿನ ಸೃಷ್ಟಿಯಾಗಿದೆ.

ಸುಬ್ಬಣ್ಣ ಕಾದಂಬರಿಯ ಮತ್ತೆರಡು ಪಾತ್ರಗಳೆಂದರೆ ಸುಬ್ಬಣ್ಣನ ತಾಯಿ ಮತ್ತು ತಂದೆಯ ಪಾತ್ರಗಳು ಸುಬ್ಬಣ್ಣನ ಸಂಗೀತ ಸಾಧನೆಗೆ ತಂದೆ ಪ್ರತಿಕೂಲವಾಗಿ ಕಂಡು ಬಂದರೆ ತಾಯಿಯಂತು ವೈರಿಯಂತೆ ಕಂಡು ಬರುತ್ತಾಳೆ. ಸೊಸೆಯನ್ನು ವೈರಿಯಂತೆ ಕಾಡಿದಳು. ಮಾಸ್ತಿಯವರು ತಮ್ಮ ಸ್ವಭಾವ ಸಹಜವಾದ ಅನುಕಂಪೆಯಾದ ಆಕೆ ತಿಳಿಯದ ಹೆಂಗಸು ಎಂದು ಓದುಗರಲ್ಲಿ ಅವಳ ಪರವಾಗಿ ಸಮರ್ಥನೆ ಮಾಡಿದಂತಿದೆ. ಆದರಂ ಗೌರೀಶ್ ಕಾಯ್ಕಿಣಿ ಯವರು ಆಕೆ ತಿಳಿಯದವಳಾಗಿದ್ದಿಲ್ಲ ಕ್ಷುಲ್ಲಕ ಮನಸ್ಸಿನ ಸಣ್ಣ ಬುದ್ದಿಯ ಹೆಂಗಸಾಗಿದ್ದಳು ಎಂದಿದ್ದಾರೆ. ಯಜಮಾನಿಯ ದೌಷ್ಟ್ಯ ದೌರ್ಬಲ್ಯವಲ್ಲವೆಂಬುದು ಅಡಿಗಡಿಗೆ ಸ್ಪಷ್ಟವಾಗುತ್ತದೆ ಬಳ್ಳಿಯಿಂದ ಕಾಯಿ ದೂರವಾಗುವಂತೆ ಸುಬ್ಬಣ್ಣ ತಾಯಿಯಿಂದ ದೂರವಾಗುತ್ತಾನೆ. ಊರಿನಿಂದಲೂ ದೂರ ಹೋಗುತ್ತಾನೆ.

ಇಲ್ಲಿ ನಾವು ಸಂಧ್ಯಾರಾಗದ ನಾಯಕನಾದ ಲಕ್ಷ್ಮಣ ತಾಯಿಯನ್ನ ಸುಬ್ಬಣ್ಣನ ತಾಯಿಯ ಜೊತೆ ಹೋಲಿಸಿದಾಗ ಈ ಎರಡು ಪಾತ್ರಗಳು ವಿರುದ್ದ ದಿಕ್ಕಿನಲ್ಲಿ ನಿಲ್ಲುತ್ತವೆ. ಸುಬ್ಬಣ್ಣನ ತಾಯಿ

ಮಗನ ಸಂಗೀತವನ್ನು ಪ್ರೋತ್ಸಾಹಿಸುವುದಿಲ್ಲ ಮತ್ತು ಸೊಸೆಯನ್ನು ಶತ್ರುವಿನ ರೀತಿ ನೋಡುತ್ತಾಳೇ ಆದರೆ ಸುಬ್ಬಣ್ಣನ ತಾಯಿಗೆ ಎಲ್ಲಾ ರೀತಿಯಲ್ಲೂ ವಿರುದ್ದವಾದ ಹೀಗೆ ಮೀನಾಕ್ಷಮ್ಮ ಮಗನ ಮೇಲೆ ಪ್ರಾಣವನ್ನೆ ಇಟ್ಟುಕೊಂಡಿದ್ದು ಸದಾ ಮಗ ಸೊಸೆ ಆನಂದದಿಂದ ಇರಬೇಕು ಎಂದು ಭಾವಿಸುವ ವ್ಯಕ್ತಿತ್ವ ಮಿನಾಕ್ಷಮ್ಮನದು.

ಒಟ್ಟಾರೆ ಸುಬ್ಬಣ್ಣನ ತಾಯಿಯ ಸ್ವಭಾವಕ್ಕೆ ಹೊಂದದ ಪಾತ್ರ ಲಕ್ಷ್ಮಣನ ತಾಯಿ ಮೀನಾಕ್ಷಮ್ಮನ ಪಾತ್ರ ಆದರೆ ಮಾಸ್ತಿ ಹೇಳುವ ಮಾತನ್ನು ಗಮನಿಸಿದರೆ ಎಲ್ಲೂ ಒಂದು ಕಡೆ ಸುಬ್ಬಣ್ಣ ತಾಯಿಯು ಒಳ್ಳೆಯವಳು ಆದರೆ ಪರಿಸ್ಥಿತಿಯನ್ನು ತಿಳಿಯುವ ತಾಳ್ಮೆ ಸ್ವಭಾವ ಇರಲಿಲ್ಲವೆನಿಸುತ್ತದೆ.

ಸುಬ್ಬಣ್ಣನ ತಂದೆ ನಾರಾಯಣಶಾಸ್ತ್ರಿ ಸಂಗೀತವನ್ನು ವಿರೋಧಿಸುತ್ತಾರೆ. ಆದರ ವಿರೋಧಿಸುವ ಅಗತ್ಯವಿರಲಿಲ್ಲ. ಎಂಬುದು ಏಕೆಂದರೆ ತಂದೆಯ ಪರಂಪರ್ಯದ ಪುರಾಣಧಂತೆ ಮಗನ ಸಂಗೀತವನ್ನು ಮಹಾರಾಜರು ಮೆಚ್ಚಿ ಶ್ಲಾಘಿಸಿ ಉಡುಗೊರೆ ಕೊಟ್ಟು ಖಿಲ್ಲತ್ತನ ಆಸೆಯನ್ನು ಸುಬ್ಬಣ್ಣನ ಮನಸ್ಸಿನಲ್ಲಿ ಬಿತ್ತಿದ್ದರು. ಅಂದಾಗ ನಾರಾಯಣಶಾಸ್ತ್ರಿಗಳು, ಮಗ ಕೆಟ್ಟು ಹೋಗುವನೆಂದು ಕಳವಳ ಪಡಬೇಕಾಗಿದ್ದಿಲ್ಲ. ಇಲ್ಲಿ " ತಂದೆಯ ವಿರೋಧ ಅಥವಾ ಪ್ರತಿಕೂಲ ಮುಂದೆ ಮಗನ ಹಠವನ್ನು ಹುರಿಗೊಳಿಸುವುದಕ್ಕೆ ಮಾತ್ರ ಕಥಾ ನಿರ್ವಹಣೆಯಲ್ಲಿ ನೆರವಾಗುತ್ತದೆ." ಏಕೆಂದರೆ ತನ್ನ ಮಗ ಏನು ಮಾಡುತ್ತಾನೆ? ದಿನದ ಬಹುಭಾಗ ಎಲ್ಲಿ ಹೇಗೆ ಕಳೆಯುತ್ತಾನೆಂಬುದರ ಅರಿವು ಪರಿವೆ ತನಿಖೆ ಏನನ್ನು ನಾರಾಯಣ ಶಾಸ್ತ್ರೀಗಳು ಮಾಡಿದಂತೆ ಇಲ್ಲ ಎಂದು ಗೌರೀಶ್ ಕಾಯ್ಕಿಣಿ ಅಭಿಪ್ರಾಯ ಪಟ್ಟಿದ್ದಾರೆ.

ಆದರೆ 'ಸಂಧ್ಯಾರಾಗ' ದ ಲಕ್ಷ್ಮಣನ ತಂದೆ ಶ್ರೀನಿವಾಸರಾಯರು ಸುಬ್ಬಣ್ಣನ ತಂದೆಯಂತೆ ಮಗನ ಸಂಗೀತವನ್ನು ವಿರೋಧಿಸುವುದಿಲ್ಲ ಅದಕ್ಕೆ ಬದಲಾಗಿ ಇದು ಅವನ ಪೂರ್ವಾರ್ಜಿತ ಕರ್ಮ ಎಂದು ಹೇಳಿ ತಟಸ್ಥವಾಗಿ ಇದ್ದು ಬಿಡುತ್ತಾರೆ.

ಸುಬ್ಬಣ್ಣನ ಹೆಂಡತಿಯಾದ ಲಲಿತಮ್ಮನನ್ನು ನಾವು ಕಣ್ಣಿಂದ ನೋಡುತ್ತೇವೆ. ಎನ್ನುವುದಕ್ಕಿಂತ ಮನಗಾಣುತ್ತೇವೆ. ಆಕೆಯ ಪಾತ್ರ ಸ್ಫುಟವಲ್ಲ. ಮನುಷ್ಯ ಆಯುಸ್ಸನ್ನು ಎಲ್ಲಿಬೇಕಾದರೂ ಕಳೆಯಬಹುದು. ಆದರೆ ಹೀಗೆ ಆಯುಸ್ಸನ್ನು ಕಳೆಯುವುದಕ್ಕೆ ಸರಿಯಾದ ರೀತಿಯನ್ನು ಹುಡುಕುವುದರಲ್ಲಿ ಈ ರೀತಿಯನ್ನು ಸುಬ್ಬಣ್ಣ ಕಲಿತದ್ದು ಯಾತರಿಂದ? ಸಂಗೀತದಿಂದಲೇ? ಅಲ್ಲವೆ ಅಲ್ಲ. ಅವನ ಬಾಳನ್ನು

ತಿದ್ದಲು ಬಂದ ದೇವಿಯ ಅವತಾರ ಲಲಿತೆ ಕಲಿಸಿಕೊಟ್ಟ ಪಾಠ ಚಿತ್ತದ ಏಕಾಗ್ರತೆ.

ಸಂಧ್ಯಾರಾಗದ ನಾಯಕ ಲಕ್ಷ್ಮಣನ ಸಂಗೀತ ಸಾಧನೆಗೆ ಪೂರಕವಾಗಿ ಬರುವ ಪಾತ್ರವೆಂದರೆ ಆತನ ಹೆಂಡತಿ 'ಜಯಾ' ಇಲ್ಲೇ ನಾವು ಸುಬ್ಬಣ್ಣ ಕಾದಂಬರಿಗೂ ಸಂಧ್ಯಾರಾಗ ಕಾದಂಬರಿಗೂ ವ್ಯತ್ಯಾಸವನ್ನು ಕಾಣಬಹುದಾಗಿದೆ. 'ಸುಬ್ಬಣ್ಣ' ದಲ್ಲಿ ಆತನ ಹೆಂಡತಿ ಸುಬ್ಬಣ್ಣನ ಸಂಗೀತಕ್ಕೆ ಸಹಾಯಕಳಾಗಿ ಬರುವುದಿಲ್ಲ. ಆದರೆ ಲಕ್ಷ್ಮಣನಿಗೆ ಜಯಾ ಕೊನೆಯವರೆಗೂ ಸಹಾಯಕಳಾಗಿ ಸ್ಪೂರ್ತಿಯಾಗಿ ಕಂಡು ಬರುತ್ತಾಳೆ. ಹಾಗೆಂದು ಸುಬ್ಬಣ್ಣನ ಹೆಂಡತಿ ಸುಬ್ಬಣ್ಣನ ಸ್ವಭಾವಕ್ಕೆ ವಿರೋಧವಾದ ಹೆಂಡತಿಯಲ್ಲ ಈ ಮೊದಲೇ ಹೇಳಿದಂತೆ ಆಕೆ ಸುಬ್ಬಣ್ಣನಿಗೆ ಚಿತ್ರದ ಏಕಾಗ್ರತೆ ತಿಳಿಸಿದವಳು ಲಲಿತೆ ನನ್ನ ಜೀವನದ ಸಂಸ್ಕಾರದಿಂದ ಗಂಡನನ್ನು ದೇವರೆಂದು ಭಾವಿಸಿ ಆರಾಧಿಸುವ ಅವನನ್ನೂ ದೈವತ್ವದ ಹಾದಿಗೆ ಹಚ್ಚಿದಳು. ಹಾಗೆ ಲಕ್ಷ್ಮಣನ ಹೆಂಡತಿ ಜಯಾ ಲಕ್ಷ್ಮಣನ ಸಂಗೀತದ ಸಾಧನೆಗೆ ಸ್ಫೂರ್ತಿ ಸಾಧನೆಗೆ ನಿಂತಳು. ಅವಳು ತೀರಿಹೋದ ಮೇಲು ಗಂಡನ ಸಂಗೀತ ಜ್ಞಾನವನ್ನು ಎಚ್ಚರಿಸಿದ ಉತ್ತಮ ಗೃಹಿಣಿ ಜಯಾ.

ಒಟ್ಟಾರೆ ಎರಡು ಕಾದಂಬರಿಗಳಲ್ಲಿ ಮೂಡಿ ಬಂದಿರುವ ಈ ಎರಡು ಪಾತ್ರಗಳು ಅದ್ಭುತವಾದ ಪಾತ್ರಗಳಾಗಿ ನಿಂತಿವೆ.

'ಸಂಧ್ಯಾರಾಗ'ದ ಪಾತ್ರಗಳನ್ನು ನಾವು ಸಮಾಜದ ಸುತ್ತುನೋಡುತ್ತಿರುತ್ತೇವೆ. ರಾಮಚಂದ್ರ ನಂತಹ ಅಸೂಯಪರ ಜೀವಿಗಳು ಒಂದು ಸಂಸಾರದಲ್ಲಿ ಅಶಾಂತಿಯನ್ನೆಬ್ಬಿಸಿ ವಿಭಕ್ತ ಕುಟುಂಬಕ್ಕೆ ಕಾರಣವಾಗುವುದು ಸಮಾಜದಲ್ಲಿ ಸರ್ವೇ ಸಾಮಾನ್ಯ ವಿಷಯ.

ಕೌಟುಂಬಿಕ ಜೀವನದಲ್ಲಿ ಸವತಿಯರ ವಾರಗಿತ್ತಿಯರ, ಪರಸ್ಪರ ಸಂಬಂಧಗಳು ದೊಡ್ಡ ತೊಡಕಾಗಿ ಬಂಡೆಗಲ್ಲುಗಳಾಗಿ ಕೂತಿವೆ. ಕಲಾವಿದನ ಜಾಣ್ಮೆಯಿಂದ ಸಾಹಿತಿಯ ಮುನ್ನೋಟದಿಂದ ಈ ಸಮಸ್ಯೆಯನ್ನು ಲೇಖಕರು ಹೃದಯಾಂಗಮವಾಗಿ ಬಿಡಿಸಲು ಸಾಹಸ ಪಟ್ಟಿದ್ದಾರೆ.

ಮಾಸ್ತಿಯವರು ಸುಬ್ಬಣ್ಣ, ಲಲಿತಮ್ಮ ಇವರ ಪಾತ್ರದಲ್ಲಿ ನಾವು ಯಾವುದನ್ನು ಭಾರತೀಯ ಸಂಸ್ಕೃತಿ ಎನ್ನುತೇವೆಯೋ ಅದನ್ನು ಮಾನವ ಸ್ವಭಾವದ ಎರಕದಲ್ಲಿ ಹೊಯ್ದು ಸೊಗಸಾಗಿ ಮೂರ್ತಿಗಳನ್ನು ಸೃಷ್ಟಿಸಿದ್ದಾರೆ. ಸಂಧ್ಯಾರಾಗದಲ್ಲಿ ಅ.ನ.ಕೃ.ಮೀನಾಕ್ಷಮ್ಮ ಸಾವಿತ್ರಮ್ಮ ಇವರ ಪಾತ್ರಗಳಲ್ಲಿ ಭಾರತ ಸಂಸ್ಕೃತಿ ದೇವಿಪ್ಯ ಮಾನವಾಗಿ ಬೆಳಗುವುದನ್ನು ಚಿತ್ರಿಸಿದ್ದಾರೆ.

'ಲಕ್ಷ್ಮಣ' ಬದುಕನ್ನು ತ್ಯಜಿಸಿ ಕಲೆಯುತ್ತ ಸಾಗುತ್ತಾನೆ ಕಲೆಯನ್ನೆ ಆರಾಧಿಸುತ್ತಾನೆ. ಆದರೆ 'ಸುಬ್ಬಣ್ಣ' ಕಲೆಯತ್ತ ಸಾಗಿ ಮತ್ತೆ ಬದುಕಿನಡೆಗೆ ಬರುತ್ತಾನೆ. ಕಾದಂಬರಿಕಾರರ ಭಿನ್ನತೆಯನ್ನು ಇಲ್ಲಿ ನೋಡಬಹುದಾಗಿದೆ. ಅ.ನ.ಕೃ. ಅವರು ಸಂಧ್ಯಾರಾಗದಲ್ಲಿ ನಾಯಕನನ್ನು ಆಧ್ಯಾತ್ಮದೆಡೆಗೆ ಕೊಂಡೊಯ್ದುರೆ, ಮಾಸ್ತಿಯವರು ಸುಬ್ಬಣ್ಣನನ್ನು ಲೌಕಿಕತೆಗೆ ಕೊಂಡೋಯ್ಯುತ್ತಾರೆ.

ಮಾಸ್ತಿಯವರು ಬದುಕಿನ ವಾಸ್ತವತೆಯನ್ನು ಕಟ್ಟಿಕೊಡುತ್ತಾರೆ. ಆದರೆ ಅ.ನ.ಕೃ. ಅವರು ಕಲಾವಿದನ ಸಾಧನೆಯನ್ನು ಕುರಿತು ಹೇಳುತ್ತಾರೆ. ಅವು ಕಾದಂಬರಿಕಾರರ ದೋರಣೆಯೇ ಆಗಿದೆ.

ಸನ್ನೀವೇಶ ದೃಷ್ಟಿಯಿಂದ.

ಸುಬ್ಬಣ್ಣ ಬಾಳಿನಲ್ಲಿ ಒದಗಿದ ಸನ್ನಿವೇಶ ಸಂದರ್ಭಗಳಿಗೆ ಸಿಡಿದು ನಿಂತವನು. ಇದಕ್ಕೆ ಉದಾಹರಣೆಯೆಂದರೆ, ಸುಬ್ಬಣ್ಣನ ತಾಯಿ ತನ್ನ ಹೆಂಡತಿ ಮಕ್ಕಳಿಗೆ ಮೊಸರು ನೀಡಲಿಲ್ಲ. ಮತ್ತು ಹೆಂಡತಿಗೆ ಹಿಂಸೆಯಾಗುತ್ತಿರುವುದನ್ನು ನೋಡಿ ಎಚ್ಚೆತ್ತುಕೊಂಡು ಆಕೆಯನ್ನು ಬೇರೆ ಊರಿಗೆ ಕರೆದುಕೊಂಡು ಹೋಗುತ್ತಾನೆ. ಆದರೆ 'ಸಂಧ್ಯಾರಾಗ' ದ 'ಲಕ್ಷ್ಮಣ' ಸನ್ನಿವೇಶದಿಂದ ಸಿಡಿದು ನಿಲ್ಲುವುದಿಲ್ಲ ಬದಲಾಗಿ ಒಪ್ಪಿಕೊಮಡು ಬದುಕುತ್ತಾನೆ. ಇದಕ್ಕೆ ಉದಾಹರಣೆ ಎಂದರೆ ರಾಮಚಂದ್ರನ ದಬ್ಬಾಳಿಕೆಯಿಂದ ಮನೆಯಲ್ಲಿ ಜಯಾಳಿಗೆ ಎಷ್ಟು ಹಿಂಸೆಯಾದರೂ ಅದರ ಬಗ್ಗೆ ನೊಂದುಕೊಳ್ಳುತ್ತಾನೆಯೇ ಹೊರತು ಯಾವುದೇ ಚಕಾರ ಎತ್ತುವುದಿಲ್ಲ.

ಸುಬ್ಬಣ್ಣ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡು ಬೇಸರದಿಂದ ಕೊನೆಗೆ ಪಿಟೀಲನ್ನು ನೀರಿಗೆ ಬಿಟ್ಟು ಬಂದು ಮಲಗುತ್ತಾನೆ. ಬೆಳಿಗ್ಗೆ ಎದ್ದು ನೋಡುವಾಗ ಆ ಪಿಟೀಲು ವೆಂಕಟರಮಣನ ಸಹಾಯದಿಂದ ತನ್ನ ಕಣ್ಣ ಮುಂದೆಯೇ ಇರುತ್ತದೆ. ಈ ಸನ್ನಿವೇಶ ಕಾದಂಬರಿಯಲ್ಲಿ ಸಹಜವಾಗಿಯೇ ಬಂದಿದೆ. ಪಿಟೀಲನ್ನು ನೋಡಿದಾಗ ಸುಬ್ಬಣ್ಣಯಾವ ಉದ್ವೇಗಕ್ಕೂ ಒಳಗಾಗದೆ ಸಹಜವಾಗಿಯೇ ಅದನ್ನು ತೆಗೆದುಕೊಳ್ಳುತ್ತಾನೆ.

ಆದರೆ ಲಕ್ಷ್ಮಣ ತನ್ನ ಹೆಂಡತಿ ಜಯಾಳನ್ನು ಕಳೆದುಕೊಂಡು ಬೇಸರದಿಂದರುತ್ತಾನೆ. ಆದರೆ ಜಯಾ ಮತ್ತೆ ಮತ್ತೆ ಕನಸಿನಲ್ಲಿ ಬಂದು ಲಕ್ಷ್ಮಣನನ್ನು ಎಚ್ಚರಿಸುತ್ತಾಳೆ. ಕಾದಂಬರಿಯಲ್ಲಿ ಈ ಸನ್ನಿವೇಶ ಕೃತಕವಾಗಿದೆ. ಎನಿಸುತ್ತದೆ ಯಾಕೆಂದರೆ ಸತ್ತವರು ಕನಸಿನಲ್ಲಿ ಬಂದು ಹೇಗೆ ಹೇಳು

ಸಾಧ್ಯ ಇದು ಕಲ್ಪನೆ ಎಂದೇ ತಿಳಿಯುತ್ತದೆ ಅಥವಾ ಹೀಗೂ ಹೇಳಬಹುದು. ಸುಪ್ತ, ಮನಸ್ಸಿನ ಭಾವಗಳು ಭ್ರಮೆಯಾಗಿ ಕಾಡುತ್ತದೆ. ಇಲ್ಲಿ ಈ ಎರಡು ಸನ್ನಿವೇಶಗಳ ನಡುವೆ ಸಮ್ಯತೆ ಇಲ್ಲವಾದರು ವ್ಯತ್ಯಾಸವಿರುವುದನ್ನು ನೋಡಬಹುದಾಗಿದೆ ಜಯಾಳನ್ನು ಸದಾ ಮನಸ್ಸಿನಲ್ಲಿ ಇಟ್ಟು ಪ್ರೀತಿಸುತ್ತಿದ್ದ ಲಕ್ಷ್ಮಣನಿಗೆ ಅವಳು ಸತ್ತಿದ್ದರು ತನ್ನನ್ನು ಎಚ್ಚರಿಸುತ್ತಾಳೆ ತನ್ನ ಸಾಧನೆಗೆ ಪೂರಕವಾಗಿಯೇ ತನ್ನ ಜೊತೆಯಲ್ಲೇ ಇರುವಳು ಎಂದು ಭಾವಿಸಿದಂತೆ ತೋರುತ್ತದೆ.

ಲಲಿತೆ ತನ್ನ ಕೆನ್ನೆಗೆ ಹೊಡೆದ ಸುಬ್ಬಣ್ಣನ ಕೈಯನ್ನು ಮುತ್ತಿಟ್ಟು ಸನ್ನಿವೇಶ ಕಾದಂಬರಿಯಲ್ಲಿ ಹೃದಯಂಗಮವಾದ ಸನ್ನಿವೇಶವಾಗಿದೆ.

ರಾಮಚಂದ್ರ ತನ್ನ ಅಧಿಕಾರದ ದಬ್ಬಾಳಿಕೆಯಿಂದ ಲಕ್ಷ್ಮಣನಿಗೆ ಹಿಂಸೆಯನ್ನು ಕೊಡುತ್ತಾನೆ. ಇದರಿಂದ ಲಕ್ಷ್ಮಣ ಮನೆ ಬಿಟ್ಟು ಹೋದ, ಹೆಂಡತಿಯನ್ನು ಕಳೆದುಕೊಂಡು ಹುಚ್ಚನಂತೆ ಅಲೆಯುತ್ತಾನೆ. ಆದರೆ ರಾಮಚಂದ್ರ ತಾನು ಜೀವನದಲ್ಲಿ ಕೆಳಮಟ್ಟಕ್ಕೆ ಬಂದಾಗ ತನ್ನ ತಪ್ಪಿನ ಅರಿವಾಗಿ ಲಕ್ಷ್ಮಣನ ಬಗ್ಗೆ ಕನಿಕರ ಬಂದು ಆತನ ಸಾಧನೆಗೆ ಸಹಾಯ ಮಾಡಲು ಮುಂದಾಗುತ್ತಾನೆ.

ಇಂಥದ್ದೇ ಸನ್ನಿವೇಶ ಸುಬ್ಬಣ್ಣದಲ್ಲೂ ಕಂಡು ಬರುತ್ತದೆ. 'ಸಂಧ್ಯಾರಾಗ' ದಲ್ಲಿ ಅಣ್ಣ ತಮ್ಮಂದಿರ ನಡುವೆ ಈ ಸಂದರ್ಭ ಉಂಟಾದರೆ 'ಸುಬ್ಬಣ್ಣ' ದಲ್ಲಿ ಅತ್ತೆ ಸೊಸೆಯರ ನಡುವೆ ಉಂಟಾಗುತ್ತದೆ ಎದುರಿಗಿದ್ದಾಗ ಬಹಳ ಕಷ್ಟಕೊಟ್ಟು ಆಕೆ ಮರೆಯಾದಾಗ ಆಕೆಯನ್ನು ಅರ್ಥ ಮಾಡಿಕೊಂಡು ಅವಳಿಗಾಗಿ ಕಣ್ಣೀರು ಸುರಿಸುತ್ತಾರೆ ಅಂಥ ಸೊಸೆಯಾಡನೆ ಸಂಸಾರ ಮಾಡುವ ಭಾಗ್ಯ ತನಗಿಲ್ಲವಲ್ಲ ಎಂದು ಪಶ್ಚಾತ್ತಾಪ ಪಡುತ್ತಾರೆ ಇಲ್ಲಿ ಮಾಸ್ತಿಯವರು ಆಕೆಯ ಪರವಾಗಿ ಒಂದು ಮಾತು ಹೇಳಿದ್ದಾರೆ "ಮಾತು ಕಠಿಣವಾಗಿದ್ದರೂ, ನಡತೆ ಕಠಿಣವಾಗಿದ್ದರೂ, ಅವರು ಮನಸ್ಸಿನಲ್ಲಿ ಕಠಿಣರಾದವರಲ್ಲವೆಂದು ತೋರುತ್ತದೆ" ಎಂದಿದ್ದಾರೆ.

ಇಲ್ಲಿ ಸುಬ್ಬಣ್ಣ ತಾಯಿಯ ಕಠಿಣ ನಡವಳಿಕೆಗಿಂತ ರಾಮಚಂದ್ರನ ನಡವಳಿಕೆ ಬಹಳ ಕಠಿಣವಾಗಿದೆ. ಇವನ ಈ ನಡವಳಿಕೆಯಿಂದ ಲಕ್ಷ್ಮಣನ ಹೆಂಡತಿ ಜಯಾ ಪ್ರಾಣವನ್ನೆ ಕಳೆದುಕೊಳ್ಳಬೇಕಾಗುತ್ತದೆ. ಒಂದು ರೀತಿಯಲ್ಲಿ ಸುಬ್ಬಣ್ಣ ಮನೆ ಬಿಡುವುದಕ್ಕೆ ಸುಬ್ಬಣ್ಣನ ತಾಯಿ ಕಾರಣಳಾದರು ಸುಬ್ಬಣ್ಣ ಮುಂದಿನ ದುರಂತಗಳಾಗಿದೆ. ಅವನ ತಾಯಿ ಕಾರಣಗಳಾಗುವುದಿಲ್ಲ.

ಒಟ್ಟಾರೆ ಎರಡು ಸನ್ನಿವೇಶವು ಎರಡು ಕಾದಂಬರಿಯಲ್ಲಿ ಮುಖ್ಯವಾದವುಗಳಾಗಿದ್ದು, ಕಾದಂಬರಿ ಬೆಳೆಯುವುದಕ್ಕೆ ಈ ಸನ್ನಿವೇಶಗಳು ಮುಖ್ಯ ಕಾರಣವಾಗುತ್ತವೆ.

ಸುಬ್ಬಣ್ಣ ಪಿಟೀಲನ್ನು ಹೊಳೆಯಲ್ಲಿ ಹಾಕಿದ ಸನ್ನಿವೇಶವನ್ನು ತಮ್ಮ ಕಲಾತ್ಮಕತೆಗೆ ಒಪ್ಪುವಂತೆ ಹೆಚ್ಚು ಕೌಶಲದಿಂದ ಕೋಮಲತೆಯಿಂದ ಚಿತ್ರಿಸಿದ್ದಾರೆ. ತನಗೇಕೆ ವಿದ್ಯೆಯ ಜಂಭ? ಎಂದು ಉತ್ಥಾನ ವೃತ್ತಿಯಲ್ಲಿ ಸುಬ್ಬಣ್ಣ ಹೊಳೆಯ ಕಡೆಗೆ ಹೋಗಿ ಪಿಟೀಲನ್ನು ಒಡೆಯಲು ಮನಸ್ಸು ಬಾರದೆ ಅದನ್ನು ತೇಲಿ ಬಿಡುತ್ತಾನೆ. ಇಲ್ಲಿಗೆ ಋಣ ಮುಗಿಯಿತು. ಎಂದು ಅನಂತರ ತಡೆಯಲಾರದ ಅಳುತ್ತಾರೆ. ಅವರು ಯಾವ ರೀತಿಯಲ್ಲಿ ದು:ಖಕ್ಕೆ ಒಳಗಾಗುತ್ತಾರೆ. ಎಂಬುದಕ್ಕೆ ಕಾದಂಬರಿಯಲ್ಲಿಯೇ ಇದೆ "ನನ್ನ ಹೆಂಡಿ ಹೋದಾಗಲು ಮಕ್ಕಳು ಹೋದಾಗಲು ಕೂಡ ನಾನು ಅಷ್ಟು ಅಳಲಿಲ್ಲ ನೋಡಿ ಹಾಗೆ ಅತ್ತುಬಿಟ್ಟೆ ನನ್ನ ಪ್ರಾಣ ತೆಗೆದು ಕಳಚಿ ಎಸೆದ ಹಾಗೆ ಆಗಿ ಹೋಯಿತು. ಆ ಪಿಟೀಲು ಎಸೆದಾಗ" ಈ ರೀತಿಯ ಒಂದು ಸಂಕಟ ಸುಬ್ಬಣ್ಣನಲ್ಲಿ ಉಂಟಾಯಿತು. ಆದರೆ ಮರುದಿನ ಮುಂಜಾನೆ ದೈವ ಸಂಕೇತವೆಂಬಂತೆ ಈ ಪಿಟೀಲು ಅವನ ತಲೆಯ ಬಳಿಗೇ ತಂದು ಇಟ್ಟಿರುತ್ತದೆ. ಶಿಷ್ಯನಾಗಲು ಬಂದು ಅವನ ಬೆನ್ನಿಗೆ ಬಿದ್ದ ವೆಂಕಟರಮಣ ಅದನ್ನು ಎತ್ತಿಕೊಂಡು ಬಂದು ಅಲ್ಲಿ ಇಟ್ಟಿರುತ್ತಾರೆ. ಈ ಹೃದಯ ಸ್ಪರ್ಶಿಯಾದ ಮಾರ್ಪಾಟು ಮಾಸ್ತಿಯವರು ಅದ್ಭುತ ಭಾವಕ್ಕೆ ಸಾಧ್ಯ.

'ಸುಬ್ಬಣ್ಣ' ತಾನು ಸಂಗೀತ ಕಲಿತು ಮಹಾರಾಜರಿಂದ ಖಿಲ್ಲಿತು ಪಡೆಯಬೇಕೆಂಬುದೊಂದೇ ಅವನ ಚರಮ ಧ್ಯೇಯವಾಗಿತ್ತು. ಇದು ಒಂದು ಲೌಕಿಕ ಶ್ರೇಯಸ್ಸು ನಿಜವಾದ ಕಲಾ ಜೀವಿಯ ಗುರಿ ಅಲ್ಲ ಆತನ ಸಂಗೀತದ ಆಸಕ್ತಿಗೆ ಈ ಖಿಲ್ಲತ್ತುಗಳಿಸುವ ಪ್ರಸಕ್ತಿ ಆಮಿಷದಂತೆ ಕೆಲಸ ಮಾಡಿತು.

ಲಕ್ಷ್ಮಣ ತಾನು ಯಾವ ಆಸೆ ಆಮಿಷಕ್ಕೂ ಸಂಗೀತ ಕಲಿಯಬೇಕೆಂದು ನಿರ್ಧರಿಸಲಿಲ್ಲ. ಬದಲಾಗಿ ತನ್ನ ಗುರುವೊಬ್ಬರು ಹಾಡಿದ ಪೂರ್ವಿರಾಗವನ್ನು ತಾನೂ ಅದರಂತೆಯೇ ರಾಗವನ್ನು ಕರಗತ ಮಾಡಿಕೊಳ್ಳಬೇಕೆಂಬುದರಿಂದ ಹಾಡಲು ಪ್ರಾರಂಭಿಸಿದ ಅಂದರೆ ಇದರಿಂದ ತಿಳಿಯುವುದೆನೆಂದರೆ, ಸುಬ್ಬಣ್ಣ ತಾನು ಸಂಗೀತದಲ್ಲಿ ಸಾಧನೆ ಮಾಡಿ ಒಬ್ಬ ಸಂಗೀತ ಸಾಧಕನಾಗಬೇಕು ಎಂಬುದಲ್ಲ ಅದಕ್ಕೆ ಬದಲಾಗಿ ಅವನು ಮಹಾರಾಜರಿಂದ ಖಿಲ್ಲತ್ತು ಪಡೆಯಬೇಕು ಎಂಬುದು ಆದರೆ ಈ ದೃಷ್ಟಿ ಕಾದಂಬರಿ ಬೆಳೆದಂತೆ ಬೇರೆಯಾಗುತ್ತದೆ. ಸುಬ್ಬಣ್ಣ ಮೊದಲು ಈ ದೃಷ್ಟಿಯಿಂದಲೇ ಸಂಗೀತವನ್ನು ಪ್ರೀತಿಸಿದರು ಅನಂತರ ಅವನು ಸಂಗೀತವನ್ನು ಆರಾಧಿಸುತ್ತಾನೆ. ಇದರಿಂದ ಏನೂ

ತಿಳಿಯುತ್ತದೆ ಎಂದರೆ ಸಂಗೀತದ ಬಗ್ಗೆ ಸುಬ್ಬಣ್ಣನಿಗೆ ಮೊದಲು ಇದದ್ದು ಬರೀ ಪ್ರಶಸ್ತಿಯ ದೃಷ್ಟಿಯಾದರೆ ಅದು ಬದಲಾಗಿ ಅವನು ಸಂಗೀತವನ್ನು ತನ್ನ ಉಸಿರಾಗಿ ಮಾರ್ಪಡಿಸಿ ಕೊಳ್ಳುತ್ತಾನೆ. ಅದೇ ಲಕ್ಷ್ಮಣನಲ್ಲೂ ಸಂಗೀತ ಮೊದಲು ಒಂದು ಸಾಧನೆಯಾಗಿ ಅನಂತರ ಅದೇ ಅವರನ ಜೀವನವನ್ನು ದೈವತ್ವಕ್ಕೆ ಏರಿಸುತ್ತದೆ.

ಸುಬ್ಬಣ್ಣ ಬೇಸರದಿಂದ ಇನ್ನು ಸಂಗೀತವನ್ನು ಮುಂದುವರಿಸಬಾರದೆಂದು ಪಿಟೀಲನು ಹೊಳೆಯಲ್ಲಿ ಬಿಟ್ಟಾಗ ಅದನ್ನು ಮತ್ತೆ ತಂದುಕೊಟ್ಟ ಸಂಗೀತದಲ್ಲಿ ಮುಂದುವರಿಯುವಂತೆ ಮಾಡುತ್ತಾನೆ. ವೆಂಕಟರಮಣ ಇದೇ ಸನ್ನಿವೇಶ ಲಕ್ಷ್ಮಣನಿಗೂ ಬಂತು ಲಕ್ಷ್ಮಣ ತನ್ನ ಹೆಂಡತಿ ಜಯಾ ತೀರಿಕೊಮಡಾಗ ತನ್ನ ತಂಬೂರಿಯ ತಂತಿಗಳನ್ನೆಲ್ಲಾ ಹರಿದು ಹಾಕಿ ಹೋಗಿರುತ್ತಾನೆ. ಇದನ್ನು ಲಕ್ಷ್ಮಣನ ಮನೆಯಲ್ಲಿ ವಾರಾನ್ನಕ್ಕೆಂದು ಇದ್ದ ವೆಂಕಟೇಶ ಅದನ್ನು ತೆಗೆದಿರಿಸಿ ಆತ ಮತ್ತೆ ಬಂದಾಗ ಕೊಡುತ್ತಾನೆ. ಈ ಕಾದಂಬರಿಯಲ್ಲಿ ಬರುವ ಈ ಸನ್ನಿವೇಶಗಳಲ್ಲಿ ಹೋಲಿಕೆ ಅಥವಾ ಸಮ್ಯತೆ ಕಂಡು ಬರುತ್ತದೆ.

ಸಂಸಾರ ಬಂಧನದ ಮಾಯಪಾಶವೇ ಬೇಡವೆಂದು ಸುಭೇದಾರ ಪರಿವಾರದಿಂದಲೇ ಮುಂಚಿನ ದಿನವಿಡೀ ದೂರವಿದ್ದು ಎಲ್ಲೋ ತಲೆಮರೆಸಿಕೊಂಡು ಇದ್ದ ಸುಬ್ಬಣ್ಣ ಆ ಪರಿವಾರ ಊರು ಬಿಟ್ಟು ಮೂರು ಮೈಲು ಹೋದಾಗ ಓಡಿ ಬಂಧು ಲಲಿತೆಯನ್ನು ಕಂಡು ಆಶೀರ್ವದಿಸುವುದು ಈ ಸನ್ನಿವೇಶ ಸುಬ್ಬಣ್ಣ ಸಂಸಾರದ ವ್ಯಾಮೋಹ ಬೇಡವೆಂದು ದೂರ ಹೋದರು ಮತ್ತೆ ಅದರಲ್ಲಿಯೇ ಸಿಲುಕಿಕೊಳ್ಳುವುದರ ನಿದರ್ಶನ ಇದರಿಂದಲೇ ತಿಳಿಯುತ್ತದೆ ಮಾಸ್ತಿ ಬದುಕನ್ನು ಪ್ರೀತಿಸುತ್ತಾರೆ ಎಂಬುದು ಆದರೆ ಈ ರೀತಿಯ ಸನ್ನಿವೇಶ ಅ.ನ.ಕೃ. ಅವರ ಸಂಧ್ಯಾರಾಗದಲ್ಲಿ ಕಂಡು ಬರುವುದಿಲ್ಲ. ಇದು ಕಾದಂಬರಿಯ ಉತ್ಕಟ ರಸಸ್ತಾನಗಳಲ್ಲಿ ಒಂದಾಗಿ ಮಾರ್ಪಟ್ಟಿದೆ.

ಇದೇ ರೀತಿ ಸುಬ್ಬಣ್ಣನಲ್ಲಿ ಇಲ್ಲದ ಒಂದು ಸೂಕ್ಷ್ಮ ಸನ್ನಿವೇಶ. ಮೀನಾಕ್ಷಮಮ್ ಸೊಸೆಯರಿಬ್ಬರನ್ನೂ ಹಳ್ಳಿಗೆ ಕರೆದುಕೊಮಡು ಹೋದಾಗ ಅಲ್ಲಿ ನಡೆಯುವ ಒಂದು ಘಟನೆ ಮುಖ್ಯವಾದುದು ಪದ್ಮ ಹಳ್ಳಿಯ ಊಟವನ್ನು ಹೀಯಾಳಿಸಿದಾಗ ಮೀನಾಕ್ಷಮ್ಮ ರಾಗಿ, ಅಕ್ಕಿ, ಗೋದಿ ಇವು ಮನುಷ್ಯರ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲ. ವಜ್ರದ ಓಲೆ ಕೆಂಪಿನ ಓಲೆಗಳೂ ಯೋಗ್ಯತೆಯನ್ನು ನಿರ್ಣಯಿಸುವುದಿಲ್ಲ, ಮನಸ್ಸು ಚೆನ್ನಾಗಿರಬೇಕು ಅಂತಃಕರಣವಿರಬೇಕು. ಎಂದು ಹೇಳುವ ಸನ್ನಿವೇಶವು ಮನುಷ್ಯನ ವ್ಯಕ್ತಿತ್ವವನ್ನು ಧ್ವನಿಸುತ್ತದೆ.

ಅಭಿವ್ಯಕ್ತಿಯ ದೃಷ್ಟಿಯಿಂದ:-

ಒಂದು ಕತೆ ಶ್ರೇಷ್ಟವಾಗಲು ವಸ್ತು, ಪಾತ್ರ, ಸನ್ನಿವೇಶವಷ್ಟೆ ಮುಖ್ಯವಲ್ಲ. ಕಥೆಗಾರ ಅದನ್ನು ಹೇಗೆ ಅಭಿವ್ಯಕಿಸಿದ್ದಾನೆ. ಎನ್ನುವುದು ಮುಖ್ಯ.

ಮಾಸ್ತಿಯವರು ಅಭಿವ್ಯಕ್ತಿ 'ಸುಬ್ಬಣ್ಣ' ಕಾದಂಬರಿಯಲ್ಲಿ ಹೀಗೆ ನೋಡಬಹುದಾಗಿದೆ.

ಸ್ತ್ರೀ ಜಾತಿಯ ಅಂಗ ಪ್ರತ್ಯಂಗ ಮತ್ತು ಹಾವಭಾವಗಳ ಕಾಮುಖ ವರ್ಣನೆಯನ್ನು ಮಾಡುವ ಪದ್ದತಿಯು ಈಗ ಬಹು ಹೆಚ್ಚಾಗಿದೆ ಈ ಸಂಬಂಧವಾಗಿ ಒಂದು ಸನ್ನಿವೇಶದಲ್ಲಿ ಲೇಖಕರು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುವವರು ಅದು ಬಹು ಗಹನವಾದುದು ಕಲಾಕಾರನು ಎಷ್ಟು ಕುಶಲನಾದರು ಆರ್ಯ ಜೀವನದ ಒಳ್ಳೇಯ ಮನೆತನದ ಆದರ್ಶವನ್ನು ಬಿಡಲಾರರು. ಕಥೆಯು ಎಷ್ಟು ಕಾಲ್ಪನಿಕವಾದರೂ ಅದರಲ್ಲಿ ಬರುವ ಕನ್ಯೆಯರು ಮತ್ತು ಲಲನೆಯರು ತನ್ನ ತಾಯಿ, ಮಗಳು ಸೋದರಿಯಂತೆ ಈ ಕಥೆಯನ್ನು ಓದುವವರು - ಸಹೋದರರ ಸಹೋದರಿಯರು, ಪುತ್ರ - ಪುತ್ರಿಯರು ಇವರ ಮುಂದೆ ಕೂತು ಆಡಬಹುದಾದ ಮಾತುಗಳನ್ನು ಕಥೆಯಲ್ಲಿಯೂ ಆಡಬೇಕು. ಈ ವಿಷಯವಾಗಿ ಲೇಖಕನು ತನ್ನ ಆದರ್ಶವನ್ನು ಬಹು ಉಚ್ಚ ಸ್ಥಾನದಲ್ಲಿ ಇಟ್ಟಿರುವವನು. ಈ ವಿಷಯವಾಗಿ ಲೇಖಕನಿಗೆ ಗೌರವ ತೋರಲು ಅವನ ಮಾತುಗಳಲ್ಲೇ ಹೇಳುವುದು ಉಚಿತವಾಗಿರುವುದು.

"ನನ್ನಲ್ಲಿ ಯೋಗ್ಯತೆಯಿದ್ದರೆ............ವರ್ಣಿಸಬೇಕು"...........-

ಲೇಖಕರು ಲಲಿತೆಯ ಪಾತ್ರವನ್ನು ಕಥೆಯಲ್ಲಿ ಎಲ್ಲೂ ಅಸಾಧಾರಣತೆಯನ್ನು ತೋರಿಸಿ ಲಲಿತೆಯನ್ನು ಅ ತಾರೆಕಳನ್ನಾಗಿ ಮಾಡಿಲ್ಲ ಹಾಗೆ ಮಾಡುವುದರಿಂದ ಲಲಿತೆಯು ಅರಳುತ್ತಿದ್ದಳು. ಆದರರೆ ಲಕ್ಷಾಂತರ ಭಾರತೀಯ ಮಹಿಳೆಯರ ಪ್ರತಿನಿಧಿಯಾಗುತ್ತಿರಲಿಲ್ಲ. ಹಿಂದು ಸಮಾಜದ ಪರಮ ಸ್ವಭಾಗ್ಯವೆಂದರೆ ಮನೆಮನೆಯಲ್ಲಿಯೂ ಲಲಿತೆಯರಂತಹ ದೇವಿಯರು ಇರುವವರು ಇಂತಹ ಚಿತ್ರದಿಂದಲೇ ಮನುಷ್ಯನಿಗೆ ನಾರೀ ಪ್ರತಿಷ್ಠಾದೀಕ್ಷೆ ಲಭಿಸುವುದು.

ಸುಬ್ಬಣ್ಣ ಅಕಿಂಚನನಾಗಿ ಅನಿಕೇತನನಾಗಿ ದಿನದಿಂದ ದಿನಕ್ಕೆ ತಾತ್ಕಾಲೋಪ ಜೀವಿಯಾಗಿ

ಬದುಕುವ ವ್ರತವನ್ನು ಆಯ್ದುಕೊಂಡನು. ನಂಜನಗೂಡನ್ನು ಬಿಟ್ಟು ತೊರೆಯಪುರವನ್ನು ಆರಿಸಿಕೊಂಡನು ಈ ಹೆಸರುಗಳೇ ಸಾಂಕೇತಿಕವೆನಿಸುತ್ತದೆ.

ಸುಬ್ಬಣ್ಣ ಮಕ್ಕಳನ್ನು ಕಳೆದುಕೊಂಡು "ಕಾಗೆ ಮಳೆಯಲ್ಲಿ ನೆನೆದ ಹಾಗೆ" ದು:ಖ ಶೋಕ ಪರಂಪರೆಯಲ್ಲಿ ಸುಬ್ಬಣ್ಣ ನೆನೆದುದಾಯಿತು. ಎಂಥ ಕರುಳು ಮಿಡಿಯುವ ಉಪಮೆ ಕನ್ನಡ ಸಾಹಿತ್ಯ ಲೋಕದಲ್ಲಿ ಸಮರ್ಪಕ ಉಪಮೆಗಳ ಔಚಿತ್ರಯ ಪರಿಷ್ಕರಕ್ಕೆ ಮಾಸ್ತಿಯವರೇ ಕಾಳಿದಾಸರು ಈ ಒಂದು ಉಪಮೆಯಿಂದ ಸುಬ್ಬಣ್ಣ ಅನಿವಾರ್ಯವಾಗಿ ಅನುಭವಿಸಿದ ಈ ಬದುಕಿನ ಅರ್ಥಹೀನ ವಿಧಿಯ ವಿಕಟವಿಲಾಸದಲ್ಲಿ ಸಿಲುಕಿ ತೊಳಲಾಡುವ ವ್ಯಕ್ತಿಯ ನಿರುಪಾಯತೆ ಅಸಹಾಕತೆ ಪೂರ್ಣ ವ್ಯಕ್ತವಾಗುತ್ತದೆ. ಅಲ್ಲಿ ಪಾಲಿಗೆ ಬಂದದ್ದರಲ್ಲಿ ಸುಖಕ್ಕಿಂತ ದು:ಖವೇ ಹೆಚ್ಚು ಅವನ ಬಾಳೊಂದು "ದೈನ್ಯದ ತಪಸ್ಸಾ"ಯಿತು. ಇದು ಬಾಳಿನ ಅಸಂಗತ ನಿರರ್ಥಕತೆ ಒಂದು ವ್ಯಂಗ್ಯವಾದ ಭಾಷೆ ಕಣ್ಣೀರಿನಲ್ಲಿ ಬರೆದಂತೆ.

ಈ ತಪಸ್ಸಿನ ಫಲವೇನು? ಒಟ್ಟಾರೆ ಹಠವಾದಿಯಾದ ಅಂತರ್ಮುಖಿಯಾದ ಸುಬ್ಬಣ್ಣನ ಕಠಿಣ ಮನಸ್ಸು ತನ್ನನ್ನೇ ಅರಿಯದೆ ಸ್ವಲ್ಪ ಮೃದುವಾಯಿತು. ಅವನ ಈ ಹೃದಯ ಕೃಷಿ ಯಾರಿಂದ ನೆರವೇರಿತು.

ಈ ಸಂದರ್ಭದಲ್ಲಿ ಮಾಸ್ತಿಯವರು ಒಂದು ಜೀವಾಳದ ಸೂತ್ರವನ್ನು ಆಡಿದ್ದಾರೆ "ಮನುಷ್ಯ ಆಯಸ್ಸನ್ನುಎಲ್ಲಿ ಬೇಕಾದರು ಕಳೆಯಬಹುದು ಅವನು ಕಷ್ಟ ಪಡಬೇಕಾದುದಿಲ್ಲ. ಕಷ್ಟವಿರುವುದೆಲ್ಲ ಸರಿಯಾದ ರೀತಿಯನ್ನು ಹುಡುಕುವುದರಲ್ಲಿ" ಎಂದು ಹೇಳಿದ್ದಾರೆ ಇದು ಒಬ್ಬ ಅನುಭವಿ ಲೇಖಕರ ಮಾತಿಗಿದೆ ಏಕೆಂದರೆ ಮಾಸ್ತಿ ಜೀವನವನ್ನು ನೋಡಿದಾಗ ಅವರಿಗೆ ಇಂತಹ ಕಷ್ಟಗಳು ಎದುರಾಗಿದ್ದವು ಅದರ ಅನುಭವದ ಮಾತುಗಳು ಇವು ಎಂದರೆ ತಪ್ಪಾಗಲಾರದು.

ಸುಬ್ಬಣ್ಣ " ವೆಂಕಟರಮಣನ ನಡೆಯನ್ನು ನೋಡಿ ನೀಲಸಾನಿಯನ್ನು ಜ್ಞಾಪಿಸಿಕೊಳ್ಳುತ್ತಾನೆ ಲೇಖಕರು "ಇಂಥ ಸಂಬಂಧಗಳಿಂದ ಹೃದಯದಲ್ಲಿ ಸ್ನೇಹ ಮೊಳೆಯುವುದೆಂದು" ಹೇಳಿರುವ ಮಾತು ಮಾರ್ಮಿಕವಾದ ಮಾತು, ಶೋಕ ಪರಂಪರೆಯಲ್ಲಿ ನಿಂತ ಸುಬ್ಬಣ್ಣನಿಗೆ "ಕತ್ತಲೆಯಲ್ಲಿ ಒಂಟಿಯಾಗಿ ಸಿಕ್ಕಿಕೊಂಡ ಮಕ್ಕಳ ಹೋಲಿಕೆ ಕೊಟ್ಟಿದ್ದಾರೆ ಇದು ಮಾನವನ ಅಸಂಗತ ಜೀವನದಲ್ಲಿಯ ಅಸಹಾಯಕತೆಗೆ ಅತ್ಯಂತ ಸಮರ್ಪಕವಾಗಿದೆ.

ಬಾಳಿನ ಆರ್ಯಸತ್ಯದ ಒಂದು ಮುಖವನ್ನು ಹಿಂದಿನ ಅಧ್ಯಾಯದಲ್ಲಿ ಹೇಳಲಾಗಿದೆ ಇದರ ಇನ್ನೊಂದು ಮುಖವನ್ನು ಸುಬೇದಾರರ ಬಾಯಿಯಿಂದ ಲೇಖಕರು ಆಡಿಸಿದ್ದಾರೆ, ಅದು ಬಾಳಿನ ಅಷ್ಟೆ ಮೂಲಭೂತ ಸಿದ್ಧಾಂತವೂ ಹೌದು ಅದೆಂದರೆ "ಸ್ವಾಮಿ ಬಿಟ್ಟು ಪಡುವ ಸುಖವಲ್ಲ ಕಟ್ಟಿಕೊಂಡು ಆ ಮೇಲೆ ಬಿಡುವುದು ಅದರ ಸುಖ " ಈ ತತ್ವದ ಶ್ರದ್ದೆ ಇಷ್ಟೆ ; ಸಂಸಾರ ಮಾಡದಿದ್ದರೆಇಷ್ಟು ಸಂಸ್ಕಾರ ಹೇಗಾಗುತ್ತಿತ್ತು? ಇಲ್ಲಿ ಬಂದಿರುವ ಮಾತುಗಳು ಸರ್ವಕಾಲಿಕ ಸತ್ಯದ ಮಾತುಗಳಾಗಿವೆ.

ಒಟ್ಟಾರೆ ಈ ಕಾದಂಬರಿಯ ತಾಂತ್ರಿಕ ಯಶಸ್ಸು ಬೆರಗುಗೊಳಿಸುವಂತದ್ದು ಕತೆಯ ಸಾಮಾಗ್ರಿಗೆ ದೂರ ಮತ್ತು ಸಾಮಿಪ್ಯಗಳೆರಡನ್ನೂ ಒಟ್ಟಿಗೆ ಸಾಧಿಸಲು ಲೇಖಕರು ಆನೇಕ ವಿಧಾನಗಳನ್ನು ಬಳಸಿಕೊಳ್ಳುತ್ತಾರೆ. ಕತೆಯ ಕಾಲ ಕಟ್ಟು ನಿಟ್ಟಾಗಿ ಸಮಕಾಲೀನವಲ್ಲ. ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯಲ್ಲಿ ಅದರ ಪ್ರಾರಂಭವಿದ್ದರೆ ಅವರ ಮೊಮ್ಮೊಕ್ಕಳ ಕಾಲದಲ್ಲಿ ಅದರ ಮುಕ್ತಾಯವಿದೆ, ಇದರಿಂದಾಗಿ ಕಾಲಗತಿಯ ಪರಿಣಾಮವಾಗಿ ಬರುವ ಪರಿವರ್ತನೆಯ ಸ್ವರೂಪವನ್ನು ಗುರುತಿಸುವುದು ಲೇಖಕರಿಗೆ ಸಾಧ್ಯವಾಗುತ್ತದೆ. ನಿರೂಪಕನ ನಿಲುವಿನಲ್ಲಿಯ ಅನುಮಾನದ ಅಂಶಗಳು ಅವನ ವಿಶ್ವಾಸಾರ್ಹತೆ ಹೆಚ್ಚುವುದಕ್ಕೆ ಕಾರಣವಾಗುತ್ತದೆ. ಇದು ಕಾದಂಬರಿಯಲ್ಲಿಯ ತಂತ್ರದ ಆಧುನಿಕತೆಯ ಲಕ್ಷಣ.

'ಸುಬ್ಬಣ್ಣ' ದಂತೆ ಸಂಧ್ಯಾರಾಗದ ಶ್ರೇಷ್ಟ ಕಥನ ಕಲೆ ಮತ್ತು ಭಾಷಾ ಶೈಲಿ ಸಮಕಾಲೀನ ವಿಮರ್ಶಕರನ್ನು ಗೆದ್ದುಕೊಂಡವು ಸಂಧ್ಯಾರಾಗ ಪ್ರಶಸ್ತಿಯ ಲೇಖಕರಲ್ಲೊಬ್ಬರಾದ ಎ.ಎಂ. ಇನಾಂದರರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತ ಪಡಿಸಿದರು. "ನಾನು ಈ ಕಾದಂಬರಿಯನ್ನು ಓದಿ ಮುಗಿಸಿದಾಗ ನನ್ನ ಮೇಲೆ ಎಲ್ಲಕ್ಕೂ ಹೆಚ್ಚು ಪರಿಣಾಮ ಬೀರಿದ ಸಂಗತಿಯೆಂದರೆ ಕತೆ ತುಂಬಿಕೊಂಡ ದೀರ್ಘಕಾಲ ಇದು ಓದುವಾಗ ತಿಳಿಯುವುದೇ ಇಲ್ಲ ಹಿಂತಿರುಗಿ ವಿಚಾರ ಮಾಡಿದಾಗ ಮಾತ್ರ ಒಂದು ಪೀಳಿಗೆಯೇ ಮುಗಿದು ಇನ್ನೊಂದು ಹುಟ್ಟಿ ಕುಗ್ಗುತ್ತಿರುವ ಕಲ್ಪನೆ ಬರುತ್ತದೆ. ಕೃಷ್ಣರಾಯರು ಕಥಾ ಪ್ರವಾಹವನ್ನು ಎಷ್ಟೊಂದು ಸಮರ್ಥವಾಗಿ ನಿರ್ವಹಿಸಬಲ್ಲರೆಂಬುದಕ್ಕೆ ಸಂಧ್ಯಾರಾಗ ಸಾಕ್ಷಿಯಾಗಿದೆ ಅರ್ಥಪೂರ್ಣವಾದ ಸನ್ನಿವೇಶಗಳ ಕುಶಲ ಆಯ್ಕೆಗೆ ಕಲೆಯು ವೇಗ ಸರಿಯಾಗಿ ಹೊಂದಿಕೊಳ್ಳುವುದರಿಂದ ಕಾಲಗತಿಯ ಅರಿವು ಮಾಯವಾಗಿ ಒಂದು ಅನನ್ಯವಾದ ಸರಳತೆಯ ಅನುಭವವಾಗುತ್ತದೆ".

ಈ ಕಾದಂಬರಿಯ ಅ.ನ.ಕೃ. ಅವರ ಪ್ರಾತಿನಿಧಿಕ ಕಾದಂಬರಿಯಾಗಿದೆ. ಅವರ ರೀತಿಯಲ್ಲಿ ಒಳಿತು ಕೆಡಕುಗಳೆರಡನ್ನೂ ಇಲ್ಲಿ ಕಾಣಬಹುದಾಗಿದೆ. ಸಂಗೀತಗಾರನೊಬ್ಬರನ ಜೀವನ ಈ ಕಾದಂಬರಿಗೆ ವಸ್ತುವಾಗಿದೆ. ಲಕ್ಷ್ಮಣನ ಕಲಾ ಜೀವನದೊಂದಿಗೆ ಅವನ ಸುತ್ತಲಿನ ಜೀವನದ ಪ್ರತಿ ಕ್ರಿಯೆಗಳನ್ನು ಚಿತ್ರಿಸುವುದು ಈ ಕಾದಂಬರಿಯ ಇನ್ನೊಂದು ಮುಖವಾಗಿದೆ. ತೀವ್ರ ಭಾವನಾವಶಕತೆಯ ಪರಿಣಾಮವಾಗಿ ಈ ಎರಡೂ ಮುಖಗಳಲ್ಲಿ ಕಾದಂಬರಿ ತನ್ನ ಸಫಲ್ಯತೆಯನ್ನು ಸಾಧಿಸಿದೆ ಲಕ್ಷ್ಮಣನ ವ್ಯಕ್ತಿತ್ವದ ಘಟನೆತೆಗೆ ವಾಸ್ತವತೆಯ ತಳಹದಿ ದೊರೆತಿಲ್ಲ ಅವನಿಗೆ ದು:ಖಗಳೆಲ್ಲ ಬೇರೆ ಕ್ಷೇತ್ರ ಪಾತ್ರಗಳು ಕೆಲವು ಗುಣಗಳ ಪ್ರತಿನಿಧಿಗಳಾಗಿರುವುದರಿಂದ ಆ ಮಟ್ಟಿಗೆ ತಮ್ಮ ಕೆಲಸ ಮಾಡಿ ಕೈ ತೊಳೆದುಕೊಳ್ಳುತ್ತವೆ ಅತಿ ಆದರ್ಶವಾದಿತ್ವ ಸಕ್ಕರೆಯ ಪಾಕದಂತೆ ಮೆತ್ತಿಕೊಂಡಿರುವುದರಿಂದ ಈ ಪಾತ್ರಗಳು ಕನಸಿನಲ್ಲಿಯಂತೆ ವರ್ತಿಸುತ್ತದೆ. ಬಹುಶ: ಈ ಗುಣವೇ ಕಾದಂಬರಿಯ ಜನಪ್ರಿಯತೆಗೆ ಕಾರಣವಾಯಿತು.

ಈ ಕಾದಂಬರಿಯ ಗುಣ ಅದರ ಬಂಧದಲ್ಲಿಯೆ, ಮೊಟ್ಟಮೊದಲಿಗೆ ಕಥೆಯ ಎಲ್ಲ ಸೂತ್ರಗಳೂ ಒಮ್ಮುಖವಾಗಿ ಸಾಗಿರುವ ಕಾದಂಬರಿಯೆಂದರೆ ಇದೆ ಎಂದು ಹೇಳಬಹುದು ಉಪಕಥೆಗಳ ಗೊಂದಲವಿಲ್ಲದೆ ಒಂದೇ ಕತೆ ತನ್ನ ಎಲ್ಲ ಅಂಗಗಳೊಂದಿಗೆ ಪರಿಪೂರ್ಣವಾಗಿ, ಪ್ರಾರಂಭದಿಂಧ ಅಂತ್ಯದವರೆಗೂ ಭಾವಗೀತದಿಂದ ಮೂಡಿ ಬಂದಿದೆ. ಈ ಗುಣಕ್ಕೆ ಒಪ್ಪಿಹಾಕಿದಂತೆ ಅವರ ಲಲಿತ ಶೈಲಿ ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಹಿತಮಿತವಾದ ವರ್ಣನೆಗಳು, ಚತುರವಾದ ಸಂಭಾಷಣೆ ಕತೆಯ ತೀವ್ರವಾದ ಓಟಗಳಲ್ಲಿ ಕತೆಯನ್ನು ಓದುಗರಿಗೆ ಆತ್ಮೀಯವಾಗಿ ಮಾಡಲು ಸಹಕಾರಿಯಾಗುತ್ತದೆ.

ಅ.ನ.ಕೃ. ಅವರ ಶೈಲಿ ಅವರ ಅನೇಕ ಮಾಧ್ಯಮಗಳಲ್ಲಿ ಒಂದು ಸಂಧ್ಯಾರಾಗದ ನಾಯಕ ಲಕ್ಷ್ಮಣನ ಕೊನೆ ಎಂಬುದನ್ನು ಎಷ್ಟೊಂದು ಚುಟುಕಿನಲ್ಲಿ ಆದರೆ ಅಷ್ಟೆ ಪ್ರಭಾಚ ಪೂರ್ವಕವಾಗಿ ಮತ್ತು ವೇಗವಾಗಿ ಕೊಂಡೊಯ್ದಿದ್ದಾರೆ.

"..............ಆನಂದ ಭೈರವಿ ಮುಗಿಯುವುದಕ್ಕೆ ತಡ ನೇರವಾಗಿ ಪೂರ್ವಿಯಾ ರಾಗವನ್ನೆತ್ತಿಕೊಂಡನು. ....ರಾಗ ಮೊದಲನೆಯ ಕಾಲದಿಂದ ಎರಡನೆಯ ಕಾಲವನ್ನು

ಮುಟ್ಟಿತು ಲಕ್ಷ್ಮಣನ ಕಣ್ಣುಗಳಲ್ಲಿ ಧಾರೆಯಾಗಿ ಆಶ್ರುಪ್ರವಾಹ..................ರಾಗ ಎರಡನೆಯ ಕಾಲದಿಂದ ಮೂರನೆಯ ಕಾಲಕ್ಕೆ ಹೋಯಿತು. ಲಕ್ಷ್ಮಣನ ಕಣ್ಣೀರು ಧಾರೆ ನಿಂತಿತ್ತು. ರಾಗೋಚಿತವಾದ ವೇತವು ಅವನ ಹಾಡಿಕೆಯಲ್ಲಿ ಕಾಣ ಬರುತ್ತಿದ್ದರೂ ಮನಸ್ಸು ಶಾಂತವಾಗಿತ್ತು. ರಾಗ ಮುಗಿಯುವ ಹೊತ್ತಿಗೆ ತಂಬೂರಿಯ ತಾರಕ ತಂತಿ ಹಾರಿತ್ತು. ಆದರೆ ಠೇಂಕಾರವು ಸಭಾಸದರನ್ನು ಎಚ್ಚರಗೊಳಿಸಿತ್ತು. ತಂಬೂರಿ ಲಕ್ಷ್ಮಣನ ಕೈಯಿಂದ ಜಾರಿ ನೆಲಕ್ಕುರುಳಿತು. ಲಕ್ಷ್ಮಣನೂ ಅದರ ಜೊತೆಯಲ್ಲಿಯೇ ನೆಲಕ್ಕುರುಳಿದರನು.

"ಜಯಾ ...."

ಎಂಬ ಎರಡೇ ಅಕ್ಷರವು ಎಲ್ಲರ ಕಿವಿಯನ್ನು ಮುಟ್ಟಿತು ಅದೇ ಮಂಗಳ ಕಛೇರಿಯ ಕೊನೆಗೊಂಡಿತ್ತು. ಗಾಯಕನು ಸಂಧ್ಯಾರಾಗದಲ್ಲಿ ತನ್ನ ಆತ್ಮ ಪ್ರಣತಿಯನ್ನು ತೇಲಿಬಿಟ್ಟಿದ್ದನು. ▯▯▯ ತನ್ನ ಜೀವನದ ಸಂಧ್ಯಾರಾಗವನ್ನು ಹೇಳಿ ಮುಗಿಸಿದನು.

ಇದು ಸಂಗೀತಗಾರ ಲಕ್ಷ್ಮಣನ ಜೀವನದ ಕೊನೆಯ ರುದ್ರ ಮನೋಹರ ಘಳಿಗೆ ಕಲಾವಿದನ ಹೃದಯವು ಎಷ್ಟು ಮೃದು, ಮನಸ್ಸು ಎಷ್ಟೂ ತೀವ್ರಗ್ರಾಹಿ ಮತ್ತು ಅವನ ಆವೇಶಗಳು ಎಂಥ ಸ್ಫೋಟಕ ಶಕ್ತಿಯುಳ್ಳವುಗಳು ಎಂಬುದನ್ನು ಅ.ನ.ಕೃ. ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಸುಬ್ಬಣ್ಣನ ಅಂತ್ಯ ದೇವರ ಗುಡಿಯ ಮರದ ಹತ್ತಿರ ಎರಡು ಕೈಗಳನ್ನು ಮುಗಿದು ಕೊಂಡಿರುವಾಗ ಉಂಟಾದರೆ ಲಕ್ಷ್ಮಣನ ಅಂತ್ಯ.

'ಜಯಾ' ಎಂಬ ಎರಡು ಅಕ್ಷರಗಳನ್ನು ಉಚ್ಚರಿಸುತ್ತಿದ್ದಂತೆ ಆಗುತ್ತವೆ ಎರಡು ಕಾದಂಬರಿಯಗಳು ಅಭಿವ್ಯಕ್ತಿಯ ದೃಷ್ಟಿಯಿಂದ ಅಸಾಧರಣವಾದ ಕಾದಂಬರಿಗಳಾಗಿವೆ.

ಹೀಗೆ ಈ ಎರಡೂ ಕಾದಂಬರಿಗಳು ವಸ್ತು, ಪಾತ್ರ, ಸನ್ನಿವೇಶ ಮತ್ತು ಅಭಿವ್ಯಕ್ತಿಯಲ್ಲಿ ಕೆಲವು ಸಾಮ್ಯ, ವೈಷಮ್ಯಗಳನ್ನು ಹೊಂದಿದ್ದು ಈ ಎರಡೂ ಕಾದಂಬರಿಗಳು ಕೂಡ ಕನ್ನಡ ಸಾಹಿತ್ಯ ಕ್ಷೇತ್ರದ ಅತ್ಯುತ್ತಮ ಮೈಲಿಗಲ್ಲುಗಳಾಗಿವೆ.

ಅಧ್ಯಾಯ – 7

ಉಪ ಸಂಹಾರ

ಮಾಸ್ತಿ ಯವರ 'ಸುಬ್ಬಣ್ಣ' ಮತ್ತು ಅ.ನ.ಕೃ. ಅವರ ಸಂಧ್ಯಾರಾಗ ಕಾದಂಬರಿಗಳನ್ನು ಈ ಅಧ್ಯಾಯನವನ್ನು ಸೇರಿ 8 ಅಧ್ಯಾಯಗಳಲ್ಲಿ ಬಿಡಿ ಬಿಡಿಯಾಗಿ ನಿರೂಪಿಸಲಾಗಿದೆ.

ಯಾವುದೇ ಕಲೆಯಾಗಲೀ, ಕಲಾವಿದನ ಮನಸ್ಸು ಬಲಿತಂತೆ ಅದನ್ನು ಪ್ರತಿಫಲಿಸುತ್ತಾ ಹೋಗುತ್ತದೆ. ಸುಬ್ಬಣ್ಣನ ಪೀಟಿಲು ವಾದನದಲ್ಲೂ ಆತನ ಆತ್ಮದಲ್ಲಿ ಬೆಳಗುತ್ತಿದ್ದ ಆಧ್ಯಾತ್ಮ ಜ್ಯೋತಿಯ ಪ್ರಕಾಶ ಹರಡಲಾರಂಭಿಸುತ್ತದೆ ಇವನ ಹಾಗೂ ಸಂಗೀತದ ನಂಟನ್ನು ನಿರೂಪಿಸುವ ಒಂದು ಮನ ಮುಟ್ಟುವ ಸನ್ನಿವೇಶ ಕಥೆಯಲ್ಲಿದೆ ಎಂಥಾಹ ಭಾವೋದ್ವೇಗದ ಕ್ಷಣಗಳಲ್ಲಿ ಸುಬ್ಬಣ್ಣನ ಕಲೆ ಮೇರು ಗಿರಿಯಂತೆ ಪ್ರಕಾಶಿಸುತ್ತಿದೆ. ಸಾಹುಕಾರನ ಮನೆಯಲ್ಲಿ ಸುಬ್ಬಣ್ಣನವರು 'ವಿರಹೇ ತವ ದೀನಾ' ವನ್ನು ಪೀಟಿಲಿನಲ್ಲಿ ನುಡಿಸುವುದರ ವರ್ಣನೇ ಅಮೋಘವಾದದ್ದು ಲೇಖಕರರೆ ಸಂಗೀತದ ರಸಾನುಭೂತಿಯಾಗಿ ಅದನೇ ಅನುಭವಿಸುತ್ತಾ ಆ ವರ್ಣನೆಯನ್ನು ಮಾಡಿದ್ದಾರೆನುವಷ್ಟು ಪ್ರಭಾವಶಾಲಿಯಾಗಿ ಮೂಡಿಬಂದಿದೆ. ಇಂತಹ ಸಂದರ್ಭಗಳೂ ಅನೇಕ ಕಡೆ ಕಥೆಯಲ್ಲಿ ಇವೆಯಾದರೂ ಅನವಶ್ಯಕವೆಂದು ತೋರುವುದಿಲ್ಲ.

ಸಂಧ್ಯಾರಾಗದ ಲಕ್ಷ್ಮಣನ ಆದರ್ಶ ಕಲಾಜೀವನ ಅದನ್ನು ಚರ್ಚಿಸಲು ಅಧ್ಯಯನವನ್ನು ಕೈಗೊಳ್ಳಲಾಗಿದೆ. ರಾಮಚಂದ್ರ, ಪದ್ಮ ಇವರನ್ನು ಬಿಟ್ಟರೆ ಸಂಧ್ಯಾರಾಗದಲ್ಲಿಯ ಪ್ರತಿಯೊಂದು ವ್ಯಕ್ತಿಗೂ ಜೀವನ ಕಲೆಯು ಸಾಧಿಸಿದೆ. ಪೂರ್ಣಾವಸ್ಥೆಗೆ ಮುಟ್ಟಿದೆಯೆನ್ನುವಷ್ಟು ಆ ಕಲೆ ಅವರಿಗೆ ಫಲಿಸಿದೆ ಇಂತಹ ಆದರ್ಶ ವ್ಯಕ್ತಿಗಳನ್ನು ಜೀವನದಿಂದ ದೂರವಾಗಿಲ್ಲದ ವ್ಯಕ್ತಿಗಳನ್ನು ವಾಙ್ಮಯದಲ್ಲಿ ಚಿತ್ರಿಸಿದ ಸಾಹಿತಿಯು ನಿಜವಾಗಿಯೂ ಧನ್ಯನು ಕೃತಕೃತ್ಯನು.

ಮೊದಲನೆಯ ಅಧ್ಯಾಯದಲ್ಲಿ ಈ ವಿಷಯವನ್ನು ಆಯ್ದುಕೊಂಡ ಉದ್ದೇಶವನ್ನು ಲೇಖಕರ ಮನೋಧರ್ಮದ ಪರಿಚಯ ಈ ಕೃತಿಗಳಲ್ಲಿ ವಿಷಯಗಳು ನಿರೂಪಣೆಗೊಂಡಿರುವ ಬಗೆ ಹಾಗೂ ವಿಷಯದ ವ್ಯಾಪ್ತಿಯನ್ನು ವಿವರಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಮಾಸ್ತಿಯವರ ಬದುಕು ಬರಹ ಅವರ ಸಾಧನೆಯನ್ನು, ಈ ಕಾದಂಬರಿಯನ್ನು ಬರೆಯಲು ಆದ ಪ್ರೇರಣೆ ಪ್ರಭಾವಗಳನ್ನು ಕಾದಂಬರಿಯಲ್ಲಿ ಅವರು ಮಾಡಿದ ಸಾಧನೆ ಅವರು ಬರೆದಿರುವ ಕಥೆ ಕಾದಂಬರಿಗಳು ಹಾಗೂ ಇವರು ಪಡೆದಿರುವ ಪ್ರಶಸ್ತಿ ಪುರಸ್ಕಾರಗಳು ಮುಂತಾದವುಗಳನ್ನು ಕುರಿತು ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಅ.ನ.ಕೃ ಅವರ ಬದುಕು ಬರಹ ಅವರ ಸಾಧನೆ ಈ ಕಾದಂಬರಿ ತಂದುಕೊಟ್ಟ ಜನಪ್ರಿಯತೆ ಇವರ ಪ್ರಶಸ್ತಿ ಪುರಸ್ಕಾರಗಳು ಕಾದಂಬರಿ ಬರೆಯಲು ಆದ ಪ್ರೇರಣೆ ಪ್ರಭಾವಗಳು ಮುಂತಾದವುಗಳನ್ನು ಕುರಿತು ಚರ್ಚೆಯಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ 'ಸಂಧ್ಯಾರಾಗ' ಮತ್ತು 'ಸುಬ್ಬಣ್ಣ' ಈ ಎರಡೂ ಕಾದಂಬರಿಗಳ ಪರಿಚಯ ಇಬ್ಬರು ಕಾದಂಬರಿಕಾರರೂ ಕಥೆಯ ವಸ್ತುವನ್ನು ಹೇಳಿರುವ ಬಗೆ ಅವರು ಬಳಸಿರುವ ತಂತ್ರ ಮುಂತಾದವುಗಳನ್ನು ಕುರಿತ ಸಂಕ್ಷಿಪ್ತ ಮಾಹಿತಿಯನ್ನು ಕೊಡಲಾಗಿದೆ.

ಐದನೇಯ ಅಧ್ಯಾಯದಲ್ಲಿ ಎರಡೂ ಕಾದಂಬರಿಗಳಲ್ಲಿ ಕಂಡುಬರುವ ಸನ್ನಿವೇಶ ಮತ್ತು ಪಾತ್ರ ಚಿತ್ರಣವನ್ನು ಕುರಿತು ದೀರ್ಘವಾಗಿ ವಿವೇಚಿಸಲಾಗಿದೆ. ಈ ಕಾದಂಬರಿಗಳಲ್ಲಿನ ನಾಯಕರ ಧೋರಣೆಗಳು ಇವುಗಳಿಗೆ ಪೂರಕವಾಗಿ ಬರುವಂತಹ ಇನ್ನಿತರ ಪಾತ್ರಗಳನ್ನು ಕುರಿತು ಚರ್ಚಿಸಲಾಗಿದೆ. ಸ್ತ್ರೀ ಪಾತ್ರಗಳು ಮತ್ತು ಪುರುಷ ಪಾತ್ರಗಳ ವಿಶೇಷತೆಯನ್ನು ಸಂದರ್ಭ ಸನ್ನಿವೇಶಕ್ಕನುಗುಣವಾಗಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯವು ನಿಬಂಧದ ಪ್ರಮುಖ ಅಂಶವನ್ನು ಎತ್ತಿ ಹಿಡಿಯುತ್ತದೆ ಅಂದರೆ " ಸಂಧ್ಯಾರಾಗ" ಮತ್ತು "ಸುಬ್ಬಣ್ಣ" ಕಾದಂಬರಿಗಳಲ್ಲಿ ಕಂಡುಬರುವ ಸಾಮ್ಯ ವೈಶಮ್ಯಗಳನ್ನು ಕುರಿತು ವಿವರಿಸಲು ಅನುಕೂಲವಾಗುವಂತೆ ಈ ಅಧ್ಯಾಯವನ್ನು ನಾಲ್ಕು ಪ್ರಮುಖ ಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ ವಸ್ತುವಿನ ಸ್ವರೂಪ, ಪಾತ್ರ ಸಂಬಂಧ, ಸನ್ನಿವೇಶ ಮತ್ತು ಅಭಿವ್ಯಕ್ತಿ ಸಂಬಂಧವಾದದು ಈ ನಾಲ್ಕು ನೆಲೆಗಳಲ್ಲಿ ಮೊದಲನೆಯದಾದ ವಸ್ತುವಿನ ಸ್ವರೂಪದಲ್ಲಿ ಎರಡೂ ಕಾದಂಬರಿಗಳಲ್ಲಿ ವಸ್ತುವಿಗಿರುವ ಸೌಮ್ಯತೆ, ವೈಷಮತೆಗಳನ್ನು ವಿವರಿಸಲಾಗುವುದಲ್ಲದೆ ಅದನ್ನು ಲೇಖಕರು ನಿರೂಪಿಸಿರುವ ಬಗೆ, ತಳೆಯುವ ನಿರ್ಧಾರ ಇತ್ಯಾದಿಗಳನ್ನು ಕುರಿತು

ಚರ್ಚಿಸಲಾಗಿದೆ. ಎರಡನೆಯ ವಿಭಾಗವಾದ ಪಾತ್ರ ಸಂಬಂಧದ ವಿವೇಚನೆಯಲ್ಲಿ ಎರಡೂ ಕಾದಂಬರಿಗಳ ಪಾತ್ರಗಳಿಗಿರುವ ಪರಸ್ಪರ ಹೋಲಿಕೆ ವ್ಯತ್ಯಾಸಗಳನ್ನು ಕುರಿತು ಚರ್ಚಿಸಲಾಗಿದೆ.

ಪಾತ್ರದ ಗುಣ ಸ್ವಭಾವವು ಲೇಖಕರ ನಿಲುವನ್ನು ಎತ್ತಿ ಹಿಡಿಯಲು ಹೇಗೆ ಸಮರ್ಥವಾಗಿದೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ ಮೂರು ಮತ್ತು ನಾಲ್ಕನೇಯ ವಿಭಾಗದಲ್ಲಿ ಸನ್ನಿವೇಶ ಮತ್ತು ಅಭಿವ್ಯಕ್ತಿ ಸಂಬಂಧವಾಗಿ ಎರಡೂ ಕೃತಿಗಳನ್ನು ಹೋಲಿಸಿ ವಿವರಿಸಲಾಗಿದೆ ಈ ಕವಿಗಳಲ್ಲಿರುವ ಸೃಜನಶೀಲತೆಯ ಮಟ್ಟ, ಕಾವ್ಯಾತ್ಮಕ ಭಾಷೆ ಅದನ್ನು ಬಳಸಿಕೊಂಡಿರುವ ಬಗೆ, ಶೈಲಿ ಲೇಖಕರ ಮಾರ್ಗ ಇತ್ಯಾದಿಗಳನ್ನು ಕುರಿತು ಚರ್ಚಿಸಲಾಗಿದೆ.

ಹೀಗೆ ಈ ಅಧ್ಯಾಯನದಲ್ಲಿ "ಸುಬ್ಬಣ್ಣ" ಮತ್ತು ಸಂಧ್ಯಾರಾಗ" ಕಾದಂಬರಿಗಳನ್ನು ತೌಲನಿಕ ದೃಷ್ಠಿಯಿಂದ ವಿಶ್ಲೇಷಿಸಲಾಗಿದೆ.

ಈ ಎರಡೂ ಕಾದಂಬರಿಗಳ ವಸ್ತು ಒಂದೇ ಆಗಿದೆ ಮಾಸ್ತಿಯವರು ಒಬ್ಬ ಕಲಾವಿದನ ಸಾಧನೆಯನ್ನು ಹೇಳುವುದರ ಮೂಲಕ ಬದುಕಿನ ಅರ್ಥವನ್ನು ಕೊಟ್ಟಿದ್ದಾರೆ ಆತನ ಕಷ್ಟ ಸಂಕಟಗಳು ಇವುಗ್ಳನ್ನು ಮನುಷ್ಯ ಹೇಗೆ ಸ್ವೀಕರಿಸಬೇಕೆಂಬುದನ್ನು ನಿರೂಪಿಸಿದ್ದಾರೆ ಅಲ್ಲದೆ ರಾಮರಾಯರಿಂದ ಕೇಳಿದ ಕಥೆಯನ್ನು ತಮ್ಮ ಕಲಾತ್ಮಕತೆಗೆ ಒಪ್ಪುವಂತೆ ಹೆಚ್ಚು ಕೌಶಲ್ಯದಿಂದ ಕೋಮಲತೆಯಿಂದ ಚಿತ್ರಿಸಿದ್ದಾರೆ ಸುಬ್ಬಣ್ಣನನ್ನು ಕೊನೆಗೆ ತತ್ವಜ್ಞಾನಿಗಳಾದರೆಂದೇ ನನ್ನ ಭಾವನೆ " ಎಂದಿದ್ದಾರೆ ಮಾಸ್ತಿಯವರು.

ಸುಬ್ಬಣ್ಣ ನ ಸಂಸಾರದ ಸುಖ ಒಂದೊಂದು ಅವರನ್ನು ರಾಟೆಯ ಓಟದಲ್ಲಿ ಸೇರಿಸಿಕೊಂಡಿತ್ತು ಅವರು ಅದಕ್ಕೆ ಸಿಕ್ಕಬಾರದೆಂದು ಕೇಳುತ್ತ ಸೇರಿಯೂ ಸೇರದ ಹಾಗೆ ಇರಬೇಕು ಎಂದು ಪ್ರಯತ್ನ ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದರು. ಹೀಗೆ ಸೇರಿಯೂ ಸೇರದ ಹಾಗೆ ಇರಬೇಕೆಂಬುದೆ ಸುಬ್ಬಣ್ಣನ ಜೀವನ ಸಾಧನೆಯ ಸಂದೇಶ ಈ ಸಂದರ್ಭದಲ್ಲಿ ನನಗೆ ಒಂದು ಉದಾಹರಣೆ ಕೊಡಬೇಕು ಎನ್ನಿಸುತ್ತಿದೆ ಅದು 'ನೀರ ತಾವರೆ' ಸುಬ್ಬಣ್ಣನ ಬದುಕು ನೀರ ತಾವರೆಯ ರೀತಿಯದ್ದು ಅಂದರೆ ತಾವರೆ ನೀರಲಿದ್ದರು ನೀರಿಗೆ ಅಂಟಿದಂತೆ ಇರುವುದಿಲ್ಲ ಹಾಗೆ ಸುಬ್ಬಣ್ಣ ಸಂಸಾರದಲ್ಲಿದ್ದರು ಅಂಟಿದಂತೆ ಕಂಡು ಬರುವುದಿಲ್ಲ.

ಅ.ನ.ಕೃ. ಅವರ ಕಾದಂಬರಿಯಲ್ಲಿ ಒಬ್ಬ ಸಂಗೀತಗಾರನ ಸಾಧನೆಗೆ ಹೆಚ್ಚು ಒತ್ತು ಕೊಡಲಾಗಿದೆ ಸಮಾಜದಲ್ಲಿ ನಡೆಯುವ ವಾಸ್ತವಿಕ ಘಟನೆಗಳನ್ನೆತ್ತಿಕೊಂಡು ಸಹಜವಾಗಿ ಕೃತ್ರಿಮವೆನಿಸಿದ ಹಾಗೆ ಮಹೋನ್ನತ ಧ್ಯೇಯ ಸಾಧಕನಾದ ಒಬ್ಬ ಕಲಾವಿದನ ಆಂತರಿಕ ಜೀವನದ ಒಳತೋಟಿಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಇಲ್ಲಿನ ಪಾತ್ರಗಳು ತಾವು ತಳೆದ ನಿರ್ಧಾದರ ಬಗ್ಗೆ ಸಂಪೂರ್ಣ ವಿಶ್ವಾಸವಿದೆ ಆದ ಕಾರಣ ಎಲ್ಲ ಪಾತ್ರಗಳೂ ಯಾವುದೇ ಗೊಂದಲಕ್ಕೆ ಒಳಗಾಗುವುದಿಲ್ಲ ಈ ಮಾತಿಗೆ ವ್ಯತಿರಿಕ್ತವಾಗಿ ಆಧುನಿಕ ಜೀವನದ ಪ್ರಭಾವಕ್ಕೊಳಗಾದ ರಾಮಚಂದ್ರನ ಪಾತ್ರ ಕಂಡು ಬರುತ್ತದೆ ಈ ಪಾತ್ರವು ತನ್ನ ಕೃತ್ಯಕ್ಕಾಗಿ ಕೊನೆಗೆ ಪಶ್ಚಾತಾಪ ಪಡುತ್ತದೆಯಾದರೂ ಆದರೆ ಕಾಲ ಮಿಂಚಿ ಹೋಗಿರುತ್ತದೆ. ರಾಮಚಂದ್ರ ಕಸಕ್ಕಿಂತ ಕೀಳಾಗಿ ಕಾಣುತ್ತಿದ್ದ ವೆಂಕಟೇಶ ಮತ್ತು ಲಕ್ಷ್ಮಣರೇ ರಾಮಾನ ಮಾರ್ಯದೆ ಉಳಿಸುತ್ತಾರೆ, ಇದರಿಂದ ತಿಳಿಯುವುದೆನೆಂದೆರ ಕೊನೆಗೆ ಗೆಲ್ಲುವುದು ಸತ್ಯವೇ ಎಂಬುದು. ಇದು ಕಥೆಯ ಮುಖ್ಯ ಸಂಗತಿಗಳಲ್ಲಿ ಒಂದಾಗಿದೆ.

ಒಟ್ಟಿನಲ್ಲಿ ಎರಡೂ ಕಾದಂಬರಿಗಳಲ್ಲಿ ಯಾವುದು ಶ್ರೇಷ್ಠ ಮತ್ತು ಯಾವುದು ಶ್ರೇಷ್ಠವಲ್ಲ ಎಂಬುದಕ್ಕಿಂತ ವಿಷಯ ನಿರೂಪಣೆಯಲ್ಲಿನ ಪ್ರಭುತ್ವದ ಔಚಿತ್ಯವೇ ಕಾದಂಬರಿಯ ಶ್ರೇಷ್ಠತೆಗೆ ಕಾರಣವಾಗಿದೆ.

ಎರಡೂ ಕಾದಂಬರಿಯ ಪಾತ್ರಗಳು ಸನ್ನಿವೇಶಗಳುಉ ಹಾಗೂ ಇಬ್ಬರ ನಿರೂಪಣ ಶೈಲಿ, ಅಭಿವ್ಯಕ್ತಿ ತಂತ್ರ ಉತ್ತಮವಾಗಿ ಮೂಡಿ ಬಂದಿದ್ದು ವಿಶಿಷ್ಟತೆಯನ್ನು ಸಾಧಿಸಿವೆ ಅಲ್ಲದೆ ಮನುಷ್ಯ ಸ್ವಭಾವದ ವಿವಿಧ ನೆಲೆಗಳ ಸೂಕ್ಷ್ಮವಾದ ಅಧ್ಯಯನವನ್ನು ಕಾದಂಬರಿ ಮಾಧ್ಯಮ ಅತ್ಯಂತ ಯಶಸ್ವಿಯಾಗಿ ಪೂರೈಸಬಲ್ಲದು ಎಂಬುದನ್ನು ಈ ಎರಡೂ ಕಾದಂಬರಿಗಳಲ್ಲಿ ಕಾಣುತ್ತೇವೆ.

ಹೀಗಾಗಿ 'ಸುಬ್ಬಣ್ಣ' ಮತ್ತು 'ಸಂಧ್ಯಾರಾಗ' ಎರಡೂ ಕಾದಂಬರಿಗಳು ಸಾಹಿತ್ಯ ಲೋಕದ ಎರಡು ಮಿನುಗುವ ನಕ್ಷತ್ರಗಳು ಅವರಲ್ಲಿ ಮೊದಲನೆಯ ಸ್ಥಾನ 'ಸುಬ್ಬಣ್ಣ' ಕ್ಕೆ ಮೀಸಲಾದರೆ 'ಸಂಧ್ಯಾರಾಗ' ನಂತರದ ಸ್ಥಾನವನ್ನು ಪಡೆದಿದೆ. ಹಾಗೆಯೇ ಕಾದಂಬರಿ ಕ್ಷೇತ್ರದ ಮಹಾಸಾಗರಕ್ಕೆ ಎರಡೂ ಪ್ರಮುಖ ನದಿಗಳಾಗಿ ಇವು ಸೇರ್ಪಡೆಗೊಂಡಿವೆ ಎನ್ನಬಹುದು.

ಅಧ್ಯಾಯ -8
ಗ್ರಂಥ ಋಣ

1. ಮಾಸ್ತಿಯವರ ಕಥೆಗಳು	:	ಎ.ಎನ್. ಮೂರ್ತಿರಾವ್
2. ಗೌರೀಶ್ ಕಾಯ್ಕಿಣಿ ಸಮಗ್ರ ಸಾಹಿತ್ಯ ಸಂಪುಟ -5 ವಿಚಾರ ವಿಮರ್ಶೆ	:	ಸಂಪಾದಕರು ವಿಷ್ಣು ನಾಯಕ
3. ಕನ್ನಡ ಕಥನ ಸಾಹಿತ್ಯ ಕಾದಂಬರಿ	:	ಜಿ.ಎಸ್. ಆಮೂರ ಶ್ರೀ ಹರಿ ಪ್ರಕಶನ ಧಾರವಾಡ
4. ರಸ ಚೇತನ	:	ಸಂಪಾದಕ , ಶ.ಮಂ. ಕೃಷ್ಣರಾಯ ಗೋವಾ ಕನ್ನಡ ಸಂಘ (ರಿ) ಮಡಗಾಂವ್ ಗೋವಾ
5. ಕರ್ನಾಟಕ ಸಾಹಿತ್ಯ ಸಂಪದ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕ್ರತ ಲೇಖಕರು ಶ್ರೀನಿವಾಸ ಪ್ರೋ.ಜಿ.ಎಸ.ಸಿದ್ದಲಿಂಗಯ್ಯ.	:	ಸಂಪಾದಕ : ಡಾ॥ ಪ್ರಧಾನ ಗುರುದತ್ತ
6. ಮಾಸ್ತಿ ಪ್ರಶಸ್ತಿ ಮಹನೀಯರು ರಂಗನಾಥನ್ ಸಂಪುಟ -1	:	ಸಂಪಾದಕರು : ಮಾವಿನಕೆರೆ
7. ಸಮಗ್ರ ವಿಮರ್ಶೆ	:	ಡಾ॥ ಗಿರಡ್ಡಿ ಗೋವಿಂದರಾಜು.